ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಆದೇಶದಲ್ಲಿ 2010-11ನೇ ಸಾಲಿನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹೊಸ ಯೋಜನೆಯಾದ ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಶಿಕ್ಷಣ ಮತ್ತು ಸಂಶೋಧನೆಯ ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲು ಕೆ-ಫಿಸ್ಟ್ . Karnataka Fund for Improvement of Science & Technology Infrastructure in Higher Educational Institutions (K-FIST) ನಿಧಿಯನ್ನು ರೂ. 500.00 ಲಕ್ಷಗಳ ವೆಚ್ಚದಲ್ಲಿ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಆದೇಶದಲ್ಲಿ ಮೊದಲನೇ ಕಂತಾಗಿ ರೂ. 250.00 ಲಕ್ಷಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹಕ್ಕೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ಪತ್ರದಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರು 2010-11ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಹೊಸ ಯೋಜನೆಯಾದ ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸುಧಾರಣೆಗೆ ಕೆ-ಫಿಸ್ಟ್ (K-FIST) ನಿಧಿಯನ್ನು ಸ್ಥಾಪಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ. 500 ಲಕ್ಷಗಳಲ್ಲಿ ಬಾಕಿ ಇರುವ ರೂ. 250.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿನ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ಕೆ-ಫಿಸ್ಟ್ ಯೋಜನೆಯ ಅನುಷ್ಠಾನಕ್ಕಾಗಿ ಪ್ರಸಕ್ತ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 3425-60-600-0-03-ಕೆ-ಫಿಸ್ಟ್-059-ಇತರೇ ಖರ್ಚು (ಯೋಜನೆ) ಇದರಡಿ ಒದಗಿಸಿರುವ ಅನುದಾನದಲ್ಲಿ ಪ್ರಸಕ್ತ ಸಾಲಿನ ಕೊನೆಯ ಕಂತಿನ ಮೊತ್ತ ರೂ. 250.00 ಲಕ್ಷವನ್ನು ಬಿಡುಗಡೆ ಮಾಡಲು ನೀಡಲಾದ ಒಪ್ಪಿಗೆಯಂತೆ ಪ್ರಸ್ತಾವನೆಯನ್ನು ಪರಿಶೀಲಿಸದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 35 ವಿತ್ರಮ 2010, ಬೆಂಗಳೂರು, ದಿನಾಂಕ 10-02-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ವತಿಯಿಂದ ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದ ಉನ್ನತ ಶಿಕ್ಷಣ ಮತ್ತು ಸಂಶೋಧನೆ ಕೈಗೊಳ್ಳಲು ರಾಜ್ಯದ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಅರ್ಹ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಹಂತದಲ್ಲಿ ವಿಜ್ಞಾನ ಬೋಧನೆ ಮತ್ತು ಸಂಶೋಧನೆಗೆ ಅಗತ್ಯ ಮೂಲ ಸೌಕರ್ಯಗಳ ಉನ್ನತೀಕರಣಕ್ಕಾಗಿ ಆರ್ಥಿಕ ನೆರವನ್ನು ನೀಡುವ ಸಲುವಾಗಿ ಕೆ-ಫಿಸ್ಟ್ (Karnataka Fund for Improvement of Science & Technology Infrastructure in Higher Educational Institutions) ನಿಧಿಯನ್ನು ಸ್ಥಾಪಿಸಿ ಯೋಜನೆಯನ್ನು ಅನುಷ್ಟಾನಗೊಳಿಸಲು 2010-11ನೇ ಸಾಲಿನ ಕೊನೆಯ ಕಂತಾಗಿ ರೂ. 250.00 ಲಕ್ಷಗಳ (ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಸಹಾಯಾನುದಾನವನ್ನು ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

1) ಈ ಅನುದಾನವನ್ನು ಆಯವ್ಯಯದ ಲೆಕ್ಕ ಶೀರ್ಷಿಕೆ 3425-60-600-0-03-ಕೆ-ಫಿಸ್ಟ್-059-ಇತರೇ ಖರ್ಚು (ಯೋಜನೆ) ಇದರಡಿ ಸಹಾಯಾನುದಾನ ಭರಿಸತಕ್ಕದ್ದು.
2) ವೈಜ್ಞಾನಿಕ ಅಧಿಕಾರಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು. ಇವರು ಸ್ವೀಕೃತ ರಶೀದಿಯಲ್ಲಿ ಹಣವನ್ನು ಸರ್ಕಾರದ ಅಧೀನ ಕಾರ್ಯದರ್ಶಿಯವರ ಮೇಲು ರುಜುವಿನೊಂದಿಗೆ ಹಣ ಸೆಳೆಯಬಹುದು.
3) ಈಗ ಬಿಡುಗಡೆ ಮಾಡಿದ ಹಣವನ್ನು ಉದ್ದೇಶಿತ ಯೋಜನೆಗೆ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಕಾರ್ಯಗತಗೊಳಿಸುವ ಚಟುವಟಿಕೆಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
4) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಲೆಕ್ಕ ಪರಿಶೋಧಕರಿಂದ ಪರೀಕ್ಷಿಸಲ್ಪಟ್ಟ ಲೆಕ್ಕ ಪತ್ರಗಳ ಉಪಯೋಗತಾ ಪ್ರಮಾಣ ಪತ್ರಗಳನ್ನು ಯೋಜನೆ ಅನುಷ್ಠಾನದ ತಕ್ಷಣ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
5) ಉದ್ದೇಶಿತ ಕಾರ್ಯಕ್ರಮಕ್ಕೆ ಖರ್ಚಾಗದ ಬಾಬ್ತು ಉಳಿಸಿಕೊಂಡಲ್ಲಿ, ಅದನ್ನು ಸರ್ಕಾರದ ಗಮನಕ್ಕೆ ತರದಿದ್ದಲ್ಲಿ ಸದರಿ ಮೊತ್ತಕ್ಕೆ ಬ್ಯಾಂಕುಗಳು ನೀಡುವ ಸರಳ ಬಡ್ಡಿಯೊಂದಿಗೆ ಸರ್ಕಾರಕ್ಕೆ ಪಾವತಿಸತಕ್ಕದ್ದು.

6) ಉದ್ದೇಶಿತ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದಂತಹ ಅನುದಾನದ ಲೆಕ್ಕಪತ್ರಗಳನ್ನು ಮಂಜೂರು ಮಾಡುವ ಅಧಿಕಾರಿಯು ಸಮೀಕ್ಷೆಗಾಗಿ ಕೋರಿದಲ್ಲಿ ತಪ್ಪದೇ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 45 ವೆಚ್ಚ-2/11, ದಿನಾಂಕ: 08.02.2011 ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 524

ಕೆ. ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ
ಮತ್ತು ತಂತ್ರಜ್ಞಾನ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೀದರ್ ಜಿಲ್ಲೆ ಚಿಟಗುಪ್ಪ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ (ಪರಿಷ್ಕೃತ-)ನ್ನು ಸರ್ಕಾರದ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂ.ನಅಇ:23:ಗುಅಪ್ರಾ:2007: ದಿನಾಂಕ: 10-04-2007.

2) ಮುಖ್ಯಾಧಿಕಾರಿಗಳು, ಪುರಸಭಾ ಯೋಜನಾ ಪ್ರಾಧಿಕಾರ ಇವರ ಪತ್ರ ಸಂಖ್ಯೆ:ಪುಯೋಪುಚಿ:ಮಾಪ್ಲಾ/2010-11/255, ದಿನಾಂಕ: 7-8-2010.

3) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಏಕ ಕಡತ ಸಂಖ್ಯೆ:ನಯೋ/ಉನಿ(ಯೋವಿ):ಚಿಟಗುಪ್ಪ/ಮಾ.ಪ್ಲಾ/2010-11ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಚಿಟಗುಪ್ಪ ಜಿಲ್ಲೆ, ಚಿಟಗುಪ್ಪ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(1)ರನ್ವಯ ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಚಿಟಗುಪ್ಪ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(ಡಿ)ರನ್ವಯ ಪರಿಷ್ಕರಿಸಿ, ಮಹಾ ಯೋಜನೆಗೆ (ಪರಿಷ್ಕೃತ-1)ನ್ನು ರೂಪಿಸಿ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಿದೆ.

ಮೇಲೆ ಓದಲಾದ (3)ರ ಏಕ ಕಡತದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಚಿಟಗುಪ್ಪ ನಗರ ಯೋಜನಾ ಪ್ರದೇಶದ ಜನಸಂಖ್ಯೆಯು 2001ರ ಜನಗಣತಿಯಂತೆ 24,419 ಇದ್ದು, 2021ನೇ ಇಸವಿಗೆ 40,000 ಜನಸಂಖ್ಯೆ ಆಗಬಹುದೆಂದು ಅಂದಾಜಿಸಿ, ಮಹಾಯೋಜನೆ (ಪರಿಷ್ಕೃತ-1) (ತಾತ್ಕಾಲಿಕ) ಯನ್ನು ರೂಪಿಸಲಾಗಿದೆ. ಚಿಟಗುಪ್ಪ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು ಒಟ್ಟು 2646 ಹೆಕ್ಟೇರ್‌ಗಳಷ್ಟು ಇರುತ್ತದೆ. ಪ್ರತಿ ಹೆಕ್ಟೇರ್‌ಗೆ 80 ಜನರಂತೆ ಪರಿಗಣಿಸಿ, 2021ನೇ ಇಸವಿಗೆ 40,000 ಜನರಿಗೆ ಬೇಕಾಗಬಹುದಾದ ನಗರೀಕರಣದ ಪ್ರದೇಶ (ಕನರ್‌ಬೇಷನ್ ಏರಿಯಾ) ಕ್ಕಾಗಿ ಒಟ್ಟು 500 ಹೆಕ್ಟೇರ್ ಪ್ರದೇಶವನ್ನು ಪ್ರಸ್ತಾಪಿಸಿ ಮಹಾಯೋಜನೆಯನ್ನು ರೂಪಿಸಲಾಗಿದೆ. ಚಿಟಗುಪ್ಪ ಪಟ್ಟಣದ ಜನಸಂಖ್ಯೆಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಹಾಲಿ ಬೆಳವಣಿಗೆಯ ಗತಿ ರಸ್ತೆಗಳ ಹಾಲಿ ಪರಿಚಲನೆ ವ್ಯವಸ್ಥೆಯ ಸಮಸ್ಯೆಗಳನ್ನು ವಿಶ್ಲೇಷಿಸಿ ಯೋಜನಾ ತತ್ವಗಳಿಗನುಗುಣವಾಗಿ ಹಾಗೂ ಮಹಾಯೋಜನೆ ತಯಾರಿಕೆ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 9 ರಿಂದ 12 ರವರೆಗೆ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ, ನಗರದ ಮುಂದಿನ ಬೆಳವಣಿಗೆಗೆ ವಿವಿಧ ಉಪಯೋಗಗಳಿಗೆ ಬೇಕಾಗಬಹುದಾದ ಭೂಮಿಯನ್ನು ಈ ಕೆಳಕಂಡಂತೆ ಕಾಯ್ದಿರಿಸಿ ಮಹಾ ಯೋಜನೆ ತಯಾರಿಸಿದೆ. ಸದರಿ ಯೋಜನೆಯಲ್ಲಿ ವಸತಿಗಾಗಿ 282.48 ಹೆಕ್ಟೇರ್ (ಶೇ. 56.50), ವಾಣಿಜ್ಯಕ್ಕಾಗಿ 19.72 ಹೆಕ್ಟೇರ್ (ಶೇ. 3.94), ಕೈಗಾರಿಕೆಗಾಗಿ 3.79 ಹೆಕ್ಟೇರ್ (ಶೇ. 0.76), ಸಾರ್ವಜನಿಕ ಅರೆ ಸಾರ್ವಜನಿಕ್ಕಾಗಿ 37.3 ಹೆಕ್ಟೇರ್ (ಶೇ. 7.46), ಉದ್ಯಾನವನ/ಬಯಲು ಜಾಗೆಗಾಗಿ 45.72 ಹೆಕ್ಟೇರ್ (ಶೇ. 9.14), ಸಾರ್ವಜನಿಕ ಸೌಲಭ್ಯಕ್ಕಾಗಿ 1.58 ಹೆಕ್ಟೇರ್ (ಶೇ.0.32) ಹಾಗೂ ಸಾರಿಗೆ ಮತ್ತು ಸಂಪರ್ಕಕ್ಕಾಗಿ 109.40 ಹೆಕ್ಟೇರ್ (ಶೇ. 21.88) ವಿಸ್ತೀರ್ಣವನ್ನು ನಿಗದಿಪಡಿಸಲಾಗಿದೆ. ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಲು ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ. ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ – 1961ರ ಕಲಂ 13(2) ರನ್ವಯ ಸದರಿ ಯೋಜನೆಯನ್ನು ತಾತ್ಕಾಲಿಕ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಈ ವಿಷಯವನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 131 ಗುಅಪ್ರಾ 2010 ಬೆಂಗಳೂರು, ದಿನಾಂಕ 15-02-2011

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆ, ಚಿಟಗುಪ್ಪ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆಗೆ (ಪರಿಷ್ಕೃತ-1)ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2004ರ ಪ್ರಕರಣ 13ಡಿ ಮತ್ತು 13(1)ರನ್ವಯ ಸರ್ಕಾರವು ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮಹಾಯೋಜನೆ (ಪರಿಷ್ಕೃತ-1)ಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 525

ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ : 5ನೇ ವೇತನ ಆಯೋಗದ ವರದಿಯನ್ವಯ ಸರ್ಕಾರಿ ಮತ್ತು ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳ ಸ್ನಾತಕೋತ್ತರ ಪದವಿ ಪಡೆದ ಬೋಧಕ ಸಿಬ್ಬಂದಿ ವೇತನ ಶ್ರೇಣಿ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : 1. ದಿನಾಂಕ: 15-07-2009 ರ ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಗಳ (ಡಿ.ಎಡ್.,) ನೌಕರರ ಸಂಘ ರವರ ಮನವಿ ಸಂಖ್ಯೆ: 87/2009-10.

2. ದಿನಾಂಕ: 09-07-2009, 04-11-2009, 02-12-2009 ಹಾಗೂ 14-10-2010 ರ ಡಿ.ಎಸ್.ಇ.ಆರ್.ಟಿ. ನಿರ್ದೇಶಕ ರವರ ಪತ್ರಗಳ ಸಂಖ್ಯೆ : ಶಿತ2/ವೇತನಶ್ರೇಣಿ ಬದಲಾವಣೆ/29-2007-08.

ಪ್ರಸ್ತಾವನೆ:

1. ಮೇಲೆ (1) ರಲ್ಲಿ ಓದಲಾದ ಮನವಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳ ನೌಕರರ ಸಂಘದವರು 5ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ವೇತನವನ್ನು ಪರಿಷ್ಕರಿಸುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ ಮೇಲೆ (2) ರಲ್ಲಿ ಓದಲಾದ ಪ್ರಸ್ತಾವನೆಗಳಲ್ಲಿ 5 ನೇ ವೇತನ ಆಯೋಗದ ಶಿಫಾರಸ್ಸಿನಂತೆ, ಸರ್ಕಾರಿ ಮತ್ತು ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳ ಸ್ನಾತಕೋತ್ತರ ಪದವಿ ಪಡೆದ ಬೋಧಕ ಸಿಬ್ಬಂದಿಯ ವೇತನ ಶ್ರೇಣಿ ಪರಿಷ್ಕರಣೆ ಮಾಡುವಂತೆ ಶಿಫಾರಸ್ಸು ಮಾಡಿ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ ಬೆಂಗಳೂರು ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಅಧೀಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರುಗಳ ವೇತನಶ್ರೇಣಿಯಲ್ಲಿ ವ್ಯತ್ಯಾಸವಿದೆ. ಅಂತೆಯೇ ಶಿಕ್ಷಕರ ತರಬೇತಿ ಸಂಸ್ಥೆಗಳ ಪ್ರಶಿಕ್ಷಕರುಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ವೇತನಶ್ರೇಣಿಯಲ್ಲೂ ವ್ಯತ್ಯಾಸವಿರುತ್ತದೆ. 5ನೇ ವೇತನ ಆಯೋಗವು ಈ ಕೆಳಕಂಡಂತೆ ಶಿಫಾರಸ್ಸು ಮಾಡಿದೆ.

> "3.8533 ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಹೊರಡಿಸಿರುವ ಸುತ್ತೋಲೆ ದಿನಾಂಕ: 04.02.1999ರಲ್ಲಿ ಅನುದಾನಿತ ಶಿಕ್ಷಕ ತರಬೇತಿ ಸಂಸ್ಥೆಗಳ ಅಧೀಕ್ಷಕರು (ಪ್ರಾಚಾರ್ಯರು) ಹಾಗೂ ಪ್ರಶಿಕ್ಷಕರುಗಳಿಗೆ (ಉಪನ್ಯಾಸಕರು) ಶಿಕ್ಷಣ ವಿಷಯದಲ್ಲಿ ಸ್ನಾತಕೋತ್ತರ ಪದವಿ ಕಡ್ಡಾಯಗೊಳಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಅವರ ವೇತನ ಶ್ರೇಣಿಯಲ್ಲಿನ ಬದಲಾವಣೆ ಕುರಿತು ಆಡಳಿತ ಇಲಾಖೆ ಪರಿಶೀಲಿಸುವುದು ಸೂಕ್ತ."

2. ಸರ್ಕಾರಿ ಮತ್ತು ಅನುದಾನಿತ ಶಿಕ್ಷಕ ತರಬೇತಿ ಸಂಸ್ಥೆಗಳ ಕರ್ತವ್ಯ ನಿರತ ಸಿಬ್ಬಂದಿಗಳಿಗೆ ವೇತನಶ್ರೇಣಿಯನ್ನು ಪರಿಷ್ಕರಿಸಿದಲ್ಲಿ ಕರ್ತವ್ಯ ನಿರತ 171 ಬೋಧಕ ಸಿಬ್ಬಂದಿಗಳಿಗೆ ರೂ. 23.23 ಲಕ್ಷಗಳ ಹಾಗೂ 86 ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿದ್ದಲ್ಲಿ ರೂ. 38.89 ಲಕ್ಷಗಳ ಹೆಚ್ಚುವರಿ ಅನುದಾನದ ಅವಶ್ಯಕತೆಯಿರುತ್ತದೆ.

3. 1981 ರ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸರ್ಕಾರಿ/ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಬೋಧಕ ಹುದ್ದೆಗಳು ಪ್ರೌಢ ಶಾಲೆಯ ಬೋಧಕ ಹುದ್ದೆಗಳು ಸಮಾನಾಂತರ ಹುದ್ದೆಗಳಾಗಿರುತ್ತವೆ. ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಅಧೀಕ್ಷಕರ ಹುದ್ದೆ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳಿಗೆ ಸಮಾನಾಂತರ ಹುದ್ದೆಗಳಾಗಿರುತ್ತದೆ.

4. 1995 ರಿಂದ ಎನ್.ಸಿ.ಟಿ.ಇ. ನಿಯಮಗಳು ಜಾರಿಗೆ ಬಂದಿದ್ದು 2007ರಲ್ಲಿ ಎನ್.ಸಿ.ಟಿ.ಇ. ನಿಯಮಗಳಲ್ಲಿನ ಅಪೆಂಡಿಕ್ಸ್ – 2ರಲ್ಲಿಯೂ ಡಿ.ಇಡಿ ಕಾಲೇಜಿನ ಬೋಧಕ ಸಿಬ್ಬಂದಿಗಳಿಗೆ ಸ್ನಾತಕೋತ್ತರ ಪದವಿಯನ್ನೇ ಮುಂದುವರೆಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 366 ಪಿಟಿಐ 2010, ಬೆಂಗಳೂರು, ದಿನಾಂಕ 11-02-2011

ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಹಾಗೂ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿಗಳ ವೇತನ ಶ್ರೇಣಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಈ ಕೆಳಕಂಡಂತೆ ಪರಿಷ್ಕರಿಸಿ ಹಾಗೂ ಹುದ್ದೆಗಳನ್ನು ಮರು ಪದನಾಮೀಕರಿಸಿ ಆದೇಶಿಸಲಾಗಿದೆ.

ಈಗಿರುವ ಪದನಾಮ	ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ	ಮರು ಪದನಾಮೀಕರಿಸಿದ ಪದನಾಮ	ಪರಿಷ್ಕರಿಸಿದ ವೇತನಶ್ರೇಣಿ
ಪ್ರಶಿಕ್ಷಕರು	ರೂ. 8825 – 16000	ಉಪನ್ಯಾಸಕರು	ರೂ. 11400 – 21600
ಅಧೀಕ್ಷಕರು	ರೂ. 11400 – 21600	ಪ್ರಾಂಶುಪಾಲರು	ರೂ. 14050 –25050

ಷರತ್ತುಗಳು

1. ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅರ್ಹತೆಯನ್ನು ಹೊಂದಿರುವ ಬೋಧಕ ಸಿಬ್ಬಂದಿಯು ಎನ್.ಸಿ.ಟಿ.ಇ. ನಿಯಮಾವಳಿಗಳಂತೆ ಅವರುಗಳು ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಹಾಗೂ ಸ್ಥಳದಲ್ಲಿಯೇ ಮುಂದುವರೆಯತಕ್ಕದ್ದು.
2. ಅನುದಾನಿತ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಎನ್.ಸಿ.ಟಿ.ಇ. ನಿಗದಿಪಡಿಸಿರುವ ವಿದ್ಯಾರ್ಹತೆಗನುಸಾರವಾಗಿ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಭರ್ತಿ ಮಾಡಿಕೊಳ್ಳತಕ್ಕದ್ದು.
3. ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಪ್ರಶಿಕ್ಷಕರು ಪ್ರೌಢಶಾಲಾ ಸಹ ಶಿಕ್ಷಕ ವೃಂದದ ಸಿಬ್ಬಂದಿಗಳಾದ್ದರಿಂದ ಅವರನ್ನು ಖಾಲಿ ಇರುವ ಪ್ರೌಢಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಆಯಾ ಆಯುಕ್ತಾಲಯದ ಆಯುಕ್ತರುಗಳಿಗೆ ಅನುಮತಿಸಿದೆ.
4. ಸರ್ಕಾರದ ಈ ಸಂಸ್ಥೆಗಳಿಗೆ ಅಗತ್ಯವಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಆದೇಶಿಸಲಾಗಿದೆ.

5. ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳಲ್ಲಿರುವ ವಿಶೇಷ ಶಿಕ್ಷಕರುಗಳಿಗೆ (ವೃತ್ತಿಶಿಕ್ಷಣ, ದೈಹಿಕ ಶಿಕ್ಷಣ, ಚಿತ್ರಕಲೆ ಇತ್ಯಾದಿ) ಈ ಮೇಲಿನಂತೆ ವೇತನ ಮೇಲ್ದರ್ಜೆಗೇರಿಸುವ ಪ್ರಸ್ತುತ ಪ್ರಸ್ತಾವನೆ ಅನ್ವಯಿಸುವುದಿಲ್ಲ.

ಈ ಆದೇಶವನ್ನು ದಿನಾಂಕ: 30–11–2010ರ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 463 ಸೇವೆಗಳು–2/2010, ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎನ್. ಸೋಮಶೇಖರ್

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ

ಪಿ.ಆರ್. 526

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಜವಾಹರ್‌ಲಾಲ್ ನೆಹರು ತಾರಾಲಯವು ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ನೂತನ ತಾರಾಲಯ (ಖಗೋಳ ಪರಿವೀಕ್ಷಣಾ ಕೇಂದ್ರ)ವನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಂಬಂಧಿಸಿದಂತೆ ಸನ್ಮಾನ್ಯ ಮುಖ್ಯಮಂತ್ರಿಯವರ 2010–11ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 158.
2. ನಿರ್ದೇಶಕರು, ಜವಹರ್‌ಲಾಲ್ ನೆಹರು ತಾರಾಲಯ, ಬೆಂಗಳೂರು. ಇವರ ಪತ್ರ ಸಂಖ್ಯೆ: DP/EST/072/2010-11, ದಿನಾಂಕ: 21.07.2010.
3. ತೋಟಗಾರಿಕಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ತೋಇ 350 ತೋಇವಿ 2010, ದಿನಾಂಕ: 08.02.2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ 2010–11ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 158 ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು **"ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ನೂತನ ತಾರಾಲಯವನ್ನು ಸ್ಥಾಪಿಸಲು ರೂ. 1.00 ಕೋಟಿ ನೀಡಲಾಗುವುದು"** ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಪತ್ರದಲ್ಲಿ ನಿರ್ದೇಶಕರು, ಜವಹರ್‌ಲಾಲ್ ನೆಹರು ತಾರಾಲಯ, ಬೆಂಗಳೂರು. ಇವರು ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ರೂ. 22.00 ಲಕ್ಷಗಳ ವೆಚ್ಚದಲ್ಲಿ ನೂತನ ತಾರಾಲಯ (ಖಗೋಳ ಪರಿವೀಕ್ಷಣಾ ಕೇಂದ್ರ)ವನ್ನು ಸ್ಥಾಪಿಸಲು ಅನುಮತಿ ಹಾಗೂ ಸಹಾಯಾನುದಾನ ಮಂಜೂರು ಮಾಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ಕರ್ನಾಟಕ ಸರ್ಕಾರ ಸಚಿವಾಲಯದ ತೋಟಗಾರಿಕಾ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ ಜವಹರ್‌ಲಾಲ್ ನೆಹರು ತಾರಾಲಯ, ಬೆಂಗಳೂರು. ಈ ಸಂಸ್ಥೆಯ ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ನೂತನ ತಾರಾಲಯ (ಖಗೋಳ ಪರಿವೀಕ್ಷಣಾ ಕೇಂದ್ರ) ವನ್ನು ಸ್ಥಾಪಿಸಲು ಕೆಲವೊಂದು ಷರತ್ತುಗಳ ಮೇರೆಗೆ ಅನುಮತಿ ನೀಡಿರುತ್ತದೆ.

ಜವಹರ್‌ಲಾಲ್ ನೆಹರು ತಾರಾಲಯದ ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ರೂ. 22.00 ಲಕ್ಷಗಳ ವೆಚ್ಚದಲ್ಲಿ ನೂತನ ತಾರಾಲಯ (ಖಗೋಳ ಪರಿವೀಕ್ಷಣಾ ಕೇಂದ್ರ) ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 12 ವಿತ್ರಮ 2010, ಬೆಂಗಳೂರು, ದಿನಾಂಕ 11–02–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಜವಹರ್‌ಲಾಲ್ ನೆಹರು ತಾರಾಲಯ, ಬೆಂಗಳೂರು. ಈ ಸಂಸ್ಥೆಯ ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ರೂ. 22.00 ಲಕ್ಷಗಳ ಮೊತ್ತದಲ್ಲಿ ನೂತನ ತಾರಾಲಯ (ಖಗೋಳ ಪರಿವೀಕ್ಷಣಾ ಕೇಂದ್ರ)ವನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೀಡಲಾಗಿದೆ

ಷರತ್ತುಗಳು

1) ನೂತನ ಖಗೋಳ ಪರಿವೀಕ್ಷಣಾ ಕೇಂದ್ರವನ್ನು The Tubular Trusses is created by using nuts and bolts and all the structures dismantled by temporary basis ಮಾದರಿಯಲ್ಲಿ ನಿರ್ಮಿಸತಕ್ಕದ್ದು.
2) ನೂತನ ಪರಿವೀಕ್ಷಣಾಲಯದ ಒಳಾಂಗಣ ಮತ್ತು ಹೊರಾಂಗಣವನ್ನು ಅಲಂಕಾರಿಕ ಗಿಡಗಳಿಂದ ಶೃಂಗರಿಸಿ ಮತ್ತು ತೋಟಗಾರಿಕೆಗೆ ಪೂರಕವಾಗುವಂತಹ ಇನ್ನಿತರೆ ಚಟುವಟಿಕೆಗಳನ್ನು ಕೈಗೊಂಡು ನಿರ್ಮಿಸತಕ್ಕದ್ದು.
3) ಜವಹರ್‌ಲಾಲ್ ನೆಹರು ತಾರಾಲಯದ ವತಿಯಿಂದಲೇ ಇವುಗಳ ನಿರ್ವಹಣೆ ಭದ್ರತೆ ಮತ್ತು ಇತರೆ ಸೌಕರ್ಯಗಳನ್ನು ಕಲ್ಪಿಸಿಕೊಂಡು ಗಿರಿಧಾಮ ಸ್ವತ್ತುಗಳಿಗೆ/ಉದ್ಯಾನವನಕ್ಕೆ ಧಕ್ಕೆಯಾಗದ ರೀತಿಯಲ್ಲಿ ನಿರ್ಮಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ 1 ಟಿಎಫ್‌ಪಿ 2008, ದಿನಾಂಕ: 16/05/2008 ರಡಿ ಸರ್ಕಾರದ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಬೋರಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 527

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub: Establishment of BT Fishing Schools in the State-release of Government grant.

Read: 1) Government Order No. ITD 58 MDA 2008, dated 18-07-2009.

2) Government Order No. ITD 01 MDA 2010(P), dated 03-06-2010, and dt: 04-12-2010.

3) The e-mail dt: 24-12-2010 received from Director, IBAB.

PREAMBLE:

As per the Millennium Biotech Policy-II, in the Government Order read at (1) above, Government has announced to establish BT finishing School in the State, with appropriate course content to equip student, particularly graduates and post graduates, with necessary employable skill.

In the Government Order dated 3.6.2010 and 4.12.2010 read at (2) above, Sanction has been accorded for the establishment of 12 BT Finishing School.

As per the policy, the State support will be limited to 25% of the cost, subject to maximum of Rs. 1.00 crore per institution, as such the balance 75% of the cost will have to be met by the institution.

The Selection committee constituted vide G.O. No. ITD 1 MDA 2010, dated 27.5.2010, under the chairmanship of Prof. Padmanabhan for selection of BT Finishing School, met on 23.12.2010 and has recommended for approval of 25% of the total budget and for release of 50% of the approved budget as first installment.

Accordingly, it is considered for release of Government grant. Hence this order.

Government Order No. ITD 01 MDA 2010 (P), Bangalore, Dated 19-02-2011

In the circumstance explained in the preamble, Government is pleased to accord approval for release of Rs. 275 lakhs [Rupees Two hundred and Seventy five lakhs only] to KBITS under the head of account “3451-00-090-2-24 BT Policy-059-Other expenditure [Plan]” for further release of 25% of the Government support for the 11 selected institutions detailed below.

1) Siddaganga Institute of Technology, B.H.Road, Tumkur.
2) Probiosys Marketing Office, Jayanagar, Bangalore.
3) PES Institute of Technology, Banashankari-III Stage, Bangalore.
4) JSS College of Arts, Commerce & Science, Mysore.
5) St. Aloysius College, Mangalore.
6) Padmashree Institute of Management & Sciences, Kengeri, Bangalore.
7) The Oxford College of Science, HSR Layout, Bangalore.
8) Maharani Lakshmi Ammanni College for Women, Malleswaram, Bangalore.
9) Vishweshwariah College of Applied Sciences, Gulbarga.
10) Manipal Life Sciences Centre, Planetarium Complex, Manipal-576104, Udupi, Karnataka.
11) Dayanand Sagar Institutions, Shavige Malleshwar Hills, Kumara Swamy Layout, Bangalore-560078.

This grant is released subject to the following conditions

1. KBITS, shall release the grants to the institutions after complying to all the conditions laid down in G.O. dated 3.6.2010 and 4.12.2010.
2. Further release will be considered only after 11 Institutions invests their corresponding share at 75%.
3. The Administrative Officer, Directorate of Information Technology & Bio Technology Department shall draw the above grant from the Treasury duly countersigned by the Director, Information Technology & Biotechnology and transfer the amount to KBITS.

The Managing Director, KBITS should submit the necessary Utilization Certificate in the prescribed format through the Director, Information Technology and Bio-Technology, Bangalore.

This Order issues with the concurrence of Finance Department vide their note No. FD 49 EXP-2/2011, dated 15-02-2011.

By Order and in the name of the Governor of Karnataka

P.R.528

K. Borlingaiah

Under Secretary to Government (I/C)

Information Technology, Biotechnology

and Science and Technology Department

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ವಿಷಯ : ಶ್ರೀ ಜಿ. ಸುಧೀರ್ ನಾಯ್ಕ, ದ್ವಿತೀಯ ದರ್ಜೆ ಸಹಾಯಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು-ಇವರ ಸೇವೆಯನ್ನು ಜಿಲ್ಲಾಧಿಕಾರಿ, ದಾವಣಗೆರೆ ಘಟಕಕ್ಕೆ ವರ್ಗಾವಣೆಯ ಮೂಲಕ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ

ಓದಲಾಗಿದೆ : (1) ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರ ಪತ್ರ ಸಂಖ್ಯೆ:ಸಿಬ್ಬಂದಿ/ವಿವ/57/10-11, ದಿ: 26.6.2010.

(2) ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ – ಇವರ ಪತ್ರ ಸಂಖ್ಯೆ:ಭಾನಿ 45/ಆಡಳಿತ/ವರ್ಗಾವ/2004, ದಿ: 06.09.2010 ಮತ್ತು ಕಛೇರಿ ಜ್ಞಾಪನ ದಿ: 23.09.2010.

(3) ಸಂವ್ಯಶಾಇ 38 ಭಾನಿವಿ 2010 ಕಂಡಿಕೆ 13

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಪತ್ರಗಳಲ್ಲಿ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ – ಇವರು ಭಾಷಾಂತರ ನಿರ್ದೇಶನಾಲಯದ ಸಿಬ್ಬಂದಿಯಾದ ಶ್ರೀ ಜಿ. ಸುಧೀರ್‌ನಾಯ್ಕ, ದ್ವಿತೀಯ ದರ್ಜೆ ಸಹಾಯಕರು ಇವರು ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ದಿನಾಂಕ: 4.11.2004ರಿಂದ ಭಾಷಾಂತರ ಇಲಾಖೆಯಿಂದ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿದ್ದು, ಅವರ ನಿಯೋಜನೆಯನ್ನು ದಿನಾಂಕ: 19.10.2010ರವರೆಗೆ ಮುಂದುವರೆಸಲಾಗಿದೆ. ಸದರಿ ನೌಕರರು ಕಂದಾಯ ಇಲಾಖೆಯಲ್ಲಿ ಕಳೆದ 5 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಕೌಟುಂಬಿಕ ಕಾರಣಗಳಿಗಾಗಿ ಹರಪನಹಳ್ಳಿಯಲ್ಲಿ ನೆಲೆಸಬೇಕಾಗಿರುವುದರಿಂದ, ಇವರನ್ನು ಜ್ಯೇಷ್ಠತಾ ನಿಯಮ 6 ರಡಿ ವರ್ಗಾಯಿಸಿದಲ್ಲಿ ಕಂದಾಯ ಇಲಾಖೆಯಲ್ಲಿ ಸೇವೆ ನಿರ್ವಹಿಸಲು ಇಚ್ಛಿಸಿರುತ್ತಾರೆ. ಭಾಷಾಂತರ ಇಲಾಖೆಯಲ್ಲಿ 2004ರಲ್ಲಿ ಪರೀಕ್ಷಾರ್ಥ ಅವಧಿ ಘೋಷಣೆಯಾಗಿರುತ್ತದೆ. ಕಾರಣ, ಇವರ ಸೇವೆಯನ್ನು ಕಂದಾಯ ಇಲಾಖೆ, ದಾವಣಗೆರೆ ಘಟಕದಲ್ಲಿ ವಿಲೀನಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಹಶೀಲ್ದಾರ್, ಹರಪನಹಳ್ಳಿ ಇವರು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ: 06.09.2010ರ ಪತ್ರದಲ್ಲಿ ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ – ಇವರು ಶ್ರೀ ಜಿ. ಸುಧೀರ್ ನಾಯ್ಕ, ದ್ವಿತೀಯ ದರ್ಜೆ ಸಹಾಯಕರು – ಇವರ ಸೇವೆಯನ್ನು ಕಂದಾಯ ಇಲಾಖೆ, ದಾವಣಗೆರೆ ಘಟಕದಲ್ಲಿ ಖಾಯಂಗೊಳಿಸಿ ವರ್ಗಾಯಿಸಲು ಭಾಷಾಂತರ ನಿರ್ದೇಶನಾಲಯ ವತಿಯಿಂದ ಯಾವುದೇ ಅಭ್ಯಂತರವಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ದಿನಾಂಕ: 23.09.2010ರ ಕಛೇರಿ ಜ್ಞಾಪನದಲ್ಲಿ ಶಾಶ್ವತವಾಗಿ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಮೇಲೆ (3)ರಲ್ಲಿ ಓದಲಾಗಿರುವ ಸಂವ್ಯಶಾಇ 38 ಭಾನಿವಿ 2010, ಕಂಡಿಕೆ 13ರಲ್ಲಿ ಶ್ರೀ ಜಿ. ಸುಧೀರ್ ನಾಯ್ಕ, ದ್ವಿತೀಯ ದರ್ಜೆ ಸಹಾಯಕರು – ಇವರ ಸೇವೆಯನ್ನು ಕಂದಾಯ ಇಲಾಖೆ, ದಾವಣಗೆರೆ ಘಟಕದಲ್ಲಿ ಖಾಯಂಗೊಳಿಸಿ, ವರ್ಗಾಯಿಸಲು ಸರ್ಕಾರವು ಅನುಮೋದಿಸಿದೆ.

ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 38 ಭಾನಿವಿ 2010, ಬೆಂಗಳೂರು, ದಿನಾಂಕ 18-02-2011

ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಯ 1977ರ ನಿಯಮ 16(ಎ)ರನ್ವಯ ಶ್ರೀ ಜಿ. ಸುಧೀರ್ ನಾಯ್ಕ, ದ್ವಿತೀಯ ದರ್ಜೆ ಸಹಾಯಕರು, ಭಾಷಾಂತರ ನಿರ್ದೇಶನಾಲಯ ಇವರ ಸೇವೆಯನ್ನು ಇವರ ಕೋರಿಕೆಯ ಮೇರೆಗೆ ಭಾಷಾಂತರ ನಿರ್ದೇಶನಾಲಯದಲ್ಲಿ ಸದರಿಯವರು ಹೊಂದಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ಲೀನ್ (ಹುದ್ದೆಯ ಹಕ್ಕು) ಸಮೇತ ಅವರ ಸೇವೆಯನ್ನು ದಾವಣಗೆರೆ ಜಿಲ್ಲೆ, ಜಿಲ್ಲಾಧಿಕಾರಿ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದ ಹುದ್ದೆಗೆ ಶಾಶ್ವತವಾಗಿ ವರ್ಗಾವಣೆಯ ಮೂಲಕ ಈ ಕೆಳಕಂಡ ಷರತ್ತುಗಳು ಮತ್ತು ನಿಬಂಧನೆಗೆ ಒಳಪಟ್ಟು ಈ ಮೂಲಕ ಹಾಗೂ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲು ಸರ್ಕಾರವು ಆದೇಶಿಸಿದೆ.

(1) ಶ್ರೀ ಜಿ. ಸುಧೀರ್ ನಾಯ್ಕ ಇವರ ಜ್ಯೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು 1957ರ ನಿಯಮ 6 ರ ಪರಂತುಕದ ಅನುಸಾರವಾಗಿ ನಿರ್ಧರಿಸಬೇಕು.

(2) ನೌಕರರು ವರ್ಗಾವಣೆ ಭತ್ಯೆ ಪಡೆಯಲು ಅರ್ಹರಿರುವುದಿಲ್ಲ.

(3) ಈ ವರ್ಗಾವಣೆಯನ್ನು ದಾವಣಗೆರೆ ಜಿಲ್ಲೆ, ಜಿಲ್ಲಾಧಿಕಾರಿ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಅನುಗುಣವಾಗಿ ಮಾಡಲಾಗಿದ್ದು, ಈ ಉದ್ದೇಶಕ್ಕಾಗಿ ಯಾವುದೇ ಹುದ್ದೆಯನ್ನು ಸೃಜಿಸಬಾರದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 529

ಜಿ. ಶ್ರೀಧರ್

ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ವಿಶೇಷ ಕಾರ್ಯ ನಿರ್ವಾಹಕಾ ದಂಡಾಧಿಕಾರಿಗಳ ನೇಮಕ ಕುರಿತಂತೆ ಸರ್ಕಾರದ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ಬೆಳಗಾವಿ ಜಿಲ್ಲಾ ದಂಡಾಧಿಕಾರಿಯವರ ಪತ್ರ ಸಂಖ್ಯೆ: DC.POL.CR-909/2010-11 ದಿನಾಂಕ: 14.02.2011.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಬೆಳಗಾವಿ ಜಿಲ್ಲಾ ದಂಡಾಧಿಕಾರಿಗಳು ಮುಸ್ಲಿಂ ಬಾಂಧವರ ಈದ್-ಮಿಲಾದ್ ಹಬ್ಬದ ಆಚರಣೆ ಅಂಗವಾಗಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ದಿನಾಂಕ: 15.02.2011 ರಿಂದ 17.02.2011ರ ವರೆಗೆ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಶ್ರೀ ಬಿ.ಎಸ್. ಜಂಬಗಿ, ಉಪ ನಿರ್ದೇಶಕರು, ಪಶುವೈದ್ಯ ಇಲಾಖೆ, ಬೆಳಗಾಂ ಇವರನ್ನು ಮಾರುಕಟ್ಟೆ ಆರಕ್ಷಕ ಉಪ-ವಿಭಾಗ, ಬೆಳಗಾಂ ಈ ವ್ಯಾಪ್ತಿಗೆ ಮತ್ತು ಶ್ರೀ ಬಸವರಾಜ್ ರೂಗಿ, ಉಪ ನಿರ್ದೇಶಕರು, ಭೂ-ದಾಖಲೆಗಳು, ಕಂದಾಯ ಇಲಾಖೆ, ಇವರನ್ನು ಖಾಡೆ ಬಜಾರ್ ಆರಕ್ಷಕ ಉಪ-ವಿಭಾಗ, ಬೆಳಗಾಂ ಇವರುಗಳನ್ನು ವಿಶೇಷ ಕಾರ್ಯ ನಿರ್ವಹಣಾ ದಂಡಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದು, ಈ ಕುರಿತಂತೆ ಘಟನೋತ್ತರ

ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ, ಬೆಳಗಾವಿ ಜಿಲ್ಲಾ ದಂಡಾಧಿಕಾರಿಯವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ, ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: 93ಪ :SST: 2011, ಬೆಂಗಳೂರು, ದಿನಾಂಕ 15–02–2011

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲಾ ದಂಡಾಧಿಕಾರಿಗಳು, ಮುಸ್ಲಿಂ ಬಾಂಧವರ ಈದ್–ಮಿಲಾದ್ ಹಬ್ಬದ ಆಚರಣೆ ಪ್ರಯುಕ್ತ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ದಿನಾಂಕ: 15.02.2011ರಿಂದ 17.02.2011 ರವರೆಗೆ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಶ್ರೀ ಬಿ.ಎಸ್. ಜಂಬಗಿ, ಉಪ ನಿರ್ದೇಶಕರು, ಪಶುವೈದ್ಯ ಇಲಾಖೆ, ಬೆಳಗಾಂ ಇವರನ್ನು ಮಾರುಕಟ್ಟೆ ಆರಕ್ಷಕ ಉಪ–ವಿಭಾಗ, ಬೆಳಗಾಂ ಈ ವ್ಯಾಪ್ತಿಗೆ ಮತ್ತು ಶ್ರೀ ಬಸವರಾಜ್ ರೂಗಿ, ಉಪ ನಿರ್ದೇಶಕರು, ಭೂ–ದಾಖಲೆಗಳು, ಕಂದಾಯ ಇಲಾಖೆ, ಇವರನ್ನು ಖಾಡೆ ಬಜಾರ್ ಆರಕ್ಷಕ ಉಪ–ವಿಭಾಗ, ಬೆಳಗಾಂ, ವ್ಯಾಪ್ತಿಗೆ ವಿಶೇಷ ಕಾರ್ಯ ನಿರ್ವಾಹಕಾ ದಂಡಾಧಿಕಾರಿಗಳನ್ನಾಗಿ ನೇಮಕ ಮಾಡಿ ಹೊರಡಿಸಿರುವ ಆದೇಶ ಸಂಖ್ಯೆ: DC.POL.CR-909/2010-11 ದಿನಾಂಕ: 14.02.2011 ಕ್ಕೆ ಸರ್ಕಾರದ ಘಟನೋತ್ತರ ಅನುಮೋದನೆಯನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 530

ENERGY SECRETARIAT

Sub: Transfer of 1.5 MW wind power capacity in favour of M/s Kaleesuwari Refinery Private Limited-reg.

Read :
1. Government Order No. DE 59 NCE 2004, dated 8-3-2004.
2. Government Order NO. EN 393 NCE 2005, dated : 28-12-2005.
3. Government Order NO. EN 180 NCE 2007, dated 15-5-2007.
4. Letter No. : KRED/08/KSRPL-1.5 MW (K-515)-SRL/2011/265 dated : 12/17-1-2011 received from the Managing Director, Karnataka Renewable Energy Development Limited, Bangalore.

PREAMBLE :

In the Government Order read at (1) above, sanction has been accorded for implementation of 125 MW capacity wind power project at Shimoga, Bellary, Chitradurga, Chikkamagalur, Tumkur and Dharwad Districts to M/s Sarjan Realities Private Limited. Out of 125 MW wind power capacity the part capacity of 33 MW (11+22=33 MW) is allotted at Shimoga District.

In the Government Order read at (2) above, sanction has been accorded for enhancement of wind power capacity from 33 MW to 44.4 MW Kalavi Ranganagudda, Maddapura, Gangavannadasara State Forest, Horogoppa in Shimoga District to M/s Sarjan Realities Limited.

In the Government Order read at (3) above sanction has been accorded for enhancement of wind power capacity from 44.4 MW to 111.00 MW at Gangavanasara and Kudrekonda areas is Shimoga and Davangere Districts to M/s Sarjan Realities Limited.

The Managing Director, Karnataka Renewable Energy Development Limited, Bangalore in his letter read at (4) above has recommended to the Government for fransfer of 1.5 MW wind power capacity in favour of M/s Kaleesuwari Refinery Private Limited from out of the sanctioned 111.00 MW capacity to M/s Sarjan Realities Limited at Shidaganahallu Village, Shikaripura Taluk, Shimoga District.

The proposal has been examined in detail and hence the following order issued :-

GOVERNMENT ORDER NO. EN 28 NCE 2011, BANGALORE, DATED : 23-2-2011.

Government accords approval for transfer of 1.5 MW wind power capacity in favour of M/s Kaleesuwari Refinery Private Limited from out of the sanction 111.00 MW capacity to M/s Sarjan Realities Limited at Shidaganahallu village, Shikaripura Taluk, Shimoga District as detailed below and subject to the following conditions :-

Village Name	Taluk & District	Land Survey Number	Extent in land	Wind Turbine Generator location No.s
Shidaganahallu	Shikaripura/Shimoga	1	0.25 Hectares per WTG of capacity 1.50 MW	K-515

1. M/s Kaleesuwari Refinery Private Limited shall execute an agreement with Government within 45 (forty five) days from the date of issue of this Order.
2. M/s Kaleesuwari Refinery Private Limited shall enter into wheeling and banking with concerned ESCOM and KPTCL.
3. The developer should commission the project during the Financial Year 2010-11.
4. The Government reserves the right to Cancel/modify this Order.

The other terms and conditions of the Government Order read at (1) above shall IPSO FACTO applicable.

By Order and in the name of the Governor of Karnataka
SURESH. B. KRISHNAPPANAVAR
Under Secretary to Government
Energy Department.

P.R. No. 601

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ದಿನಾಂಕ : 27–3–2010.

2. ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/306/2011 ದಿನಾಂಕ : 27–1–2011.

ಪ್ರಸ್ತಾವನೆ :

ಕಳೆದ ವರ್ಷ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸುರಿದ ಬಾರಿ ಮಳೆ ಮತ್ತು ನೆರೆಹಾವಳಿಯಿಂದ ಮನೆಗಳನ್ನು ಕಳೆದುಕೊಂಡವರಿಗೆ "ಆಸರೆ" ಯೋಜನೆಯಡಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರು ಕ್ರೆಡ್ಯೆ ಸಂಸ್ಥೆಯು ಬಾದಾಮಿ ತಾಲ್ಲೂಕಿನ ಕಿತ್ತಳಿ 230 ಮನೆಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವುದರಿಂದ ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010 (ಪಿ1), ಬೆಂಗಳೂರು, ದಿನಾಂಕ : 25ನೇ ಫೆಬ್ರವರಿ 2011.

ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ಸಂಸ್ಥೆಗೆ ವಹಿಸಿಕೊಟ್ಟಿದ್ದ ಬಾದಾಮಿ ತಾಲ್ಲೂಕು ಕಿತ್ತಳಿ ಗ್ರಾಮದ 230 ಆಸರೆ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಕರ್ನಾಟಕ ಗೃಹ ಮಂಡಳಿಗೆ ಹಂಚಿಕೆ ಮಾಡಲಾಗಿದ್ದು, ಮನೆಗಳ ನಿರ್ಮಾಣವನ್ನು ಕೂಡಲೇ ಪ್ರಾರಂಭಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಆರ್. ವಲ್ಲೂರ

ಪಿ. ಆರ್. 602 ಪೀಠಾಧಿಕಾರಿ– 2, ವಸತಿ ಇಲಾಖೆ.

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40–41ರ ರಸ್ತೆ ಮೇಲುಸೇತುವೆಯ ಕೂಡು ರಸ್ತೆ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಮೂಅಇ 65 ರಾರಾಹೆ 2007, ದಿನಾಂಕ : 27–7–07.

2. ಸರ್ಕಾರದ ಆದೇಶ ಸಂಖ್ಯೆ : ಮೂಅಇ 65 ರಾರಾಹೆ 2007, ದಿನಾಂಕ : 15–12–2008.
3. ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ದಿನಾಂಕ : 6–2–2010 ರ ಸರ್ಕಾರಿ ಆದೇಶ.
4. ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ದಿನಾಂಕ : 10–6–2010 ರ ಸರ್ಕಾರಿ ಆದೇಶ.
5. ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ದಿನಾಂಕ : 27–9–2010 ರ ಸರ್ಕಾರಿ ಆದೇಶ.
6. ಮುಖ್ಯ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡ, (ದ) ಬೆಂಗಳೂರು ಇವರ ದಿನಾಂಕ : 18–12–2010 ಪತ್ರ ಸಂಖ್ಯೆ : ಸಿಬಿಎಸ್ : ಹಭಪ : 34 : ಹಭಪ : 5465 : 2009–10.

ಪ್ರಸ್ತಾವನೆ :

ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40–41ರ ರಸ್ತೆ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ಶೇ 50 : 50 ವೆಚ್ಚವನ್ನು ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಹಾಗೂ ಸದರಿ ರಸ್ತೆಯ ಕಾಮಗಾರಿಗೆ ಬೇಕಾಗುವ ಭೂಸ್ವಾಧೀನ ಹಾಗೂ ನಾಗರೀಕ ಸೌಲಭ್ಯಗಳ ಸ್ಥಳಾಂತರಕ್ಕೆ ಕ್ರಮವಾಗಿ ರೂ. 342.00 ಮತ್ತು 349.10 ಲಕ್ಷಗಳನ್ನು ಮತ್ತು ಕಾಮಗಾರಿಗೆ ತಗಲುವ ಶೇ 50 ರಷ್ಟು ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ರೂ. 585.00 ಲಕ್ಷಗಳನ್ನು ಮೇಲೆ ಓದಲಾದ (1), (2), (3) (4) ಮತ್ತು (5) ರ ಸರ್ಕಾರಿ ಆದೇಶಗಳಲ್ಲಿ ಬಿಡುಗಡೆ ಮಾಡಲಾಗಿತ್ತು.

2. ಎಲ್.ಸಿ ಸಂಖ್ಯೆ : 40–41 ರಲ್ಲಿ ರಸ್ತೆ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಿಸುವ ಕಾಮಗಾರಿಯು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, ಇನ್ನಿತರ ಕಾಮಗಾರಿಗಳು ಸಹ ನಡೆಯುತ್ತಿರುವುದರಿಂದ ಮೇಲೆ ಓದಲಾದ (3)ರ ಆದೇಶದಲ್ಲಿ ಬಿಡುಗಡೆ ಮಾಡಿರುವ ಮೊತ್ತ ರೂ. 3.00ಕೋಟಿಗಳಲ್ಲಿ ದಿನಾಂಕ : 31–3–2010 ರ ಅಂತ್ಯಕ್ಕೆ ರೂ. 1,83,29,041/– ಲಕ್ಷಗಳನ್ನು ಮಾತ್ರ ಉಪಯೋಗಿಸಿಕೊಂಡಿದ್ದು, ಉಳಿದ ಮೊತ್ತ ರೂ. 1,16,70,959/– ಲಕ್ಷಗಳು ಲ್ಯಾಪ್ಸ್ ಆಗಿದ್ದು ಡ್ರಾ ಮಾಡಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ನೀಡಿರುವುದನ್ನು ಪರಿಗಣಿಸಿ ಮೇಲೆ ಓದಲಾದ (4)ರ ಆದೇಶದಲ್ಲಿ ರೂ. 2.00 ಕೋಟಿಯನ್ನು ಬಿಡುಗಡೆ ಮಾಡಲಾಗಿತ್ತು. ಒಟ್ಟಾರೆ ಈ ಯೋಜನೆಗೆ ರಾಜ್ಯ ಸರ್ಕಾರವು ರೂ. 1159.39 ಲಕ್ಷಗಳನ್ನು (ಲ್ಯಾಪ್ಸ್ ಆಗಿರುವ ಮೊತ್ತ ರೂ. 1,16,70,959/–ಗಳನ್ನು ಒಳಗೊಂಡು) ಬಿಡುಗಡೆ ಮಾಡಿದಂತಾಗಿದೆ.

3. ಸದರಿ ಕಾಮಗಾರಿಗೆ ತಗಲುವ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ. 492.34 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (6)ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆಯ (ದಕ್ಷಿಣ) ಮುಖ್ಯ ಇಂಜಿನಿಯರವರು ಕೋರಿದ್ದಾರೆ.

4. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ಬೆಂಗಳೂರು, ದಿನಾಂಕ : 24–2–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40–41 ರ ರಸ್ತೆ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣದ ಕಾಮಗಾರಿಗೆ ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ರೂ. 150.00 ಲಕ್ಷಗಳನ್ನು (ರೂಪಾಯಿ ಒಂದು ನೂರಾ ಐವತ್ತು ಲಕ್ಷಗಳು ಮಾತ್ರ) 2010–2011ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04–(ಯೋಜನೆ)–211 ಬಂಡವಾಳ" ಇದರ ಅಡಿಯಲ್ಲಿ ರಸ್ತೆ ಮೇಲುಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಣೆ ಮಾಡಿರುವ ರೂ. 30.00 ಕೋಟಿಗಳಿಂದ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ತುಮಕೂರು ವಿಭಾಗ, ತುಮಕೂರು ಇವರಿಗೆ ಬಿಡುಗಡೆ ಮಾಡಿದೆ.

2. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು ಸಾದಿಲ್ವಾರು ಬಿಲ್ಲಿನ ಮೂಲಕ ಸೆಳೆದು ಸಂಬಂಧಪಟ್ಟವರಿಗೆ ಖಜಾನೆ ಚೆಕ್ ಮೂಲಕ ಕೊಡತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಘಟನೋತ್ತರ ಅನುಮೋದನೆಯನ್ನು ಪಡೆಯುವ ಷರತ್ತಿನೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಎ. ಬಾಬುರವೀಂದ್ರನಾಥ ಪಟೇಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ. ಆರ್. 603

ಸಹಕಾರ ಸಚಿವಾಲಯ

ವಿಷಯ : ಅಖಿಲ ಕರ್ನಾಟಕ ಗಾಣಿಗರ ಸಂಘ (ರಿ), ಬೆಂಗಳೂರು ಈ ಸಂಘಕ್ಕೆ ಆಡಳಿತಗಾರರನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಇ 36 ಸಸಂನೋ 2010, ಬೆಂಗಳೂರು, ದಿನಾಂಕ : 25–5–2010.
2. ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 19791/2010 (ಜಿಎಂ–ಕೆಎಸ್ಆರ್) ರಲ್ಲಿ ದಿನಾಂಕ : 31–8–2010 ರಂದು ನೀಡಿರುವ ಆದೇಶ.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಸರ್ಕಾರವು ಅಖಿಲ ಕರ್ನಾಟಕ ಗಾಣಿಗರ ಸಂಘ (ರಿ), ಬೆಂಗಳೂರು ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 (ಸಂಕ್ಷಿಪ್ತವಾಗಿ ಅಧಿನಿಯಮ)ರ ಪ್ರಕರಣ 27–ಎ ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ ಇವರನ್ನು ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸಿತ್ತು. ಅದರಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ದಿನಾಂಖ : 31–5–2010 ರಂದು ಸಂಘದ ಆಡಳಿತಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡಿರುತ್ತಾರೆ. ಈ ಆದೇಶವನ್ನು ಪ್ರಶ್ನಿಸಿ ಅಖಿಲ ಕರ್ನಾಟಕ ಗಾಣಿಗರ ಸಂಘ (ರಿ) ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಎನ್. ಶ್ರೀನಿವಾಸ್ ಎಂಬುವರು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ : 19791/2010 (ಜಿಎಂ–ಕೆಎಸ್ಆರ್) ಅನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯನ್ನು ಗೌರವ ಉಚ್ಚನ್ಯಾಯಾಲಯವು ದಿನಾಂಕ : 31–8–2010 ರಂದು ಇತ್ಯರ್ಥಪಡಿಸಿ ಆದೇಶ ನೀಡಿರುತ್ತದೆ. ಗೌರವ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದ ಮುಖ್ಯಾಂಶ ಈ ಕೆಳಕಂಡಂತಿದೆ.

(a) petition is allowed.
(b) The impugned order at Annexure 'S' is quashed.
(c) The Administrator appointed pursuant to the order dated : 25-5-2010 shall continue to administer the association.
(d) The 1st respondent to conclude the proceedings within a period of four weeks from the date of appearance of parties.
(e) Both the parties shall take the proceedings itself as notice to them and shall appear before the 1st respondent on 16-9-2010 Rule is issued and made absolute.

ಅಖಿಲ ಕರ್ನಾಟಕ ಗಾಣಿಗರ ಸಂಘ (ರಿ) ಬೆಂಗಳೂರು ಇದರ ಅಧ್ಯಕ್ಷರ ಪರವಾಗಿ ವಕೀಲರಾದ ಶ್ರೀ ಎಸ್. ನಂಜಾರೆಡ್ಡಿಯವರು ದಿನಾಂಕ : 16–9–2010 ರಂದು ಮೆಮೋ ಸಲ್ಲಿಸಿ ರಿಟ್ ಅರ್ಜಿ ಸಂಖ್ಯೆ : 19791/2010 (ಸಿಎಸ್–ಕೆಎಸ್ಆರ್) ರಲ್ಲಿ ಗೌರವ ಉಚ್ಚ ನ್ಯಾಯಾಲಯವು ದಿನಾಂಕ : 31–8–2010 ರಂದು ನೀಡಿರುವ ಆದೇಶದ ದೃಢೀಕೃತ ಪ್ರತಿಯನ್ನು ಪಡೆಯಬೇಕಾಗಿರುವುದರಿಂದ ನ್ಯಾಯಾಲಯದ ಅಂತಿಮ ಆದೇಶದ ದೃಡೀಕೃತ ಪ್ರತಿಯನ್ನು ಪಡೆದು ಸಲ್ಲಿಸಲು 2 ವಾರಗಳ ಕಾಲಾವಕಾಶವನ್ನು ಕೋರಿದ್ದಾರೆ. ಸದರಿ ಸಂಘದ ಪರ ವಕೀಲರು ದಿನಾಂಕ : 23–9–2010 ರಲ್ಲಿ ಮೆಮೋ ಸಲ್ಲಿಸಿ ಆದೇಶದ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಕರಣದ ಬಗ್ಗೆ ಗೌರವ ಉಚ್ಚ ನ್ಯಾಯಾಲಯದ ಆದೇಶದಂತೆ ವಿಚಾರಣೆ ನಡೆಸಲು ಸಂಬಂಧಿಸಿದ ಪಕ್ಷಕಾರರಿಗೆ ಸರ್ಕಾರವು ತಿಳಿವಳಿಕೆಯನ್ನು ನೀಡಿ ಪ್ರಕರಣದ ವಿಚಾರಣೆಯನ್ನು ಅಂತಿಮವಾಗಿ ದಿನಾಂಕ : 9–2–2011 ರಂದು ನಡೆಸಿರುತ್ತದೆ. ಸದರಿ ವಿಚಾರಣೆಯಲ್ಲಿ ಎರಡು ಪಕ್ಷಕಾರರ ಪರವಾಗಿ ಅವರ ವಕೀಲರು ಹಾಜರಾಗಿದ್ದರು ಸಂಘದ ಪರವಾಗಿ ಅಧ್ಯಕ್ಷರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. 5ನೇ ಪ್ರತಿವಾದಿಯು ಸಹ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸಂಘದ ಆಡಳಿತಾಧಿಕಾರಿ ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆರವರು ಹಾಜರಿದ್ದರು.

ಅಖಿಲ ಕರ್ನಾಟಕ ಗಾಣಿಗರ ಸಂಘವು (ನೋಂ) 2001 ರಿಂದ ಲೆಕ್ಕಪತ್ರಗಳನ್ನು ದಾಖಲಿಸದಿರುವುದು ಮತ್ತು ವಾರ್ಷಿಕ ಮಹಾಸಭೆ ನಡೆಸದಿರುವುದು ಮತ್ತು ಇದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ ಸಂಘದ ಲೆಕ್ಕಪತ್ರಗಳನ್ನು ದಾಖಲಿಸಲು ವಿಫಲವಾಗಿರುವುದು ಅಧಿನಿಯಮ ಪ್ರಕರಣ 13ರ ಉಲ್ಲಂಘನೆಯಾಗಿದ್ದು, ಸ್ಪಷ್ಟವಾದ ಕಾರಣ ಸಂಘದ ಆಡಳಿತ ಮಂಡಳಿಯು ಅಧಿನಿಯಮದನ್ವಯ ಕಾರ್ಯನಿರ್ವಹಿಸುವಲ್ಲಿ ವಿಫಲರಾಗಿರುವ ಕಾರಣ ಸಂಘಕ್ಕೆ ಮೇಲೆ ಓದಲಾದ (1)ರ ಸರ್ಕಾರದ ಆದೇಶದನ್ವಯ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶ ಹೊರಡಿಸಲಾಗಿತ್ತು.

ಗೌರವ ಉಚ್ಚ ನ್ಯಾಯಾಲಯದ ಆದೇಶದಂತೆ ಪ್ರಕರಣದ ವಿಚಾರಣೆಯನ್ನು ದಿನಾಂಕ : 9–2–2011 ರಂದು ನಡೆಸಲಾಯಿತು. ಅರ್ಜಿದಾರ ಸಂಘದ ಅಧ್ಯಕ್ಷರು ಲಿಖಿತವಾಗಿ ಹೇಳಿಕೆ ಸಲ್ಲಿಸಿದ್ದು, ಸಂಘದ ವಿರುದ್ಧ ಮಾಡಲಾದ ಆರೋಪಗಳ ಸಂಬಂಧ ಕೆಲವು ಮುಖ್ಯಾಂಶಗಳ ಸಂಬಂಧ ವಿವರಣೆಯ ಸಂಕ್ಷಿಪ್ತ ಕೆಳಕಂಡಂತಿರುತ್ತದೆ.

ಸಂಘದ ಲೆಕ್ಕಪುಸ್ತಕಗಳು 1993 ರಿಂದ 2001ನೇ ಸಾಲಿನವರೆಗೆ ಲೆಕ್ಕಪರಿಶೋಧನೆಯಾಗಿದ್ದು, ಸದರಿ ವರದಿಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲಾಗಿದೆ ಎಂದು ಹಾಗೂ 2002ನೇ ಸಾಲಿನಿಂದೀಚೆಗೆ ಯಾವುದೇ ಹಣಕಾಸಿನ ವ್ಯವಹಾರಗಳು ನಡೆದಿರುವುದಿಲ್ಲವೆಂದು ತಿಳಿಸಲಾಗಿದೆ. ಸಂಘದ ವಿರುದ್ಧ ಮಾಡಲಾದ ಆರೋಪಗಳ ಕುರಿತು ಪ್ರಸ್ತಾವನೆ ಸಲ್ಲಿಸುವ ಮುನ್ನಾ ಜಿಲ್ಲಾ ನೋಂದಣಾಧಿಕಾರಿಯವರು ಅಧಿನಿಮಯ ಪ್ರಕರಣ 25ರಡಿಯಲ್ಲಿ ವಿಚಾರಣೆಯನ್ನು ನಡೆಸಿ ವರದಿಯನ್ನು ನೀಡಬೇಕಾಗಿತ್ತು. ವಿಚಾರಣೆ ನಡೆಸದೆ ಆಡಳಿತಾಧಿಕಾರಿಯನ್ನು ನೇಮಿಸಲು ಶಿಫಾರಸ್ಸು ಮಾಡಿರುವುದು ಕಾನೂನು ಬಾಹಿರವಾಗಿದೆ. ಸಂಘವು 2001ನೇ ಸಾಲಿನಿಂದ ಯಾವುದೇ ಹಣಕಾಸಿನ ವ್ಯವಹಾರ ನಡೆಸಿರುವುದಿಲ್ಲ ಹಾಗೂ ಇದು ನಿಷ್ಕ್ರಿಯಗೊಂಡಿರುತ್ತದೆ. ಆದ್ದರಿಂದ ಪ್ರಕರಣ 13ರಡಿಯಲ್ಲಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸಬೇಕಾಗಿದ್ದ ಆರ್ಥಿಕ ತಃಖ್ತೆಗಳನ್ನು ಸಲ್ಲಿಸಿರುವುದಿಲ್ಲ. ತಾವುಗಳು ನಮಗೆ ಅವಕಾಶ ನೀಡಿದಲ್ಲಿ ಇನ್ನು 3 ತಿಂಗಳೊಳಗಾಗಿ ಸಂಘದ ಆಡಳಿತ ಮಂಡಳಿ ಕಾನೂನಿನ ಅಡಿಯಲ್ಲಿ ಮಾಡಬೇಕಾದ ಎಲ್ಲಾ ಕೆಲಸಗಳನ್ನು ಮಾಡಿ ವರದಿ ಸಲ್ಲಿಸಲಾಗುವುದು. ಆದ್ದರಿಂದ ಸಂಘದ ವಿರುದ್ಧ ಉದ್ದೇಶಿತ ಕ್ರಮವನ್ನು ಕೈಬಿಡಬೇಕೆಂದು ಆಡಳಿತಾಧಿಕಾರಿಗಳು ಸಂಘಕ್ಕೆ ಪ್ರಭಾರ ವಹಿಸಿಕೊಡುವಂತೆ ನಿರ್ದೇಶನ ನೀಡಬೇಕೆಂದು ಕೋರಿರುತ್ತಾರೆ.

ರಿಟ್ ಅರ್ಜಿ ಸಂಖ್ಯೆ : 19791/2010ರಲ್ಲಿನ 5ನೇ ಪ್ರತಿವಾದಿಯಾದ ಶ್ರೀ ಬಿ.ಜೆ. ಪುಟ್ಟಸ್ವಾಮಿಯವರು ದಿನಾಂಕ : 16–12–2010ರ ಲಿಖಿತ ಹೇಳಿಕೆಯಲ್ಲಿ ಶ್ರೀ ಎಸ್. ಶ್ರೀನಿವಾಸ್ ಮತ್ತು ಸಂಘದ ಪದಾಧಿಕಾರಿಗಳು ಸಂಘದ ಯಾವ ಸರ್ವಸದಸ್ಯರ ಸಭೆಯಲ್ಲಿ ಚುನಾಯಿತರಾಗಿದ್ದಾರೆ. ಎಂಬುದನ್ನು ದಾಖಲೆಗಳ ಸಹಿತ ದೃಢೀಕರಿಸಿಲ್ಲ. ಸಂಘದ ಲೆಕ್ಕಪತ್ರಗಳನ್ನು 2001 ರಿಂದ ದಾಖಲಿಸಿರುವುದಿಲ್ಲ ಮತ್ತು 2001 ರಿಂದ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಸಿರುವುದಿಲ್ಲ. ಕಳೆದ 10 ವರ್ಷಗಳಿಂದ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಯದೇ ಅಧ್ಯಕ್ಷರು, ಕಾರ್ಯದರ್ಶಿ ಕಾನೂನು ಬಾಹಿರವಾಗಿ ಮುಂದುವರೆದಿರುತ್ತಾರೆ. ಸಂಘದ ಉಪ ನಿಯಮಗಳನ್ನು ಪ್ರತಿ ಹಂತದಲ್ಲಿಯೂ ಉಲ್ಲಂಘನೆ ಮಾಡಲಾಗಿದೆ. ಸಂಘಕ್ಕೆ ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ ಸಂಘವು ಲೆಕ್ಕಪತ್ರಗಳನ್ನು ದಾಖಲಿಸಲು ವಿಫಲವಾಗಿ, ಅಧಿನಿಮಯ ಪ್ರಕರಣ 13ನ್ನು ಉಲ್ಲಂಘನೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೇ ಸಂಘವು ನಿಷ್ಕ್ರಿಯವಾಗಿರುವ ಬಗ್ಗೆ ಸಂಘದಲ್ಲಿ ಕಾನೂನು ಬಾಹಿರವಾಗಿ ಮುಂದುವರೆದಿರುವ ಅಧ್ಯಕ್ಷರವರು ರಿಟ್ ಅರ್ಜಿಯಲ್ಲಿ ಒಪ್ಪಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಮುಂದುವರೆಸುವಂತೆ ಕೋರಿದ್ದಾರೆ.

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ವರದಿಯನ್ನು ಗಮನಿಸಿದಾಗ ಸಂಘವು 2001 ರಿಂದ ಈಚೆಗೆ ಕಾನೂನಿಗನುಗುಣವಾದ ಲೆಕ್ಕಪತ್ರಗಳನ್ನು ದಾಖಲಿಸದಿರುವುದು ಮತ್ತು ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಸದಿರುವುದು ಕಂಡುಬರುತ್ತದೆ. ಈ ಬಗ್ಗೆ ಅವರ ಕಛೇರಿ ಪತ್ರ ದಿನಾಂಕ : 13–11–2009 ರ ರೀತ್ಯಾ ಸಂಘದವರಿಗೆ ಸೂಚಿಸಿ ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ ಸಂಘದ ಲೆಕ್ಕಪತ್ರಗಳನ್ನು ದಾಖಲಿಸಲು ಸಂಘದವರು ವಿಫಲರಾಗಿರುತ್ತಾರೆ. ಇದು ಅಧಿನಿಯಮದ ಕಲಂ 13ರ ಉಲ್ಲಂಘನೆಯಾಗಿರುತ್ತದೆ. ಲೆಕ್ಕಪತ್ರಗಳನ್ನು ದಾಖಲಿಸದಿರುವುದಕ್ಕೆ ಸಮಂಜಸವಾದ ವಿವರಣೆಯನ್ನು ಸಂಘದವರು ಸಲ್ಲಿಸಿರುವುದಿಲ್ಲ. ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ನಡೆಸಿರುವ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಸಂಘದ ವಿರುದ್ಧ ಮಾಡಲಾದ ಆರೋಪಗಳ ಸಂಬಂಧ ಮೇಲೆ ವಿವರಿಸಿರುವಂತೆ ಎರಡೂ ಪಕ್ಷಕಾರರು ಮಂಡಿಸಿದ ವಿವರಣೆಯನ್ನು ಸರ್ಕಾರವು ಪ್ರಕರಣದ ವಿಚಾರಣಾ ಹಂತದಲ್ಲಿ ಪರಿಗಣನೆಗೆ ತೆಗೆದುಕೊಂಡಿದೆ ಸಂಘವು 2001ನೇ ಸಾಲಿನಿಂದ ಕಾನೂನಿಗನುಗುಣವಾಗಿ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ನಡೆದಿರುವುದು, ಲೆಕ್ಕಪತ್ರಗಳನ್ನು ದಾಖಲಿಸದಿರುವುದು, ಆಡಳಿತ ಮಂಡಳಿ ಚುನಾವಣೆಯನ್ನು ನಡೆಸದಿರುವ ಅಂಶಗಳು ವಿಚಾರಣಾ ಸಂದರ್ಭದಲ್ಲಿ ದೃಡಪಟ್ಟಿರುತ್ತದೆ. ಅಧಿನಿಯಮ ಪ್ರಕರಣ 13ರ ಮೇರೆಗೆ ಬ್ಯಾಲೆನ್ಸ್ ಶೀಟ್ ವಾರ್ಷಿಕ ಆಡಳಿತ ಮಂಡಳಿ ಸದಸ್ಯರ ಪಟ್ಟಿಯನ್ನು ನೋಂದಣಾಧಿಕಾರಿಗೆ ಸಲ್ಲಿಸುವುದು ಸಂಘದ ಕರ್ತವ್ಯವಾಗಿರುತ್ತದೆ. ಸಂಘವು ಸದರಿ ಅಧಿನಿಮಯ ಪ್ರಕರಣವನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿರುತ್ತದೆ.

ಸಂಘವು ಅಧಿನಿಮಯದ ಅವಕಾಶದನ್ವಯ ಆಡಳಿತ ಸಮಿತಿ ಅವಧಿ ಮುಗಿದಿದ್ದರೂ, ಹೊಸ ಆಡಳಿತ ಸಮಿತಿಗೆ ಚುನಾವಣೆ ನಡೆಸಿ, ಸಮಿತಿ ರಚನೆ ಮಾಡಲು ವಿಫಲವಾಗಿರುತ್ತದೆ ಎಂಬ ಅಂಶ ಸರ್ಕಾರದ ಗಮನಕ್ಕೆ ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಪ್ರಕರಣ 27–ಎ ರಂತೆ ಆಡಳಿಗಾರರನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 120 ನ್ಯಾದಾಅ 2010, ಬೆಂಗಳೂರು, ದಿನಾಂಕ : 15–2–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಖಿಲ ಕರ್ನಾಟಕ ಗಾಣಿಗರ ಸಂಘ (ರಿ) ಬೆಂಗಳೂರು ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಮಯ 1960ರ ಪ್ರಕರಣ 27–ಎ ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ ಇವರನ್ನು ಆಡಳಿತಗಾರರನ್ನಾಗಿ ಮೂರು (3) ತಿಂಗಳ ಅವಧಿಗೆ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘಕ್ಕೆ ಸಂಘದ ಆಡಳಿತ ಸಮಿತಿಗೆ ಕಾನೂನಿಗನುಗುಣವಾಗಿ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಸೂಚಿಸಿದೆ. ಆಡಳಿತಗಾರರು ತೆಗೆದುಕೊಂಡ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಸಹ ಒದಗಿಸುವಂತೆ ಸೂಚಿಸಿದೆ. ಆಡಳಿತಗಾರರು ಮೂರು ತಿಂಗಳ ಅವಧಿಯಲ್ಲಿ ಜಿಲ್ಲಾ ನೋಂದಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಗಮನಹರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 604

ಸಹಕಾರ ಇಲಾಖೆ.

ಸಹಕಾರ ಸಚಿವಾಲಯ

ವಿಷಯ : ದಿನಾಂಕ : 31–3–2011ರೊಳಗೆ ನಡೆಸಬೇಕಾಗಿರುವ ಕರ್ನಾಟಕ ದೂರ ಸಂಪರ್ಕ ಇಲಾಖೆಯ ನೌಕರರ ಸಹಕಾರ ಸಂಘ ನಿ. ಬೆಂಗಳೂರು ಇದರ ಆಡಳಿತ ಸಮಿತಿಯ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಿಒ 219 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ : 8–1–2010.
2. ಸರ್ಕಾರದ ಆದೇಶ ಸಂಖ್ಯೆ : ಸಿಒ 154 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ : 13–8–2010.
3. ಅಧ್ಯಕ್ಷರು ಕರ್ನಾಟಕ ದೂರ ಸಂಪರ್ಕ ಇಲಾಖೆಯ ನೌಕರರ ಸಹಕಾರ ಸಂಘ ನಿ. ಬೆಂಗಳೂರು ರವರ ಪತ್ರ.

ಪ್ರಸ್ತಾವನೆ :

ಕರ್ನಾಟಕ ದೂರ ಸಂಪರ್ಕ ಇಲಾಖೆಯ ನೌಕರರ ಸಹಕಾರ ಸಂಘ ನಿ. ಬೆಂಗಳೂರು ಇದರ ಆಡಳಿತ ಸಮಿತಿಗೆ ದಿನಾಂಕ : 30–9–2010 ರೊಳಗೆ ನಡೆಸಬೇಕಾಗಿದ್ದ ಚುನಾವಣೆಯನ್ನು ದಿನಾಂಕ : 31–3–2011 ರವರೆಗೆ ವಿಸ್ತರಿಸಿ ಓದಲಾದ (2)ರ ಆದೇಶದಲ್ಲಿ ಅನುಮತಿ ನೀಡಲಾಗಿದೆ. ಮೇಲೆ ಓದಲಾದ (3)ರ ಪತ್ರದಲ್ಲಿ ಮೇಲ್ಕಂಡ ಸಂಘದ ಚುನಾವಣೆ ನಡೆಯುವ ಸಮಯದಲ್ಲಿ ಕರ್ನಾಟಕ ದೂರ ಸಂಪರ್ಕ ಇಲಾಖೆಯ ನೌಕರರ ಸಂಘದ (B.S.N.L. Employees Union) ಚುನಾವಣೆಯು ರಾಷ್ಟ್ರಮಟ್ಟದಲ್ಲಿ ನಡೆಯುತ್ತಿದ್ದು ಸದಸ್ಯರು ಭಾಗವಹಿಸಲು ತೊಂದರೆಯಾಗುವುದರಿಂದ ದಿನಾಂಕ : 31–3–2011 ರಿಂದ ದಿನಾಂಕ : 31–3–2012ರ ವರೆಗೆ ಒಂದು ವರ್ಷ ಅವಧಿಗೆ ಮುಂದೂಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಒ 20 ಸಿಎಲ್‌ಎಂ 2011, ಬೆಂಗಳೂರು, ದಿನಾಂಕ : 9–2–2011.

ಮೇಲಿನ ಪರಿಸ್ಥಿತಿಯಲ್ಲಿ ಕರ್ನಾಟಕ ದೂರ ಸಂಪರ್ಕ ಇಲಾಖೆಯ ನೌಕರರ ಸಹಕಾರ ಸಂಘ ನಿ. ಬೆಂಗಳೂರು ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಮಯದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಅನ್ನು ಮಾರ್ಪಾಟು ಮಾಡಿ ಸದರಿ ಬ್ಯಾಂಕಿನ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ : 30–9–2011ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ :

ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30–9–2011ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ. ಆರ್. 605

FOREST ECOLOGY AND ENVIRONMENT SECRETARIAT

Sub: Diversion of 0.39 ha. of forest land for Multi Village Water Supply Scheme to Manihal and 9 other villages in Ramdurga Taluk, Ghataprabha Division, Gokak in favour of the Executive Engineer, Panchayat Raj Engineering Division. Belgaum.

Read:
1. Letter No. A5(3)GFL.CR.20/09-10, dated: 25-10-2010 of Principal Chief Conservator of Forests, Bangalore.
2. Government of India letter No. F.No. 11-9/98-FC dated: 16-10-2000, 21-11-2005, 26-12-2007 and 11-09-2009.

Preamble:

The Principal Chief Conservator of Forests, Bangalore vide his letter dated: 25-10-2010 read at (1) above has submitted the proposal for diversion of 0.39 ha. of forest land for construction of (GLSR) raising main water treatment plant and laying water supply pipeline for Multi Village Water Supply Scheme to Manihal and 9 other villages in Ramdurga Taluk, Ghataprabha Division Gokak in favour of the Executive Engineer, Panchayat Raj Engineering Division, Belgaum under the Forest (Conservation) Act, 1980, subject to certain conditions.

This proposal has been examined as per the general approval of Government of India in its letter dated: 16-10-2000, 21-11-2005, 26-12-2007 and 11-09-2009 and it has been decided to accord sanction for diversion of 0.39 ha. of forest land under the Forest (Conservation) Act, 1980. The proposal has been examined in detail and hence the order.

Government Order No.: FEE 170 FLL 2010, Bangalore, Dated: 08-02-2011

In the circumstances explained in the preamble above and in accordance with the general approval given by Government of India in their letters dated: 16-10-2000, 21-11-2005, 26-12-2007 and 11-09-2009, Government is pleased to accord approval under Forest (Conservation) Act, 1980 for diversion of 0.39 ha. of forest land for construction of (GLSR) raising main water treatment plant and laying water supply pipeline for Multi Village Water Supply Scheme to Manihal and 9 other villages in Ramdurga Taluk,

Ghataprabha Division, Gokak in favour of the Executive Engineer, Panchayat Raj Engineering Division, Belgaum under the Forest (Conservation) Act, 1980, subject to the following conditions.

1. The legal status of the forest land shall remain unchanged and it shall continue as forest land.
2. The lease tenure is for a period of 30 (Thirty) years.
3. The lessee shall pay lease rent as fixed by the Government from time to time.
4. The leased out area should be used for the purpose for which it is granted. In case the land is not used for the stipulated purpose within one year or when it no longer needed for the stipulated purpose, the area should be resumed to the Forest Department under Section 82 of Karnataka Forest Act, 1963. The concerned Deputy Conservator of Forests is authorized to take necessary action in this regard. No residential building shall be permitted in the proposed area.
5. The Karnataka Forest Act 1963 and Rules 1969 and other relevant Acts and Rules will be applicable for any violation.
6. The user Agency shall pay the cost of raising Penal Compensatory Afforestation to the extent of 1.00 ha. at the prevailing rate at the time of Sanction. (At present it is Rs. 94,000/- per ha.)
7. The User Agency shall ensure that there should be no damage to the available fauna and flora.
8. Any damage to forest area shall be compensated by the User Agency. The extent of damage shall be assessed by the concerned Deputy Conservator of Forests.
9. The User Agency shall not sub-lease, mortgage and hypothecate the forest land.
10. The User Agency shall abide by all the conditions imposed upon by the Government of India, the Government of Karnataka and the Principal Chief Conservator of Forests (HoFF).

By Order and in the name of the Governor of Karnataka

PR No. 438

H.M. Mallikarjuna Swamy
Under Secretary to Government
Forest, Ecology and Environment Department

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಸಿಆಸುಇ (ಆಸು–ತರಬೇತಿ) ವಿಭಾಗದಲ್ಲಿ ನಿರ್ವಹಿಸಲಾಗುತ್ತಿರುವ ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯನ್ನು ಸಿಆಸುಇ (ಆಸು) ವಿಭಾಗದಿಂದ ಶಾಶ್ವತವಾಗಿ ಸಿಆಸುಇ (ಇ–ಆಡಳಿತ) ವಿಭಾಗಕ್ಕೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ :
1. ಸಿಆಸುಇ (ಆಸು) ಇಲಾಖೆಯ ಸುತ್ತೋಲೆ ಸಂಖ್ಯೆ: ಡಿಪಿಎಆರ್ 81 ಎಎಂಸಿ 86, ದಿನಾಂಕ: 22–05–1986.
2. ಸಿಆಸುಇ (ಆಸು) ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 39 ಅಸಪ 94, ದಿನಾಂಕ: 25–11–1994.
3. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 6 ಟಿಎಫ್‌ಪಿ 2006, ದಿನಾಂಕ: 20–01–2007.

ಪ್ರಸ್ತಾವನೆ:

ಸರ್ಕಾರದ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಪೀಠೋಪಕರಣಗಳು, ಫ್ಯಾನ್/ಕುಡಿಯುವ ನೀರಿನ ವ್ಯವಸ್ಥೆ, ಅಲ್ಮೇರಾ, ಮುಂತಾದ ಸಲಕರಣೆಗಳನ್ನು ಮಂಜೂರು ಮಾಡುವ ಸಲುವಾಗಿ ಲೆಕ್ಕ ಶೀರ್ಷಿಕೆ 2070–00–800–0–04–125 (ಯೋಜನೆ)ರಡಿ ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯು ಹಿಂದಿನಿಂದಲೂ ಜಾರಿಯಲ್ಲಿದೆ. ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ಸರ್ಕಾರದ ಸುತ್ತೋಲೆ ಹಾಗೂ ಅಧಿಕೃತ ಜ್ಞಾಪನದಲ್ಲಿ, ಈ ಯೋಜನೆಯನ್ನು ಜಾರಿಗೊಳಿಸುವ ಸಂಬಂಧ ಹಲವಾರು ಸೂಚನೆಗಳನ್ನು ಹೊರಡಿಸಲಾಗಿತ್ತು. ಅದರಂತೆಯೇ, ಸರ್ಕಾರದ ವಿವಿಧ ಇಲಾಖೆಗಳಿಂದ ಈ ಸಂಬಂಧ ಸ್ವೀಕರಿಸಲಾಗುವ ಕೋರಿಕೆಗಳ ಅನುಸಾರವಾಗಿ ಆಯಾ ಇಲಾಖೆಗಳಿಗೆ ಈ ಯೋಜನೆಯಡಿ ಅಗತ್ಯವಿರುವ ಪೀಠೋಪಕರಣ ಮುಂತಾದವುಗಳನ್ನು ಮಂಜೂರು ಮಾಡಲಾಗುತ್ತಿದೆ.

ಆದರೆ, ಇತ್ತೀಚೆಗೆ ಬಹುತೇಕ ಇಲಾಖೆಗಳು ತಮ್ಮ ಕಛೇರಿಯ ಆಧುನೀಕರಣಕ್ಕಾಗಿ ಅಗತ್ಯವಿರುವ ಕಛೇರಿಯ ಪೀಠೋಪಕರಣಗಳು, ಫ್ಯಾನ್/ಕುಡಿಯುವ ನೀರಿನ ವ್ಯವಸ್ಥೆ ಅಲ್ಮೇರಾ, ಕಂಪ್ಯೂಟರ್ಸ್ ಮುಂತಾದ ಸಲಕರಣೆಗಳನ್ನು ಆಯಾ ಇಲಾಖೆಗೆ ನಿಗದಿಪಡಿಸಿರುವ ಆಯವ್ಯಯದಲ್ಲಿ/ಕೇಂದ್ರ ಸರ್ಕಾರದ ಯೋಜನೆಗಳಲ್ಲಿ/ಇತರೆ ಪ್ರಾಜೆಕ್ಟ್‌ಗಳಡಿಯಲ್ಲಿ ಖರೀದಿಸುತ್ತಿದ್ದಾರೆ. ಇದಲ್ಲದೆ, ಇದರ ಜೊತೆಗೆ ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯಡಿಯಲ್ಲೂ ಸಹ ಮೇಲ್ಕಂಡ ಪೀಠೋಪಕರಣಗಳು/ಸಲಕರಣೆಗಳು/ಕಂಪ್ಯೂಟರ್ ಮುಂತಾದವುಗಳನ್ನು ಮಂಜೂರು ಮಾಡುವಂತೆ ಕೋರಿಕೆಗಳನ್ನು ಸಿಆಸುಇ (ಆಸು) ಇಲಾಖೆಗೆ ಸಲ್ಲಿಸುತ್ತಿರುವುದು ಕಂಡು ಬಂದಿದೆ. ಇದರಿಂದಾಗಿ ಯಾವ ಯಾವ ಇಲಾಖೆಯಲ್ಲಿ ಎಷ್ಟು ಪ್ರಮಾಣದಲ್ಲಿ ಕಛೇರಿ ಆಧುನೀಕರಣಕ್ಕೆ ಸಂಬಂಧಿಸಿದ ಪೀಠೋಪಕರಣಗಳು/ಸಲಕರಣೆಗಳು/ ಕಂಪ್ಯೂಟರ್‌ಗಳನ್ನು ಖರೀದಿಸಲಾಗಿದೆ ಹಾಗೂ ಈ ಸಂಬಂಧ ಇಲಾಖೆಯ ಅವಶ್ಯಕತೆಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಇರುವುದಿಲ್ಲ. ಅಲ್ಲದೆ, ವಿವಿಧ ಮೂಲಗಳಿಂದ ಇಂತಹ ಪೀಠೋಪಕರಣಗಳು/ಸಲಕರಣೆಗಳು/ಕಂಪ್ಯೂಟರ್‌ಗಳನ್ನು ಖರೀದಿಸುವ ಬದಲಾಗಿ, ಇವುಗಳನ್ನು ಆಯಾ ಆಡಳಿತ ಇಲಾಖೆಯ ವತಿಯಿಂದ ಖರೀದಿಸುವುದು ಸೂಕ್ತವೆಂದು ಪರಿಗಣಿಸಲಾಗಿದೆ. ಇದಲ್ಲದೆ, ಇತ್ತೀಚೆಗೆ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಕಛೇರಿಯ ಆಧುನೀಕರಣಕ್ಕಾಗಿ ವಸ್ತುಗಳನ್ನು ಖರೀದಿಸುವ ಸಲುವಾಗಿ ಪ್ರತಿಯೊಂದು ಆಡಳಿತ ಇಲಾಖೆಯ ಮಟ್ಟದಲ್ಲಿ TAP ಸಮಿತಿಯನ್ನು ರಚಿಸಲಾಗಿದೆ. ಇದರಿಂದಾಗಿ, ಆಯಾ ಆಡಳಿತ ಇಲಾಖೆಯ ಹಂತದಲ್ಲಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗಳಲ್ಲಿ ಅನುದಾನವನ್ನು ಒದಗಿಸುವುದರ ಮೂಲಕ ಆಯಾ ಇಲಾಖೆಯ ಕಛೇರಿ ಆಧುನೀಕರಣಕ್ಕಾಗಿ ಅಗತ್ಯವಿರುವ ವಸ್ತುಗಳನ್ನು ಖರೀದಿಸಲು ಅವಕಾಶವಿರುತ್ತದೆ.

ಇದಲ್ಲದೆ, ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಆದೇಶದಲ್ಲಿ ಆಯಾ ಇಲಾಖೆಗೆ ಸಣ್ಣ ಪ್ರಮಾಣದಲ್ಲಿ ಅಗತ್ಯವಿರುವ Computers and peripherals ಗಳನ್ನು TAP ಸಮಿತಿಯ ಅನುಮೋದನೆಯೊಂದಿಗೆ ಖರೀದಿಸಲು ವಿವಿಧ ಇಲಾಖಾ ಮುಖ್ಯಸ್ಥರುಗಳಿಗೆ ವಿಶೇಷ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಮೇಲ್ಕಂಡ ಕಾರಣಗಳ ಹಿನ್ನೆಲೆಯಲ್ಲಿ, ಈ ಯೋಜನೆಯನ್ನು ಯಾವ ಇಲಾಖೆಯಲ್ಲಿ ನಿರ್ವಹಿಸಬೇಕು ಎಂಬುದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಇನ್ನು ಮುಂದೆ ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯಡಿ ಕಛೇರಿಯ ಪೀಠೋಪಕರಣಗಳು, ಫ್ಯಾನ್/ಕುಡಿಯುವ ನೀರಿನ ವ್ಯವಸ್ಥೆ, ಅಲ್ಮೇರಾ, ಕಂಪ್ಯೂಟರ್ಸ್ ಮುಂತಾದ ಸಲಕರಣೆಗಳನ್ನು ಸದರಿ ಯೋಜನೆಯಡಿ ಮಂಜೂರು ಮಾಡುವ ಅವಶ್ಯಕತೆ ಇರುವುದಿಲ್ಲವೆಂದು ನಿರ್ಣಯಿಸಲಾಗಿದೆ. ಇದಲ್ಲದೆ, ಸಿಆಸುಇ (ಇ–ಆಡಳಿತ) ವಿಭಾಗದ ವತಿಯಿಂದ ಸರ್ಕಾರದ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಪೇಪರ್‌ಲೆಸ್ ಸಾಫ್ಟ್‌ವೇರ್/ಕಛೇರಿಗಳ ಕಂಪ್ಯೂಟರೀಕರಣಕ್ಕಾಗಿ ಅಗತ್ಯವಿರುವ ಸಲಕರಣೆಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ. ಆದುದರಿಂದ, ಇನ್ನು ಮುಂದೆ ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯಡಿ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಪೇಪರ್‌ಲೆಸ್ ಸಾಫ್ಟ್‌ವೇರ್/ಕಛೇರಿಗಳ ಕಂಪ್ಯೂಟರೀಕರಣಕ್ಕಾಗಿ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಮಂಜೂರು ಮಾಡುವ ಸಲುವಾಗಿ ವಿವಿಧ ಇಲಾಖೆಗಳು ತಮ್ಮ ಕೋರಿಕೆಯನ್ನು ಸದರಿ ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯಡಿ ನೇರವಾಗಿ ಸಿಆಸುಇ (ಇ–ಆಡಳಿತ) ಇಲಾಖೆಗೆ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ.

ಮೇಲ್ಕಂಡ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 230 ಇಆತ 2010 ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ, 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ವಿವಿಧ ಇಲಾಖೆಗಳಿಂದ ಪೇಪರ್‌ಲೆಸ್ ಸಾಫ್ಟ್‌ವೇರ್/ಕಛೇರಿಗಳ ಕಂಪ್ಯೂಟರೀಕರಣಕ್ಕಾಗಿ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯಡಿ ಮಂಜೂರು ಮಾಡುವ ಸಲುವಾಗಿ ಸಿಆಸುಇ (ಆಸು) ಇಲಾಖೆಯಲ್ಲಿ ಪ್ರಸ್ತುತ ನಿರ್ವಹಿಸಲಾಗುತ್ತಿರುವ ಲೆಕ್ಕ ಶೀರ್ಷಿಕೆ **"2070–00–800–0–04–125 – ಸರ್ಕಾರಿ ಕಛೇರಿಗಳ ಆಧುನೀಕರಣ – ಆಧುನೀಕರಣ (ಯೋಜನೆ)"** ರಡಿಯಲ್ಲಿನ ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯನ್ನು 2010–11ನೇ ಸಾಲಿನಿಂದ ಅನ್ವಯವಾಗುವಂತೆ ಶಾಶ್ವತವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1027 ವೆಚ್ಚ–12/2010, ದಿನಾಂಕ: 19–01–2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಬ್ದುಲ್ ರೆಹಮಾನ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು–ತರಬೇತಿ)

ಪಿ.ಆರ್. 439

ವಸತಿ ಸಚಿವಾಲಯ

ವಿಷಯ : ಸರ್ಕಾರವು ಮಂಜೂರು ಮಾಡಿರುವ ಹುದ್ದೆಗಳನ್ವಯ ಮಂಡಳಿಯಲ್ಲಿ ವಿಭಾಗ ಮತ್ತು ಉಪವಿಭಾಗಗಳನ್ನು ಹೊಸದಾಗಿ ಸ್ಥಾಪಿಸಿ ಕಾರ್ಯಕ್ಷೇತ್ರಗಳನ್ನು ಮರುವಿಂಗಡಣೆ ಮಾಡಿ ಅಧಿಕಾರಿ/ನೌಕರರನ್ನು ನಿಯೋಜಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: 10 ಕೋಮಂಸೇ 2009, ಬೆಂಗಳೂರು ದಿನಾಂಕ: 15–07–2010.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ವಹಿ 03:ಕೋಮಂಸೇ 2006, ಬೆಂಗಳೂರು ದಿನಾಂಕ: 03–11–2010.
3. ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಇವರ ದಿನಾಂಕ: 14–01–2011ರ ಪತ್ರ ಸಂಖ್ಯೆ: ಕಕೊಆಮ/ಆಯುಕ್ತರು/ಆಡಳಿತ/2010–11.

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ(1)ರ ಆದೇಶದಲ್ಲಿ ಸರ್ಕಾರವು ಅಂದಿನ ಕಾರ್ಯ ಒತ್ತಡಕ್ಕೆ ಹಾಗೂ ಆಯವ್ಯಯಕ್ಕೆ ಅನುಗುಣವಾಗಿ ವಿವಿಧ ವರ್ಗಗಳ 219 ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, ಇತ್ತೀಚೆಗೆ ಮಂಡಳಿಯ ಕಾರ್ಯ ಬಾಹ್ಯುಳ್ಳವು ವಿಸ್ತರಣೆಯಾಗಿರುವ ಹಿನ್ನೆಲೆಯಲ್ಲಿ ಮಂಡಳಿಯ ವ್ಯಾಪ್ತಿಯಲ್ಲಿನ 5 ವಿಭಾಗಗಳಲ್ಲಿ 15 ಉಪವಿಭಾಗಗಳ ಜೊತೆಗೆ ಹೊಸದಾಗಿ 6 ವಿಭಾಗ ಹಾಗೂ 5 ಉಪವಿಭಾಗ ಕಛೇರಿಗಳನ್ನು ಸ್ಥಾಪಿಸುವ ಸಲುವಾಗಿ ವಿವಿಧ ವರ್ಗದ ಒಟ್ಟಾರೆ 105 ವಿವಿಧ ವರ್ಗದ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಮಂಜೂರು ಮಾಡಿರುತ್ತದೆ.

ಉಲ್ಲೇಖ (2)ರಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳ ಸಂಬಂಧವಾಗಿ ದಿನಾಂಕ 03–11–2010 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಉಲ್ಲೇಖ (3)ರಲ್ಲಿ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರ ಪತ್ರದಲ್ಲಿ ದಿನಾಂಕ: 15–07–2010ರಲ್ಲಿ ಒಟ್ಟಾರೆ 105 ವಿವಿಧ ವರ್ಗದ ಹುದ್ದೆಗಳು ಮಂಜೂರಾಗಿರುವುದರಿಂದ ಆರ್ಥಿಕ ಹೊರೆಯಾಗುವುದಿಲ್ಲದಿರುವುದರಿಂದಲೂ ಹಾಗೂ ಮಂಡಳಿಯ ವಿವಿಧ ಯೋಜನೆಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಲಿ ಇರುವ 5 ವಿಭಾಗಗಳು ಮತ್ತು 15 ಉಪ ವಿಭಾಗ ಕಛೇರಿಗಳ ಜೊತೆಗೆ, ಹೊಸದಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರ 6 ವಿಭಾಗ ಕಛೇರಿಗಳು ಅಂದರೆ ನಂ. 2ನೇ ವಿಭಾಗ ಬೆಂಗಳೂರು, ನಂ.3ನೇ ವಿಭಾಗ ಬೆಂಗಳೂರು, ನಂ 2ನೇ ವಿಭಾಗ ಮೈಸೂರು, ಶಿವಮೊಗ್ಗ ವಿಭಾಗ, ಬೆಳಗಾವಿ ವಿಭಾಗ ಹಾಗೂ ಕೇಂದ್ರ ಕಛೇರಿಯ ತಾಂತ್ರಿಕ ಶಾಖೆಯ ಡೆಪ್ಯೂಟಿ ಚೀಫ್ ಇಂಜಿನಿಯರ್‌ರ ಕಾರ್ಯನಿರ್ವಹಣೆ ಶಾಖೆ ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರ 5 ಉಪವಿಭಾಗಗಳ ಕಛೇರಿ ಅಂದರೆ ನಂ. 2ನೇ ಉಪವಿಭಾಗ ಮೈಸೂರು, ಮಂಡ್ಯ ಉಪವಿಭಾಗ, ಮಂಗಳೂರು ಉಪವಿಭಾಗ, ದಾವಣಗೆರೆ ಉಪವಿಭಾಗ ಹಾಗೂ ಗದಗ ಉಪವಿಭಾಗಗಳ ಕಛೇರಿಗಳನ್ನು ಸ್ಥಾಪಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ಕೋರುವುದರೊಂದಿಗೆ ಸ್ಥಾಪಿಸಲು ಕಾರ್ಯಕ್ಷೇತ್ರಗಳ ಮರುವಿಂಗಡಣೆ ಬಗ್ಗೆ ನಮೂನೆಗಳಲ್ಲಿ ವಿವರಗಳನ್ನು ತಯಾರಿಸಿ ಅನುಮೋದನೆಗಾಗಿ ಹಾಗೂ ದಿನಾಂಕ: 28–12–2010ರ ಇಲಾಖಾ ಪದೋನ್ನತಿ ಸಮಿತಿಯ ತೀರ್ಮಾನದಂತೆ ಮುಂಬಡ್ತಿ ಹೊಂದಿರುವ ಅಧಿಕಾರಿ/ನೌಕರರುಗಳನ್ನು ಸ್ಥಳ ನಿಯುಕ್ತಿಗೊಳಿಸಲು ಸಹ ಸರ್ಕಾರದ ಅನುಮೋದನೆ ಕೋರಿರುತ್ತಾರೆ. ಮಂಡಳಿಯ ಪ್ರಸ್ತಾವನೆಯನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ, ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ವಇ 53 ಕೊಮಂಇ 2010 ಬೆಂಗಳೂರು, ದಿನಾಂಕ: 01-02-2011.

ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವಿವಿಧ ಯೋಜನೆಗಳ ಕಾರ್ಯಕ್ರಮಗಳನ್ನು ಸಮರ್ಥ ರೀತಿಯಲ್ಲಿ ಹಾಗೂ ಯಶಸ್ವಿಯಾಗಿ ನಿರ್ವಹಿಸಲು, ಆಡಳಿತಾತ್ಮಕ ಹಿತದೃಷ್ಟಿಯಿಂದ, ಹಾಲಿ ಇರುವ 5 ವಿಭಾಗ ಕಛೇರಿಗಳ ಜೊತೆಗೆ ಹೊಸದಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರ 6 ವಿಭಾಗ ಕಛೇರಿಗಳು ಅಂದರೆ ನಂ. 2ನೇ ವಿಭಾಗ ಬೆಂಗಳೂರು. ನಂ.3ನೇ ವಿಭಾಗ ಬೆಂಗಳೂರು, ನಂ. 2ನೇ ವಿಭಾಗ ಮೈಸೂರು, ಶಿವಮೊಗ್ಗ ವಿಭಾಗ, ಬೆಳಗಾವಿ ವಿಭಾಗ, ಕೇಂದ್ರ ಕಛೇರಿಯ ತಾಂತ್ರಿಕ ಶಾಖೆಯ ಡೆಪ್ಯೂಟಿ ಚೀಫ್ ಇಂಜಿನಿಯರ್‌ರ ಕಾರ್ಯನಿರ್ವಾಹಕ ಶಾಖೆ ಮತ್ತು ಹಾಲಿ ಇರುವ 15 ಉಪ ವಿಭಾಗ ಕಛೇರಿಗಳ ಜೊತೆಗೆ ಹೊಸದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರ 5 ಉಪವಿಭಾಗ ಕಛೇರಿಗಳು ಅಂದರೆ ನಂ. 2ನೇ ಉಪವಿಭಾಗ ಮೈಸೂರು, ಮಂಡ್ಯ ಉಪವಿಭಾಗ, ಮಂಗಳೂರು ಉಪವಿಭಾಗ, ದಾವಣಗೆರೆ ಉಪವಿಭಾಗ ಹಾಗೂ ಗದಗ ಉಪವಿಭಾಗದ ಕಛೇರಿಗಳನ್ನು ಸ್ಥಾಪಿಸಲು (ಕಾರ್ಯಕ್ಷೇತ್ರಗಳ ಮರುವಿಂಗಡಣೆಯ ಅನುಬಂಧದಲ್ಲಿ ಇರುವಂತೆ) ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಜಿ.ಆರ್. ನಾಗರಾಜ
ಪೀಠಾಧಿಕಾರಿ-4, ವಸತಿ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ವಇ 53 ಕೊಮಂಇ 2010, ಬೆಂಗಳೂರು ದಿನಾಂಕ: 01-02-2011ರ ಅನುಬಂಧ

LOCATIONS OF DIVISIONS & SUBDIVISIONS

Sl. No.	Divisions	EE's	ARO's	Sub-Divisions	AEE's	Superintendent's	Jurisdiction
1	Executive Engineer	EE			TA		Working as a Deputy Chief Engineer to TD-1 & TD-2 and Estate Office (Central Office & Board assests Maintenance) & Laggere Projects.
2	Bangalore Division-1	EE-1	A/C Supdt	Bengaluru- Sub Divn-1	AEE	Supt	Chamarajpet, Basavanagudi, Jayanagar, Padmanabhanagar, Bangalore South Vijayanagar, Govindarajanagar, Constituencies & Ramanagar District Constituencies.
				Bengaluru Sub Divn-2	AEE	Supt	Gandhinagar, Chikkapet, B.T.M. Layout, Shanthinagar, Shivajinagar, Bommanahalli & Anekal Constituencies.
3	Bengaluru Division-2	EE - 2	A/C Supdt	Bengaluru-3	AEE	Supt	C.V. Rama-nagar, Sarvajnanagara K.R. Puram, Mahadevapura, Hosakote Constituency & Kolar District Constituencies.
				Bengaluru Sub Divn-4	AEE	Supt	Malleshwaram, Hebbal, Yelahanka, Pulikeshinagar, Byatarayanapur, Doddaballapura, Devanahalli, Constituencies.
4	Bengaluru Division-3	EE-3	ARO	Bengaluru Sub Divn - 5	AEE	Supt	Yeshwanthpura, Rajarajeshwarinagar, Dasarahalli, Mahalakshmi Layout, Rajajinagar & Nelamangala Constituencies.
				Tumkur Sub Divn	AEE	Supt	Tumkur District
							Chikkaballapur District
5	Mysooru Division-1	EE	ARO	Mysooru Sub Divn-1	AEE	Supt	Chamundeswari, Narashimaraja, K.R. Nagara, Hunsur, Periyapatna Constituencies & Kodagu District Constituencies.
				Hassan Sub Divn.	AEE	Supt	Hassan District
							Chikkamagalur District
6	Mysooru Division-2	EE		Mysooru Sub Divn-2	AEE	Supt	Krishnaraja, Chamaraja, T. Narasipura, Bannur, Nanjanagudu & H.D. Kote Constituencies.
				Mysooru Sub Divn	AEE	Supt	Chamarajanagar District
							Mandya District

7	Shivamogga Division	EE	ARO	Shivamogga Sub Divn	AEE	Supt	Shivamogga District
							Haveri District
				Shivamogga Sub Divn	AEE	Supt	Mangalore District
							Udupi District
8	Davanagere Division	EE	ARO	Davanagere Sub Divn	AEE	Supt	Davanagere District
							Chitradurga District
				Bellary Sub Divn	AEE	Supt	Bellary District
9	Dharwad Division	EE	ARO	Dharawada Sub Divn	AEE	Supt	Dharwada District
							Hubli District
				Gadaga Sub Divn			Gadaga District
					AEE	Supt	Koppala District
10	Belagavi Division	EE	ARO	Belagavi Sub Divn	AEE	Supt	Belagavi District
							Karawara District
				Bijapura Sub Divn	AEE	Supt	Bijapura District
							Bagalkote District
11	Gulbarga Division	EE	ARO	Gulbarga Sub Divn	AEE	Supt	Gulbarga District
							Bidar District
				Raichur Sub Divn	AEE	Supt	Raichur District
							Yadgir District

ಪಿ.ಆರ್. 440

ಜಿ.ಆರ್. ನಾಗರಾಜ
ಪೀಠಾಧಿಕಾರಿ–4, ವಸತಿ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ: ಬ್ಲೂ ಪಾಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 6.4 ಮೆಗಾ ವ್ಯಾಟ್‌ಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 25 ಎನ್‌ಸಿಇ 2008 ದಿನಾಂಕ: 16–07–2009.
2. ಸೇರ್ಪಡೆ ಆದೇಶ ಸಂಖ್ಯೆ: ಇಎನ್ 25 ಎನ್‌ಸಿಇ 2008 ದಿನಾಂಕ: 22–09–2009.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್–326/ಕೋಟೆಭಾವಿ/117 ದಿನಾಂಕ: 29–12–2010/01–01–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದಲ್ಲಿ ಮೆ: ಬ್ಲೂ ಪಾಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಕೋಟೆಭಾವಿ ಗ್ರಾಮದ ಬಳಿ ಕಂದನಿಹಳ್ಳಕ್ಕೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸೇರ್ಪಡೆ ಆದೇಶದಲ್ಲಿ ಆದೇಶ ಭಾಗದ ಮೊದಲನೆ ಕಂಡಿಕೆಯಲ್ಲಿ "Weir-Longitude: 74^{0}20'10" Latitude: 14^{0}44'55" Power House Longitude: 74^{0}20'40" Latitude: 14^{0}46'00" ಯನ್ನು ಸೇರ್ಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಸದರಿ ಯೋಜನೆಯ ಸ್ಥಳದಲ್ಲಿ ಲಭ್ಯವಿರುವ ನೀರಿನ ಎತ್ತರ ಹಾಗೂ ಹರಿವನ್ನು ಉಪಯೋಗಿಸಿಕೊಂಡು ಸಾಮರ್ಥ್ಯವನ್ನು 4.00 ಮೆಗಾ ವ್ಯಾಟ್‌ನಿಂದ 6.4 ಮೆಗಾ ವ್ಯಾಟ್‌ಗೆ ಹೆಚ್ಚಿಸಬಹುದೆಂದು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 11 ಎನ್‌ಸಿಇ 2011 ಬೆಂಗಳೂರು, ದಿನಾಂಕ: 04–02–2011.

ಮೆ: ಬ್ಲೂ ಪಾಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಕೋಟೆಭಾವಿ ಗ್ರಾಮದ ಬಳಿ ಕಂದನಿಹಳ್ಳಕ್ಕೆ ಅಡ್ಡಲಾಗಿ ಹಂಚಿಕೆಯಾಗಿರುವ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 6.4 ಮೆಗಾ ವ್ಯಾಟ್‌ಗೆ (3 ಮೆಗಾ ವ್ಯಾಟ್ 1ನೇ ಹಂತದಲ್ಲಿ ಹಾಗೂ 3.4 ಮೆಗಾ ವ್ಯಾಟ್ 2ನೇ ಹಂತದಲ್ಲಿ) ಹೆಚ್ಚಿಸಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 441

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಹೊಸ ಮುಗಳಗೆರೆ ಗ್ರಾಮದ ಬಳಿ ಕುಮುದ್ವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಸನೀಇ 57 ಅಪಿಬಂ 2007 ದಿನಾಂಕ: 13–03–2007.
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ: ಮುಸ(ದ)/ತಾಂ3/ಸ.ಇಂ.8/ಶಿವಮೊಗ್ಗ/ಇ–ಟೆಂಡರ್/2010–11/80 ದಿನಾಂಕ: 06–01–2011.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರುರವರ ದಿನಾಂಕ: 22–01–2011 ಪತ್ರ ಸಂಖ್ಯೆ: ಮುಸದ/ಆಪ್ತಶಾಖೆ/ಟೆಂಡರ್/08–09/249.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 4702 ಶೀರ್ಷಿಕೆ ಅಡಿ ರೂ. 130.00 ಲಕ್ಷ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ಬೆಂಗಳೂರುರವರ ನೋಂದಣಿ ಸಿ.ಇ.ಆರ್ ಸಂಖ್ಯೆ: 245/2006–07 ದಿನಾಂಕ 29–03–2007ರಲ್ಲಿ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ಟೆಂಡರ್ ಮುಖಾಂತರ ಶ್ರೀ ಎಸ್.ಕೆ. ಲಿಂಗರಾಜ್ ಇವರಿಗೆ ವಹಿಸಲಾಗಿತ್ತು. ಸದರಿ ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸದ ಕಾರಣ ಇವರ ಟೆಂಡರನ್ನು ರದ್ದುಪಡಿಸಿ ಮರು ಟೆಂಡರ್ ಕರೆಯಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಶಿವಮೊಗ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಶಿವಮೊಗ್ಗ ಜಿಲ್ಲಾ ಟೆಂಡರ್ ಬುಲೆಟಿನ್	27–11–2010
ರಾಜ್ಯ ಟೆಂಡರ್ ಬುಲೆಟಿನ್	25–11–2010
ಕನ್ನಡ ಪ್ರಭಾ ಹಾಗೂ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆ	26–11–2010

ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ದಿನಾಂಕ 20–12–2010 ರಂದು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬ ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಹಾಗೂ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು 23–12–2010 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,16,85,293/–
2010–11ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಂತೆ ಪರಿಷ್ಕೃತ ಟೆಂಡರಿಗೆ ಇಡಲಾದ ಮೊತ್ತ	ರೂ. 1,58,98,134/–

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕೃತ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎಸ್. ಮಾದವರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು	1,81,89,506/–	55.66 ಹೆಚ್ಚು	14.41 ಹೆಚ್ಚು

ಮೇಲ್ಕಂಡಂತೆ ಶ್ರೀ ಎಸ್. ಮಾದವರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.41 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ: 06–01–2011 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,58,98,134/–ಗಳ ಮೇಲೆ ಶೇ. 7.00 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ಶ್ರೀ ಎಸ್. ಮಾದವರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಟೆಂಡರನ್ನು ಪರಿಷ್ಕೃತ ಮೊತ್ತದ ಮೇಲೆ ಶೇಕಡ 3.00 ರಷ್ಟು ಹೆಚ್ಚಿನ ದರಗಳಲ್ಲಿ ಅಂದರೆ ರೂ. 1,63,75,078/–ಗಳಿಗೆ ಕಾಮಗಾರಿಯನ್ನು ಶ್ರೀ ಎಸ್. ಮಾದವರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 04 ಅಪಿಬಿಂ 2011 ಬೆಂಗಳೂರು, ದಿನಾಂಕ: 04ನೇ ಫೆಬ್ರವರಿ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಹೊಸ ಮುಗಳಗೆರೆ ಗ್ರಾಮದ ಬಳಿ ಕುಮುದ್ವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,58,98,134/–ಗಳ ಮೇಲೆ ಶೇ. 3.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,63,75,078/–ಗಳಿಗೆ (ರೂ. ಒಂದು ಕೋಟಿ ಅರವತ್ತ ಮೂರು ಲಕ್ಷ ಎಪ್ಪತ್ತೈದು ಸಾವಿರದ ಎಪ್ಪತ್ತೆಂಟು ಮಾತ್ರ) ಕಾಮಗಾರಿಯನ್ನು ಶ್ರೀ ಎಸ್. ಮಾದವರೆಡ್ಡಿ 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–01–2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 442

COMMERCE & INDUSTRIES SECRETARIAT

Sub :- Approval to the Project Proposal of M/s. Jamkhandi Sugars Ltd., to Unit-II for "Expansion of Plant Capacity from 2500 TCD to 3500 TCD & Co-Generation from 12 MW to 27 MW" at Nad-KD Village, Indi Taluk, Bijapur District.

Read :- Proceedings of the 24th State High Level Clearance Committee (SHLCC) Meeting held on 24-01-2011.

Preamble:-

M/s. Jamkhandi Sugars Ltd.,proposes to Unit-II for "Expansion of Plant Capacity from 2500 TCD to 3500 TCD & Co-Generation from 12 MW to 27 MW" at Nad-KD Village, Indi Taluk, Bijapur District, with an investment of Rs. 179.67 Crores, generating employment to about 300 persons.

In the 24th State High Level Clearance Committee (SHLCC) Meeting held on 24-01-2011, the proposal of the Company was discussed and approved.

Government has examined the recommendations made by the State High Level Clearance Committee in the 24th meeting held on 24-01-2011, in all aspects.

Hence the following Order

Government Order No. CI 56 SPI 2011, Bangalore, Dated 23-02-2011

Government is pleased to accord in principle approval to the Project Proposal of M/s. Jamkhandi Sugars Ltd., to Unit-II for "Expansion of Plant Capacity from 2500 TCD to 3500 TCD & Co-Generation from 12 MW to 27 MW" at Nad-KD Village, Indi Taluk, Bijapur District, with an investment of Rs. 179.67 Crores, generating employment to about 300 persons and extend the following infrastructure facilities, incentives and concessions.

Infrastructure Facilities:

1. **Land:** 98.04 acres in Nad-KD village, Indi Taluk, Bijapur District to be purchased U/s 109 of KLR act and conversion of the same for Industrial use.
2. **Water:** 300 KLPD from Bhima river, Subject to approval of the Water Resources Department.
3. **Power:** 2500 KVA to be serviced by HESCOM
4. **Incentives & Concessions:** As per Industrial Policy of the State

GENERAL TERMS AND CONDITIONS:

1. **Environment:** The promoters to obtain CFE and CFO from KSPCB and environmental clearance from MOEF, GOI.

2. **Employment:** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development:** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others:**
   a) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka
A. V. Srinivasa Dikshit
Desk Officer (Technical Cell)
Commerce & Industries Department

PR. No. 586

INFRASTRUCTURE DEVELOPMENT SECRETARIAT

Sub :- Construction of Kolar-Chikkaballapura railway line. (Gauge Conversions)

Read :-
1. GO NO. IDD 35 NSW 09, dated 24-04-2009
2. GO NO. IDD 80 NSW 09, dated 03-09-2010
3. Letter No. W63/CN/BNC/MR/B/GL, dated 31-03-2010 from CE/CON, EAST/SWR, Bangalore.

Preamble:-

Railways are one of the most convenient and widely used means of travel in India and also a very critical component in the logistics. The use of rail network for freight and passenger transport has the potential to reduce road congestion, improve safety, improve economic efficiencies and reduce environmental impacts. To increase the rail density in the State, the State Govt. had taken initiatives to take up rail projects on cost sharing basis (50:50, 2/3rd and 1/3rd etc.,) since 2002. Keeping in view the facts that the allocations for railways has to be increased for early commissioning of railway projects, the State Government has decided to undertake some of the ongoing railway projects in the State, also on cost sharing basis.

Accordingly in G.O. read at (1) above, Government of Karnataka decided to take up the balance work of Kolar-Chikkaballapura gauge conversion railway project on (50:50 cost sharing basis between GoK & Railway). This project was sanctioned during 2006-2007 and the total length of the project is 90 kms & cost of the project is ₹ 287.99 crore. The expenditure so far is ₹ 107.83 crore, the project is being taken up from 2010-11 onwards on cost sharing basis between railways and GoK from 2010-11.

In Go no read at [2] above Gok has released an amount of Rs. 30.00 crore towards Kolar-Chikkaballapur railway line.

The Chief Engineer, South western Railway, Bagalore in his letter read at Sl. No. (3) above, has stated that the total releases made by Railways upto 31-03-2010 is Rs. 107.83 crores and the balance amount of Rs. 180.16 crores is to be shared equally by Railway/GoK. He has stated that the deposit required from GoK for this year is ₹ 15.00 crore.

The proposal of Railways has been examined and it has been decided to release an amount of ₹ 15.00 crore (Rupees Fifteen crore only) out of the Budget of ₹ 272.50 crore provided under the head of Account “5465-01-190-3-05 (Plan) 211 investment” towards cost sharing for new railway projects during 2010-11.

Hence this order

Government Order No. IDD 80 NSW 2009, Bangalore, Dated 23-02-2011

After careful examination of the request of Railways, Government is pleased to undertake the balance project work of Construction of Kolar-Chikkaballapura Gauge Conversion railway line on 50:50 cost sharing basis and to release an amount of ₹ 15.00 crore (Rupees Fifteen Crore only) being the part of the share of GoK.

The expenditure shall be met under the Head of Account “5465-01-190-3-05” (Plan) 211 investment out of the budget provision Rs. 272.50 crore towards cost sharing for new railway projects during 2010-11.

Railway Department should furnish the amount expended to the project and work completed or the utilization statement befor seeking the next release.

The Financial Advisor and Chief Accounts Officer, Construction, South Western Railway, Bangalore is authorized to draw the amount on a payee's receipt duly countersigned by the Under Secretary to Govt., IDD.

This order is issued in accordance with the concurrence of Finance Department given, vide, U.O. Note No. FD 82 Exp-1/2011, dated 07-02-2011.

By Order and in the name of the Governor of Karnataka

C. A. Baburavindranath Patel

Under Secretary to Government

PR. No. 587 Infrastructure Development Department

INFRASTRUCTURE DEVELOPMENT SECRETARIAT

Sub :- Bagalkot-Kudachi New Broad-gauge line

Read :-

1. GO NO. IDD 35 NSW 09, dated 24-04-2009
2. D. O. Letter No. 2000/PL/88/12, dated 28/29-06-2010 of The Executive Director/Perspective planning, Ministry of Railway Board, New Delhi.
3. Letter No. W63/CN/BNC/MR/B/GL, dated 31-12-2010 Chief Engineer, Constn/East/SWR, Bangalore.

Preamble:-

Railways are one of the most convenient and widely used means of travel in India and also a very critical component in the logistics. The use of rail network for freight and passenger transport has the potential to reduce road congestion, improve safety, improve economic efficiencies and reduce environmental impacts. To increase the rail density in the State, the State Govt. had taken initiatives to take up new rail projects on cost sharing basis (50:50, 2/3rd and 1/3rd etc.,) since 2002. Keeping in view the facts that the allocations for railways has to be increased for early commissioning of railway projects, the State Government has decided to undertake some of the new railway projects in the State, also on cost sharing basis.

Accordingly in G.O. read at (1) above, Government of Karnataka has accorded approval to take up Kudachi-Bagalkot New Railway line on PPP basis. The executive Director/Perspective planning, Ministry of Railway Board, has stated in his letter read at (2) above the project has been sanctioned in 2010-11 budget on cost sharing basis. In addition GOK agreed for providing of Land free of cost. Total cost of the project is Rs. 816.14 crore (Railway's share-408.07 GOK's share-408.07) and total length of the project is 144.05 Km. the total land requirement for these project is (782 acres and 34 guntas) 316.82 hectares in Bagalkot-Badami-Mudol in 20 villages. Ministry of Railways is taking this project in III phases i.e. 0-0.58 km. 58 km-102 km.102 km-142 km. The project is being taken up on 50:50 sharing basis between Government of Karnataka & Ministry of Railways from 2011-12 onwards.

The Chief Engineer, South Western Railway, Bagalore in his letter read at Sl. No. (3) above, has requested to release an amount of Rs. 10.00 crores towards cost of land acquisition for I Phase from Bagalkot and covering 12 villages, covering a total area of 385 acres to Deputy Commissioner, Bagalkot towards Kudachi-Bagalkot new Railway line.

The proposal of Railways has been examined and it has been decided to release an amount of ₹ 10.00 crore (Rupees Ten crores only) out of the Budget of ₹ 40.00 crore provided under the head of Account "5465-01-190-3-05-133 Special Development Plan" during 2010-11.

Hence this order

Government Order No. IDD 46 NSW 2010, Bangalore, Dated 25-02-2011

After careful examination of the request of Railways, Government is pleased to share the Construction of new railway line 2010-11 onwards on 50:50 cost sharing basis and to release an amount of ₹ 10.00 crores (Rupees Ten Crores only) being the cost of land acquisition for Kudachi-Bagalkot.

The expenditure shall be met under the Head of Account "5465-01-190-3-05-133" Special Development Plan" out of the Budget of ₹ 40.00 crores during 2010-11.

The Deputy Commissioner, Bagalkot is authorized to draw the amount on a payee's receipt duly countersigned by the Under Secretary to Govt., IDD.

This order is issued in accordance with the concurrence of Finance Department given, vide, U.O. Note No. FD 186 Exp-1/2011, dated 10-02-2011.

By Order and in the name of the Governor of Karnataka

C. A. Baburavindranath Patel

Under Secretary to Government

PR. No. 588 Infrastructure Development Department

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಇಡಿ/290/ಯುಎನ್‌ಇ/2010, ಬೆಂಗಳೂರು, ದಿನಾಂಕ 25-02-2011

ಸರ್ಕಾರಿ ಆದೇಶ ಸಂಖ್ಯೆ ಇಡಿ 290 ಯುಎನ್‌ಇ 2010, ದಿನಾಂಕ 18-02-2011ರಲ್ಲಿನ ಆದೇಶ ಭಾಗದಲ್ಲಿನ 2ನೇ ಪ್ಯಾರಾದಲ್ಲಿರುವ ಅಂಶಗಳನ್ನು ಕೈಬಿಡಲಾಗಿದೆ. ಅದರ ಬದಲಿಗೆ "ಮೈಸೂರು ವಿಶ್ವವಿದ್ಯಾಲಯವು" ಸದರಿ ಜಮೀನನ್ನು ಪ್ರತಿ ಎಕರೆಗೆ ರೂ. 100/-ಗಳ ದರದಂತೆ 99 ವರ್ಷಗಳ ಅವಧಿಗೆ ಗುತ್ತಿಗೆ ಒಪ್ಪಂದದ ಆಧಾರದ ಮೇಲೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು ಇವರಿಗೆ ನೀಡಲು ಆದೇಶಿಸಲಾಗಿದೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಯು. ಬಿ. ಉಳವಿ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು)

ಪಿ.ಆರ್. ನಂ. 589

ಯುವಜನ ಸೇವಾ ಸಚಿವಾಲಯ

ವಿಷಯ : ಕೆ.ಎ.ಟಿ. ಅರ್ಜಿ ಸಂಖ್ಯೆ: 5889/2001ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 27-10-2010 ರಂದು ನೀಡಿದ ಆದೇಶ ಕ್ಯಾಪ್ಟನ್ ಅಲೋಶಿಯಸ್ ಪಿಂಟೋ, ನಿವೃತ್ತ ಸಹಾಯಕ ವೈಮಾನಿಕ ತರಬೇತಿದಾರರು ಅವರ ಅಮಾನತ್ತಿನ ಅವಧಿಯನ್ನು ಇತ್ಯರ್ಥಪಡಿಸಿದ ಆದೇಶವನ್ನು ಹಿಂದಕ್ಕೆ ಪಡೆಯುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ವಾಪ್ರಯು 182 ಯುಇಸೇ 97, ದಿನಾಂಕ 28-08-1999
2. ಸರ್ಕಾರದ ಆದೇಶ ಸಂಖ್ಯೆ: ವಾಪ್ರಯು 182 ಯುಇಸೇ 97, ದಿನಾಂಕ 23-12-1999
3. ಕೆ.ಎ.ಟಿ. ಅರ್ಜಿ ಸಂಖ್ಯೆ: 5889/2001ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು, ದಿನಾಂಕ 27-10-2010ರಂದು ನೀಡಿದ ಆದೇಶ.
4. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿಡಿಎ ವಾಣಿಜ್ಯ ಸಂಕೀರ್ಣ, ಇಂದಿರಾನಗರ, ಬೆಂಗಳೂರು ಅವರ ಪತ್ರ ಸಂಖ್ಯೆ: 17078/ಎಜಿ/ಕೆಎಟಿ/10-11, ದಿನಾಂಕ 04-12-2010.

ಪ್ರಸ್ತಾವನೆ :

ಕ್ಯಾಪ್ಟನ್ ಅಲೋಶಿಯಸ್ ಪಿಂಟೋ, ನಿವೃತ್ತ ಸಹಾಯಕ ವೈಮಾನಿಕ ತರಬೇತಿದಾರರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಬೆಂಗಳೂರು ಅವರು ಸರ್ಕಾರಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿದ್ದಕ್ಕಾಗಿ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆದು ಮೇಲೆ (1) ರಲ್ಲಿ ಓದಲಾದ ದಿನಾಂಕ 28-08-2010 ರಂದು ಸರ್ಕಾರಿ ಆದೇಶದಲ್ಲಿ ಅವರಿಗೆ ವಾಗ್ದಂಡನೆ ವಿಧಿಸಲಾಯಿತು. ಈ ವಿಚಾರಣೆ ಸಂಬಂಧ ಅವರು ದಿನಾಂಕ 25-11-1998 ರಿಂದ 12-05-1999ರ ವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತಿನಲ್ಲಿ ಕಳೆದ ಅವಧಿಯೆಂದೆ ಪರಿಗಣಿಸಿ ಮೇಲೆ (2)ರಲ್ಲಿ ಓದಲಾದ ದಿನಾಂಕ 23-12-1999ರ ಆದೇಶವನ್ನು ಹೊರಡಿಸಲಾಯಿತು. ಮೇಲಿನ ಎರಡು ಆದೇಶಗಳನ್ನು ಪ್ರಶ್ನಿಸಿ ಕ್ಯಾಪ್ಟನ್ ಅಲೋಶಿಯಸ್ ಪಿಂಟೋ, ಕರ್ನಾಟಕ ಆಡಳಿತ ಮಂಡಳಿಯ ಅರ್ಜಿ ಸಂಖ್ಯೆ: 5889/2001 ಅನ್ನು ಸಲ್ಲಿಸಲಾಗಿ ಮಂಡಳಿಯು ಮೇಲೆ (3)ರಲ್ಲಿ ಓದಲಾದ ದಿನಾಂಕ 27-10-2010ರ ಆದೇಶ ಹೊರಡಿಸಿ ಅರ್ಜಿದಾರರ ಅಮಾನತ್ತಿನ ಅವಧಿಯನ್ನು ಹಾಗೆಂದೇ ಪರಿಗಣಿಸುವಾಗ ಕೆ.ಸಿ.ಎಸ್.ಆರ್. ನಿಯಮ 100 ರಲ್ಲಿ ನಿಗಧಿಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿಲ್ಲ ಎಂಬ ಆಧಾರದ ಮೇಲೆ ಅವರ ಅಮಾನತ್ತಿನ ಅವಧಿಯನ್ನು ಹಾಗೆಂದೆ ಪರಿಗಣಿಸಿದ ದಿನಾಂಕ 23-12-1999ರ ಸರ್ಕಾರಿ ಆದೇಶವನ್ನು ರದ್ದುಪಡಿಸಿತು. ಹಾಗೂ ಕೆ.ಸಿ.ಎಸ್.ಆರ್. ನಿಯಮ 100ರಲ್ಲಿ ನಿಗದಿಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿದ ನಂತರ ಹೊಸ ಆದೇಶವನ್ನು ಹೊರಡಿಸಬೇಕೆಂದು ನಿರ್ದೇಶಿಸಿತು. ಸರ್ಕಾರಿ ವಕೀಲರು ಮೇಲೆ (4)ರಲ್ಲಿ ಓದಲಾದ ದಿನಾಂಕ 04-12-2010ರ ಪತ್ರದಲ್ಲಿ ಈ ಪ್ರಕರಣವು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಲು ಅರ್ಹವಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಕರ್ನಾಟಕ ಆಡಳಿತ ಮಂಡಳಿಯ ಆದೇಶವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 04 ಯುರಾಸೇ 2011 (ಭಾಗ-1), ಬೆಂಗಳೂರು, ದಿನಾಂಕ: 24-02-2011

ಸರ್ಕಾರವು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 5889/2001ರಲ್ಲಿ ನೀಡಿದ ದಿನಾಂಕ 27-10-2010ರ ಆದೇಶವನ್ನು ಅನುಷ್ಠಾನಗೊಳಿಸಿ ಕರ್ನಾಟಕ ಕೆ.ಸಿ.ಎಸ್.ಆರ್. ನಿಯಮ 100 ವಿಧಿವಿಧಾನವನ್ನು ಪಾಲಿಸಿದ ನಂತರ ಹೊಸದಾಗಿ ಆದೇಶ ಹೊರಡಿಸುವ ಪ್ರಕ್ರಿಯೆಯನ್ನು ಕಾಯ್ದಿಟ್ಟು ಶ್ರೀ ಅಲೋಶಿಯಸ್ ಪಿಂಟೋ, ನಿವೃತ್ತ ಸಹಾಯಕ ವೈಮಾನಿಕ ತರಬೇತಿದಾರರು ಅವರ ಅಮಾನತ್ತಿನ ಅವಧಿಯನ್ನು ಹಾಗೆಂದೇ ಪರಿಗಣಿಸಿದ ದಿನಾಂಕ 23-12-1999ರ ಸರ್ಕಾರಿ ಆದೇಶವನ್ನು ರದ್ದುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಯುವಜನ ಸೇವಾ ಇಲಾಖೆ

ಪಿ.ಆರ್. ನಂ. 590

ಸಹಕಾರ ಸಚಿವಾಲಯ

ವಿಷಯ : ದಿನಾಂಕ 30–09–2010ರೊಳಗೆ ನಡೆಸಬೇಕಾಗಿರುವ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಬೆಳಗಾವಿ ಇದರ ಆಡಳಿತ ಸಮಿತಿ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಿಒ 213 ಸಿಎಲ್ಎಂ 2009, ದಿನಾಂಕ 04–01–2010 ಮತ್ತು 20–07–2010.

2. ದಿ. ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ ಅಧ್ಯಕ್ಷರ ಪತ್ರ ಸಂಖ್ಯೆ: ಎಂಸಿಎಸ್ಎಂ/ಬಿಒಡಿ/2010–11/106, ದಿನಾಂಕ 11–01–2011.

ಪ್ರಸ್ತಾವನೆ :

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(2)ರಡಿ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ ಆಡಳತ ಸಮಿತಿಯ ಚುನಾವಣೆಯನ್ನು ದಿನಾಂಕ 31–03–2011ರವರೆಗೆ ಮುಂದೂಡಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (2)ರ ಅಧ್ಯಕ್ಷರ ಪತ್ರದಲ್ಲಿ ಮೇಲ್ಕಂಡ ಸಹಕಾರ ಸಕ್ಕರೆ ಕಾರ್ಖಾನೆ ನಿ. ಇದರ ಎಲ್ಲಾ ನಿರ್ದೇಶಕರುಗಳು ಷೇರು ಬಂಡವಾಳವನ್ನು ವಸೂಲಿ ಮಾಡುವ ಕಾರ್ಯದಲ್ಲಿ ಹಾಗೂ ಕಾರ್ಖಾನೆಯನ್ನು ಸ್ಥಾಪನೆ ಕಾರ್ಯ ಚಟುವಟಿಕೆಗಳಲ್ಲಿ ನಿರತರಾಗಿರುವುದರಿಂದ ಸದರಿ ಆಡಳಿತ ಸಮಿತಿಯ ಚುನಾವಣೆಯನ್ನು ದಿನಾಂಕ 30–09–2011ರವರೆಗೆ ಮುಂದೂಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 05 ಸಸಕಾ 2011, ದಿನಾಂಕ: 18–02–2011

ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಬೆಳಗಾವಿ ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಅನ್ನು ಮಾರ್ಪಟು ಮಾಡಿ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ 30–09–2011ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ: ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 30–09–2011ರ ವರೆಗೆ ಜಾರಿಯಲ್ಲಿರತಕ್ಕದ್ದು ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. ನಂ. 591

ಇಂಧನ ಸಚಿವಾಲಯ

ವಿಷಯ : ತಾಂತ್ರಿಕೇತರ ವರ್ಗದ ಅಧಿಕಾರಿ/ಸಿಬ್ಬಂದಿ ವರ್ಗದ ಹುದ್ದೆಗಳ ಸೃಜನೆ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಇಂಇ 98 ಇಬಿಎಸ್ 2001, ದಿನಾಂಕ 07–04–2003

2. ಪ್ರಧಾನ ಕಾರ್ಯದರ್ಶಿ, ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟೋರೇಟ್ ಎಂಪ್ಲಾಯೀಸ್ ಅಸೋಸಿಯೇಷನ್ ಆಫ್ ಕರ್ನಾಟಕ (ರಿ) ಇವರ ಪತ್ರ ದಿನಾಂಕ 24–05–2010.

3. ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರ ಸಂಖ್ಯೆ: ಮುವಿಪ/ಸಿಸ1/ಲಿ.ಹು.ಸೃ./10857/10–11, ದಿನಾಂಕ 06–07–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಪುನರ್‌ರಚನೆಯಿಂದ ಹೊಸದಾಗ ಸೃಜಿಸಲಾದಂತಹ ಕಛೇರಿಗಳಿಗೆ ಅವಶ್ಯವಿರುವ ಲಿಪಿಕ ವರ್ಗದ ನೌಕರರ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡುವ ಪ್ರಸ್ತಾವನೆಯನ್ನು ಬಾಕಿ ಇಟ್ಟು ತಾತ್ಕಾಲಿಕವಾಗಿ ಹಾಲಿ ಇಲಾಖೆಯಲ್ಲಿ ಇರುವ ಸಿಬ್ಬಂದಿಯನ್ನು redeployment ಮೂಲಕ ಭರ್ತಿ ಮಾಡಿ ಕಾರ್ಯನಿರ್ವಹಿಸಬೇಕೆಂದು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 98 ಇಬಿಎಸ್ 2001, ದಿನಾಂಕ 07–04–2003ರ ಆದೇಶದ ಮೇರೆಗೆ ಪ್ರಧಾನ ಕಾರ್ಯದರ್ಶಿ, ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟೋರೇಟ್ ಎಂಪ್ಲಾಯೀಸ್ ಅಸೋಸಿಯೇಷನ್ ಆಫ್ ಕನಾಟಕ (ರಿ) ರವರು ಕಳೆದ 25–30 ವರ್ಷಗಳಿಂದ ಪ್ರಥಮ ದರ್ಜೆ/ದ್ವಿತೀಯ ದರ್ಜೆ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ಗ್ರೂಪ್ 'ಸಿ' ನೌಕರರು ಇದುವರೆವಿಗೂ ಅದೇ ಹುದ್ದೆಗಳಲ್ಲಿ ಮುಂದುವರೆದಿದ್ದು ಯಾವುದೇ ಬಡ್ತಿಯ ಅವಕಾಶವು ಸಿಗದೆ ನಿವೃತ್ತಿ ಹೊಂದಿರುತ್ತಾರೆ/ಹೊಂದಲಿದ್ದಾರೆ ಎಂದು ತಿಳಿಸುತ್ತಾ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ತಾಂತ್ರಿಕ ವರ್ಗದವರು ಪತ್ರಾಂಕಿತ ಅಧಿಕಾರಿಗಳಾಗಿದ್ದು ಲಿಪಿಕ ನೌಕರರ ವೃಂದದಲ್ಲಿ ಇಡೀ ಕರ್ನಾಟಕಕ್ಕೆ ಒಂದೇ ಒಂದು ಪತ್ರಾಂಕಿತ ಲೆಕ್ಕಾಧಿಕಾರಿ ಹುದ್ದೆ ಇರುವುದರಿಂದ ಕಛೇರಿಯ ಲಿಪಿಕ ಕೆಲಸಗಳ ನಿರ್ವಹಣೆಯಲ್ಲಿ ಕೊರತೆ ಉಂಟಾಗಿದ್ದು ನೌಕರರ ಸಂಖ್ಯೆಯ ಪ್ರಮಾಣದಲ್ಲಿಯೂ ಗಣನೀಯ ಇಳಿಕೆ ಇರುವುದರಿಂದ ತಾಂತ್ರಿಕೇತರ ವರ್ಗದ ಅಧಿಕಾರಿ/ಸಿಬ್ಬಂದಿ ವರ್ಗದ ಹುದ್ದೆಗಳ ಸೃಜನೆ ಕುರಿತಂತೆ ದಿನಾಂಕ 24–05–2010 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3)ರ ಪತ್ರದಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರು ಇಲಾಖೆ ಪುನರ್ ವಿಂಗಡನೆಗೊಂಡು ಹೊಸದಾಗಿ ತಾಂತ್ರಿಕ ಹುದ್ದೆಗಳನ್ನು ಸೃಜಿಸಿ ಹೆಚ್ಚುವರಿಯಾಗಿ ಹೊಸ ಕಛೇರಿಗಳನ್ನು ತೆರೆದು ಹಾಲಿ ಇದ್ದ ಗ್ರೂಪ್ 'ಸಿ' ಮತ್ತು 'ಡಿ' ಸಿಬ್ಬಂದಿಯನ್ನು ಉಪಯೋಗಿಸಿಕೊಂಡು ಅತೀವ ಕಷ್ಟದಿಂದ ಲಿಪಿಕ ವರ್ಗದ ನೌಕರರಿಗೆ 2–3 ಹುದ್ದೆಗಳ/ಕಛೇರಿಗಳ ಕೆಲಸಗಳನ್ನು ನಿರ್ವಹಿಸಲು ತಿಳಿಸಿ ನಡೆಸಿಕೊಂಡು ಬರಲಾಗುತ್ತಿತ್ತು ಹಾಗೂ ನಂತರ ಮಾಡಿದ ಪನರ್‌ವ್ಯವಸ್ಥೆಯಲ್ಲಿಯೂ ಸಹ ಲಿಪಿಕ ವರ್ಗದ ನೌಕರರಿಗೆ ಕೆಲಸದ ಒತ್ತಡ ಹೆಚ್ಚಾಗಿ ಇರುವುದರಿಂದ ಮುಖ್ಯ ವಿದ್ಯುತ್ ಪರಿವೀಕ್ಷಣಾ ಇಲಾಖೆಗೆ ಹೆಚ್ಚುವರಿ ಸಿಬ್ಬಂದಿಯ ಸೃಜನೆ ಅತ್ಯಂತ ಅವಶ್ಯವಿರುವುದಾಗಿ ವರದಿ ಮಾಡುತ್ತಾ ಈ ಕೆಳಗೆ ನಮೂದಿಸಲಾದ ಅಧಿಕಾರಿ/ಸಿಬ್ಬಂದಿ ವರ್ಗದವರ 106 ಹುದ್ದೆಗಳ ಸೃಜನೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅವು ಈ ಕೆಳಕಂಡಂತಿವೆ:–

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಸೃಜನೆಗೆ ಕೋರಲಾದ ಹುದ್ದೆಗಳ ಸಂಖ್ಯೆ	ಭರಿಸುವ ವಿಧಾನ
1	ಮುಖ್ಯ ಲೆಕ್ಕಾಧಿಕಾರಿ	2	ಮುಂಬಡ್ತಿ/ಪ್ರತಿನಿಯೋಜನೆ
2	ಲೆಕ್ಕಾಧಿಕಾರಿ	9	ಮುಂಬಡ್ತಿ ಮುಖಾಂತರ
3	ಲೀಗಲ್ ಆಫೀಸರ್	1	ಮುಂಬಡ್ತಿ/ಪ್ರತಿನಿಯೋಜನೆ
4	ಅಧೀಕ್ಷಕರು	9	ಮುಂಬಡ್ತಿ ಮುಖಾಂತರ
5	ಪ್ರಥಮ ದರ್ಜೆ ಸಹಾಯಕರು	29	ಶೇ. 50 ನೇರ ನೇಮಕಾತಿ/ಶೇ. 50 ಮುಂಬಡ್ತಿ
6	ಶೀಘ್ರಲಿಪಿಗಾರರು	6	ನೇರ ನೇಮಕಾತಿ
7	ದ್ವಿತೀಯ ದರ್ಜೆ ಸಹಾಯಕರು	44	ಶೇ. 75 ನೇರ ನೇಮಕಾತಿ/ಶೇ. 25 ಮುಂಬಡ್ತಿ
8	ಬೆರಳಚ್ಚುಗಾರರು	6	ನೇರ ನೇಮಕಾತಿ
	ಒಟ್ಟು	**106**	

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 61 ಇಬಿಎಸ್ 2010, ಬೆಂಗಳೂರು, ದಿನಾಂಕ: 25–02–2011

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಗೆ ಅಗತ್ಯವಿರುವ ಈ ಕೆಳಗೆ ನಮೂದಿಸಲಾದ ಅಧಿಕಾರಿ/ಸಿಬ್ಬಂದಿ ವರ್ಗದವರ 85 ಹುದ್ದೆಗಳನ್ನು ಸೃಜಿಸಿ ಸರ್ಕಾರ ಆದೇಶಿಸಿದೆ. ವಿವರಗಳು ಈ ಕೆಳಗಿನಂತಿವೆ:–

Sl. No.	Details of Post	No. of Posts	Mode of Recruitment
1	Senior AO/CAO	01	As per Cadre & Recruitment Rules
2	AO	02	
3	Legal Officer	01	
4	Manager	06	
5	Superintendent	07	
6	First Division Assistant	10	
7	Second Division Assistant	23	
8	Computer Operator	14	By out-sourcing
9	Peon	10	
10	Helper	11	
	Total	85	

ಹುದ್ದೆಗಳ ಸೃಜನೆಗೆ ಸಂಬಂಧಿಸಿದಂತೆ ಷರತ್ತುಗಳು:–

1. ಕ್ರಮ ಸಂಖ್ಯೆ: 1 ರಿಂದ 7 ರವರೆಗಿನ ಹುದ್ದೆಗಳಿಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳ ವಿಧಿವಿಧಾನಗಳನ್ನು ಅನುಸರಿಸಿ ನೇಮಕಾತಿ ಮಾಡಿಕೊಳ್ಳತಕ್ಕದ್ದು.
2. ಕ್ರಮ ಸಂಖ್ಯೆ: 8,9 ಮತ್ತು 10ರಲ್ಲಿ ತಿಳಿಸಿರುವ ಕಂಪ್ಯೂಟರ್ ಆಪರೇಟರ್, ಪ್ಯೂನ್ ಮತ್ತು ಹೆಲ್ಪರ್ ಹುದ್ದೆಗಳ ಸೇವೆಯನ್ನು ಬಾಹ್ಯ ಮೂಲಗಳಿಂದ ಪಡೆದು ನೇಮಕ ಮಾಡಿಕೊಳ್ಳುವುದು.
3. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಮೇಲಿನ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1808 ವೆಚ್ಚ–1/2010, ದಿನಾಂಕ 08–02–2011ರಲ್ಲಿ ನೀಡಲಾದ ಸಹಮತಿಯನ್ವಯ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುಜಾತಮ್ಮ

ಪೀಠಾಧಿಕಾರಿ

ಇಂಧನ ಇಲಾಖೆ

ಪಿ.ಆರ್. ನಂ. 592

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಕೋಮನೆ ಗ್ರಾಮದ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ : ಸನೀಇ 10 ನಯೋಕಾ 2009 ದಿನಾಂಕ : 29-01-2009

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರ ಪತ್ರದ ಸಂಖ್ಯೆ: ಮುಸ(ದ)/ತಾಂ.3/ಸ.ಇಂ.8/ಶಿವಮೊಗ್ಗ/ಇ-ಟೆಂಡರ್/2010-11/ದಿನಾಂಕ : 25-11-2010.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 27/11/2010ರ ಪತ್ರ ಸಂಖ್ಯೆ: ಮುಸದ/ಆಪ್ತಶಾಖೆ/ಟೆಂಡರ್/08-09/3440

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಬಾರ್ಡ ಆರ್.ಐ.ಡಿ.ಎಫ್-14 ಅಡಿ ರೂ. 4821.40 ಲಕ್ಷ ಅಂದಾಜು ಮೊತ್ತದ 98 ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಪೈಕಿ ರೂ. 76.00 ಲಕ್ಷ ಅಂದಾಜು ಮೊತ್ತದ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಕೋಮನೆ ಗ್ರಾಮದ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಕಾಮಗಾರಿಯು ಸೇರಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ಬೆಂಗಳೂರುರವರ ನೋಂದಣಿ ಸಿ.ಇ.ಆರ್. ಸಂಖ್ಯೆ : 18/2009-10 ರಲ್ಲಿ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಶಿವಮೊಗ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಶಿವಮೊಗ್ಗ ಜಿಲ್ಲಾ ಟೆಂಡರ್ ಬುಲೆಟಿನ್	18.09.2010
ವಿಜಯ ಕರ್ನಾಟಕ ಹಾಗೂ ದಿ ಟೈಮ್ಸ್ ಆಫ್ ಇಂಡಿಯಾ ದಿನ ಪತ್ರಿಕೆ	21.09.2010

ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ : 26-10-2010ರಂದು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬ ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಹಾಗೂ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ನ್ನು 03-11-2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 68,73,620/-	
ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ಮಾರುಕಟ್ಟೆ ದರಗಳನ್ನು ಪರಿಗಣಿಸಿದಂತೆ ಪರಿಷ್ಕೃತ ಟೆಂಡರಿಗೆ ಇಡಲಾದ ಮೊತ್ತ			ರೂ. 85,70,247/-	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ /ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕೃತ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎನ್. ಮಸಿಉಲ್ಲ, 1ನೇ ದರ್ಜೆ ಗುತ್ತಿಗೆದಾರರು, ಶಿವಮೊಗ್ಗ	ರೂ. 97,71,892/-	42.17 ಹೆಚ್ಚು	14.02 ಹೆಚ್ಚು

ಮೇಲ್ಕಂಡಂತೆ ಶ್ರೀ ಎನ್. ಮಸಿಉಲ್ಲ, 1ನೇ ದರ್ಜೆ ಗುತ್ತಿಗೆದಾರರು, ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡಾ 14.02 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 25-11-2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 85,70,247/- ಗಳ ಮೇಲೆ ಶೇ. 9.90 ರಷ್ಟು ಹೆಚ್ಚಿನ ದರಗಳಿಗೆ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಟೆಂಡರನ್ನು ಪರಿಷ್ಕೃತ ಮೊತ್ತದ ಮೇಲೆ ಶೇಕಡ 4.00 ರಷ್ಟು ಹೆಚ್ಚಿನ ದರಗಳಲ್ಲಿ ಅಂದರೆ ರೂ. 89,13,057/-ಗಳಿಗೆ ಕಾಮಗಾರಿಯನ್ನು ಶ್ರೀ ಎನ್. ಮಸಿಉಲ್ಲ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 59 ಏನಿಯೋ 2010, ಬೆಂಗಳೂರು, ದಿನಾಂಕ 05 ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಕೋಮನೆ ಗ್ರಾಮದ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಯೋಜನೆಯ ಟೆಂಡರ್ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 85,70,247/- ಗಳ ಮೇಲೆ ಶೇಕಡ 4.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 89,13,057/- ಗಳಿಗೆ (ರೂ. ಎಂಬತ್ತೊಂಬತ್ತು ಲಕ್ಷ ಹದಿಮೂರು ಸಾವಿರದ ಐವತ್ತೇಳು) ಕಾಮಗಾರಿಯನ್ನು ಶ್ರೀ ಎನ್. ಮಸಿಉಲ್ಲ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪಿ.ಆರ್ 433

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಬೇಗುವಳ್ಳಿ ಗ್ರಾಮದ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ : ಸನೀಇ 06 ನಯೋಕಾ 2009 ದಿನಾಂಕ : 16–04–2010

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರ ಪತ್ರದ ಸಂಖ್ಯೆ: ಮುಸ(ದ)/ತಾಂ.3/ಸ.ಇಂ.8/ಶಿವಮೊಗ್ಗ/ಇ–ಟೆಂಡರ್/2010–11/ದಿನಾಂಕ : 25–11–2010.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 27/11/2010ರ ಪತ್ರ ಸಂಖ್ಯೆ: ಮುಸದ/ಆಪ್ತಶಾಖೆ/ಟೆಂಡರ್/08–09/3440

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಬಾರ್ಡ್ ಆರ್.ಐ.ಡಿ.ಎಫ್–14 ರಡಿ ರೂ. 713.00 ಲಕ್ಷ ಅಂದಾಜು ಮೊತ್ತದ 5 ಕಾಮಗಾರಿಗಳ ಮಾರ್ಪಡಿತ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಪೈಕಿ ರೂ. 161.00 ಲಕ್ಷ ಅಂದಾಜು ಮೊತ್ತದ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಬೇಗುವಳ್ಳಿ ಗ್ರಾಮದ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಕಾಮಗಾರಿಯು ಸೇರಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ಬೆಂಗಳೂರುರವರ ನೋಂದಣಿ ಸಿ.ಇ.ಆರ್. ಸಂಖ್ಯೆ : 04/2010–11 ರಲ್ಲಿ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಶಿವಮೊಗ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು (3ನೆ ಕರೆ) ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಶಿವಮೊಗ್ಗ ಜಿಲ್ಲಾ ಟೆಂಡರ್ ಬುಲೆಟಿನ್	18.09.2010
ರಾಜ್ಯ ಟೆಂಡರ್ ಬುಲೆಟಿನ್	17.09.2010
ಕನ್ನಡ ಪ್ರಭ ಹಾಗೂ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆ	09.10.2010

ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ದಿನಾಂಕ : 26–10–2010ರಂದು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬ ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಹಾಗೂ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ನ್ನು 03–11–2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,45,10,077/–	
ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ಮಾರುಕಟ್ಟೆ ದರಗಳನ್ನು ಪರಿಗಣಿಸಿದಂತೆ ಪರಿಷ್ಕೃತ ಟೆಂಡರಿಗೆ ಇಡಲಾದ ಮೊತ್ತ			ರೂ. 1,94,50,173/–	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ /ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕೃತ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎಸ್.ಕೆ. ಧರ್ಮೇಶ್ 1ನೇ ದರ್ಜೆ ಗುತ್ತಿಗೆದಾರರು, ತೀರ್ಥಹಳ್ಳಿ	2,10,39,689/–	45.00 ಹೆಚ್ಚು	8.17 ಹೆಚ್ಚು

ಮೇಲ್ಕಂಡಂತೆ ಶ್ರೀ ಎಸ್. ಕೆ. ಧರ್ಮೇಶ್, 1ನೇ ದರ್ಜೆ ಗುತ್ತಿಗೆದಾರರು, ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 8.17 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 25-11-2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,94,50,173/- ಗಳ ಮೇಲೆ ಶೇ. 8.00 ರಷ್ಟು ಹೆಚ್ಚಿನ ದರಗಳಿಗೆ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಟೆಂಡರನ್ನು ಪರಿಷ್ಕೃತ ಮೊತ್ತದ ಮೇಲೆ ಶೇಕಡ 4.00 ರಷ್ಟು ಹೆಚ್ಚಿನ ದರಗಳಲ್ಲಿ ಅಂದರೆ ರೂ. 2,02,28,180/-ಗಳಿಗೆ ಕಾಮಗಾರಿಯನ್ನು ಶ್ರೀ ಎಸ್. ಕೆ. ಧರ್ಮೇಶ್, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಪರಿಗಣಿಸಿದೆ. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 56 ಏನೀಯೋ 2010, ಬೆಂಗಳೂರು, ದಿನಾಂಕ 05 ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಬೇಗುವಳ್ಳಿ ಗ್ರಾಮದ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಯೋಜನೆಯ ಟೆಂಡರ್ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,94,50,173/- ಗಳ ಮೇಲೆ ಶೇಕಡ 4.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,02,28,180/- ಗಳಿಗೆ (ರೂ. ಎರಡು ಕೋಟಿ ಎರಡು ಲಕ್ಷ ಇಪ್ಪತ್ತೆಂಟು ಸಾವಿರದ ಒಂದು ನೂರ ಎಂಬತ್ತು) ಕಾಮಗಾರಿಯನ್ನು ಶ್ರೀ ಎಸ್. ಕೆ. ಧರ್ಮೇಶ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ 1 ಟಿಎಫ್ ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್ 434

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದಲ್ಲಿ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಬರುವ ಹೋಬಳಿಗಳ ಬಗ್ಗೆ

ಓದಲಾಗಿದೆ : ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಪತ್ರ ಸಂಖ್ಯೆ : ಎ5(3) ಜಿಎಫ್‌ಎಲ್/ಸಿಆರ್-92/07-08 ದಿನಾಂಕ : 3-12-2010

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 3-12-2010ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಪತ್ರದಲ್ಲಿ ಪಶ್ಚಿಮಘಟ್ಟ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಮತ್ತು ಹೋಬಳಿಗಳ ವಿವರಗಳನ್ನು ಸಲ್ಲಿಸಿರುತ್ತಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಅಪಜೀ 111 ಎಫ್‌ಎಫ್‌ಎಂ 2007, ಬೆಂಗಳೂರು, ದಿನಾಂಕ : 5ನೇ ಫೆಬ್ರವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಪಶ್ಚಿಮಘಟ್ಟ ಪ್ರದೇಶಗಳ ವ್ಯಾಪ್ತಿಗೆ ಬರುವ ತಾಲ್ಲೂಕುಗಳು ಮತ್ತು ಹೋಬಳಿಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಗುರುತಿಸಿ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಎಂ. ಮಲ್ಲಿಕಾರ್ಜುನಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ : ಅಪಜೀ 111 ಎಫ್‌ಎಫ್‌ಎಂ 2007, ದಿನಾಂಕ :05-02-2011

ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಬರುವ ಹೋಬಳಿಗಳ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ಕ್ರಮ ಸಂಖ್ಯೆ	ತಾಲ್ಲೂಕು	ಕ್ರಮ ಸಂಖ್ಯೆ	ಹೋಬಳಿ
1	2	3	4	5	6
1	ಬೆಳಗಾಂ	1	ಬೆಳಗಾಂ	1	ಬೆಳಗಾಂ (ಕಸಬಾ)
				2	ಉಚಗಾಂವ್
				3	ಹಿರೇಬಾಗೇವಾಡಿ
		2	ಖಾನಾಪುರ	4	ಜಂಬೋಟಿ

				5	ಖಾನಾಪುರ
				6	ಗುಂಜಿ
				7	ಬೀಡಿ
		3	ಬೈಲಹೊಂಗಲ	8	ಕಿತ್ತೂರು
2	ಚಾಮರಾಜನಗರ	4	ಕೊಳ್ಳೇಗಾಲ	9	ಕೊಳ್ಳೇಗಾಲ (ಕಸಬಾ)
				10	ಹನೂರು
				11	ಲೊಕ್ಕನಹಳ್ಳಿ
				12	ಪಾಳ್ಯ
				13	ರಾಮಾಪುರಂ
		5	ಚಾಮರಾಜನಗರ	14	ಚಾಮರಾಜನಗರ (ಕಸಬಾ)
				15	ಹರವೆ
				16	ಹರದನಹಳ್ಳಿ
				17	ಚಂದಕವಾಡಿ
				18	ಸಂತೇಮರಹಳ್ಳಿ
		6	ಯಳಂದೂರು	19	ಯಳಂದೂರು (ಕಸಬ)
				20	ಅಗರ
		7	ಗುಂಡ್ಲುಪೇಟೆ	21	ಗುಂಡ್ಲುಪೇಟೆ (ಕಸಬ)
				22	ಬೇಗೂರು
				23	ಹಂಗಳ
				24	ತೆರಕಣಾಂಬಿ
3	ಚಿಕ್ಕಮಗಳೂರು	8	ಚಿಕ್ಕಮಗಳೂರು	25	ಚಿಕ್ಕಮಗಳೂರು (ಕಸಬ)
				26	ಅಂಬಳೆ
				27	ಅವಟೆ
				28	ಬಿದರೆ (ಕಂಡ್ಯ)
				29	ಅಲ್ದೂರು
				30	ಜಾಗರ
				31	ಲಕ್ಯಾ
				32	ವಸ್ತಾರೆ
		9	ನರಸಿಂಹರಾಜಪುರ	33	ನರಸಿಂಹರಾಜಪುರ (ಕಸಬ)
				34	ಬಾಳೆಹೊನ್ನೂರು
		10	ಕಡೂರು	35	ಕಡೂರು (ಕಸಬ)
				36	ಬೀರೂರು
				37	ಸಕ್ಕರೆಪಟ್ಟಣ
		11	ತರೀಕೆರೆ	38	ಅಮೃತಾಪುರ
				39	ಅಜ್ಜಂಪುರ
				40	ಲಿಂಗದಹಳ್ಳಿ
				41	ಶಿವನಿ
				42	ಲಕ್ಕವಳ್ಳಿ
		12	ಮೂಡಿಗೆರೆ	43	ಮೂಡಿಗೆರೆ (ಕಸಬ)
				44	ಬಣಕಲ್
				45	ಗೋಣಿಬೀಡು
				46	ಬಾಳೂರು
				47	ಕಳಸ
		13	ಶೃಂಗೇರಿ	48	ಶೃಂಗೇರಿ (ಕಸಬ)
				49	ಕಿಗ್ಗ
				50	ಮಿಗ
		14	ಕೊಪ್ಪ	51	ಕೊಪ್ಪ (ಕಸಬ)
				52	ಹರಿಹರಪುರ
				53	ಮೇಗುಂದ
				54	ಜಯಪುರ

4	ದಕ್ಷಿಣ ಕನ್ನಡ	15	ಬೆಳ್ತಂಗಡಿ	55	ಬೆಳ್ತಂಗಡಿ (ಕಸಬ)
				56	ವೇಣೂರು
				57	ಕೊಕ್ಕಾಡ
		16	ಬಂಟ್ವಾಳ	58	ಬಂಟ್ವಾಳ (ಕಸಬಾ)
				59	ವಿಟ್ಲ
				60	ಪಣೆ ಮಂಗಳೂರು
		17	ಮಂಗಳೂರು	61	ಮಂಗಳೂರು -ಎ
				62	ಮಂಗಳೂರು-ಬಿ
				63	ಮುಲ್ಕಿ
				64	ಮೂಡಬಿದರೆ
				65	ಸುರತ್ಕಲ್
				66	ಗುರುಪುರ
		18	ಸುಳ್ಯ	67	ಸುಳ್ಯ (ಕಸಬ)
				68	ಪಂಜ
		19	ಪುತ್ತೂರು	69	ಪುತ್ತೂರು (ಕಸಬ)
				70	ಉಪ್ಪಿನಂಗಡಿ
				71	ಕಡಬ
5	ದಾವಣಗೆರೆ	20	ಹೊನ್ನಾಳಿ	72	ಬೆಳಗುತ್ತಿ
		21	ಚನ್ನಗಿರಿ	73	ಚನ್ನಗಿರಿ (ಕಸಬ)
				74	ಸಂತೆ ಬೆನ್ನೂರು
				75	ಉಬ್ರಾಣಿ
6	ಧಾರವಾಡ	22	ಕಲಘಟಗಿ	76	ಕಲಘಟಗಿ (ಕಸಬ)
				77	ಹಿರೇಹೊನ್ನಿಹಳ್ಳಿ
				78	ತಬ್ಬಡ್ ಹೊನ್ನಿಹಳ್ಳಿ
				79	ದುಮ್ಮವಾಡ
		23	ಧಾರವಾಡ	80	ಅಳ್ನಾವರ
7	ಹಾಸನ	24	ಆಲೂರು	81	ಆಲೂರು (ಕಸಬ)
				82	ಪಾಳ್ಯ
				83	ಕೆ. ಹೊಸಕೋಟೆ
				84	ಕುಂದೂರು
		25	ಸಕಲೇಶಪುರ	85	ಸಕಲೇಶಪುರ (ಕಸಬ)
				86	ಬಾಲುಗೋಡು
				87	ಹಾನಬಾಳ್
				88	ಹೆತ್ತೂರು
				89	ಎಸಳೂರು
		26	ಬೇಲೂರು	90	ಅರೇಹಳ್ಳಿ
				91	ಬಿಕ್ಕೋಡು
				92	ಬೇಲೂರು ಕಸಬ
8	ಹಾವೇರಿ	27	ಹಾನಗಲ್	93	ಹಾನಗಲ್ (ಕಸಬ)
				94	ಬಮ್ಮನಹಳ್ಳಿ
		28	ಶಿಗ್ಗಾಂವ್	95	ದುಂಡಸಿ
				96	ಹಳೆಬಂಕಾಪುರ
9	ಕೊಡಗು	29	ವಿರಾಜಪೇಟೆ	97	ವಿರಾಜಪೇಟೆ (ಕಸಬ)
				98	ಅಮ್ಮತ್ತಿ
				99	ಬಡಗ
				100	ಬಾಳಲೆ
				101	ಹುದಿಕೇರಿ
				102	ಪೊನ್ನಂಪೇಟೆ
				103	ಶ್ರೀಮಂಗಲ

		30	ಮಡಿಕೇರಿ	104	ಮಡಿಕೇರಿ (ಕಸಬ)
				105	ಭಾಗಮಂಡಲ
				106	ನಾಪೊಕ್ಲು
				107	ಸಂಪಾಜೆ
		31	ಸೋಮವಾರಪೇಟೆ	108	ಸೋಮವಾರಪೇಟೆ (ಕಸಬ)
				109	ಶಾಂತಹಳ್ಳಿ
				110	ಶುಂಠಿಕೊಪ್ಪ
				111	ಕೊಡ್ಲಿಪೇಟೆ
				112	ಶನಿವಾರ ಸಂತೆ
				113	ಕುಶಾಲನಗರ
10	ಮಂಡ್ಯ	32	ಮಳವಳ್ಳಿ	114	ಬೊಪ್ಪೆಗೌಡನಪುರ
				115	ಹಲಗೂರು
11	ಮೈಸೂರು	33	ಹೆಗ್ಗಡದೇವನಕೋಟೆ	116	ಹೆಗ್ಗಡದೇವನಕೋಟೆ (ಕಸಬ)
				117	ಅಂತರಸಂತೆ
				118	ಸರಗೂರು
				119	ಕಟ್ವಾಳ
				120	ಕಂಡಲಿಕೆ
				121	ಹಂಪಾಪುರ
		34	ಪಿರಿಯಾಪಟ್ಟಣ (ಕಸಬ)	122	ಪಿರಿಯಾಪಟ್ಟಣ (ಕಸಬ)
				123	ನೇರಳಕುಪ್ಪೆ
				124	ಹರನಹಳ್ಳಿ
		35	ನಂಜನಗೂಡು	125	ಹುಲ್ಲಹಳ್ಳಿ
		36	ಹುಣಸೂರು	126	ಹುಣಸೂರು (ಕಸಬ)
				127	ಹನಗೋಡು
		37	ಮೈಸೂರು	128	ಜಯಪುರ
12	ರಾಮನಗರಂ	38	ಕನಕಪುರ	129	ಉಯ್ಯಂಬಳ್ಳಿ
				130	ಸಾತನೂರು
				131	ಮರಳವಾಡಿ
13	ಶಿವಮೊಗ್ಗ	39	ತೀರ್ಥಹಳ್ಳಿ	132	ತೀರ್ಥಹಳ್ಳಿ (ಕಸಬ)
				133	ಮುತ್ತೂರು
				134	ಮಂಡಗದ್ದೆ
				135	ಅಗ್ರಹಾರ
				136	ಆಗುಂಬೆ
		40	ಶಿವಮೊಗ್ಗ	137	ಶಿವಮೊಗ್ಗ (ಕಸಬ)
				138	ಹರನಹಳ್ಳಿ
				139	ಹೊಳಲೂರು
				140	ಕುಂಸಿ
				141	ನಿಡಿಗೆ
		41	ಶಿಕಾರಿಪುರ	142	ಶಿಕಾರಿಪುರ (ಕಸಬ)
				143	ಅಂಜನಾಪುರ
				144	ಹೊಸೂರು
				145	ತಲಗುಂದ
				146	ಉಡುಗನಿ
		42	ಭದ್ರಾವತಿ	147	ಭದ್ರಾವತಿ (ಕಸಬ)
				148	ಹೊಳೆ ಹೊನ್ನೂರು
				149	ಕೂಡ್ಲಿಗೆರೆ
				150	ಬೊಮ್ಮನಕಟ್ಟೆ
		43	ಹೊಸನಗರ	151	ಹೊಸನಗರ (ಕಸಬ)
				152	ಗೆರುಪುರ
				153	ಜಾಲ
				154	ನಗರ

				155	ಕೆರೆಹಳ್ಳಿ
				156	ಹುಂಚ
		44	ಸಾಗರ	157	ಸಾಗರ (ಕಸಬ)
				158	ಭಾರಂಗಿ
				159	ಕರೂರು
				160	ತಾಳಗುಪ್ಪ
				161	ಆವಿನಹಳ್ಳಿ
				162	ಆನಂದಪುರಂ
		45	ಸೊರಬ	163	ಸೊರಬ (ಕಸಬ)
				164	ಜಡೆ
				165	ಕುಪ್ಪಗದ್ದೆ
				166	ಚಂದ್ರಗುತ್ತಿ
				167	ಅನವಟ್ಟಿ
				168	ಉಳವಿ
14	ಉಡುಪಿ	46	ಉಡುಪಿ	169	ಉಡುಪಿ (ಕಸಬ)
				170	ಕೋಟ
				171	ಬ್ರಹ್ಮಾವರ್
				172	ಕಾಪು
		47	ಕುಂದಾಪುರ	173	ಕುಂದಾಪುರ (ಕಸಬ)
				174	ವಂಡ್ಸೆ
				175	ಬೈಂದೂರು
		48	ಕಾರ್ಕಳ	176	ಕಾರ್ಕಳ (ಕಸಬ)
				177	ಅಜೇಕರ್
15	ಉತ್ತರ ಕನ್ನಡ	49	ಮುಂಡಗೋಡು	178	ಮುಂಡಗೋಡು (ಕಸಬ)
				179	ಪಾಲಾ
		50	ಭಟ್ಕಳ್	180	ಭಟ್ಕಳ್ (ಕಸಬ)
				181	ಮಾವಳ್ಳಿ
				182	ಸುಸ್ಗಡಿ
		51	ಹಳಿಯಾಲ	183	ಹಳಿಯಾಳ (ಕಸಬ)
				184	ದಾಂಡೇಲಿ
				185	ಮುರುಕವಾಡ
				186	ಸಾಂಬ್ರಾಣಿ
		52	ಜೋಯಿಡ	187	ಕುಂಗಿಣಿ
				188	ಸೂಪ
				189	ಕುಂದಲ್
				190	ಕುಂಬಾರವಾಡ
				191	ಕ್ಯಾಸಲ್ ರಾಕ್
		53	ಯಲ್ಲಾಪುರ	192	ಯಲ್ಲಾಪುರ (ಕಸಬ)
				193	ಮಲಗಾವ್
				194	ಮಂಚಿಕೇರಿ
		54	ಶಿರಸಿ	195	ಶಿರಸಿ (ಕಸಬ)
				196	ಬನವಾಸಿ
				197	ಹರೇ ಹುಲಿಕಲ್
				198	ಸಂಪಕಂಡ್
				199	ಇಸಲೂರು
				200	ಬೆಂಗಾಲೆ
				201	ಗೋಲಿಕಟ್ಟ
				202	ಹುಲೇಕಲ್
		55	ಕುಮಟಾ	203	ಕುಮಟಾ (ಕಸಬ)
				204	ಗೋಕರ್ಣ

				205	ಕೂಜಳ್ಳಿ
				206	ಮೀರ್ಜಾನ್
		56	ಕಾರವಾರ	207	ಕಾರವಾರ (ಕಸಬ)
				208	ಗಡಸಾಯ್
				209	ಕಿನ್ನಾರ್
				210	ಬಾಡ
				211	ಸಾವಂತವಾಡ
				212	ತೋಡೂರು
		57	ಅಂಕೋಲ	213	ಅಂಕೋಲ (ಕಸಬ)
				214	ಸುಂಕಸಾಳ್
				215	ಭಾಸ್ಕೋಡ
				216	ಹಿಲ್ಲೂರು
				217	ಬೇಲೆಕೆರೆ
				218	ಬಳಲೆ
				219	ಬಾವಿಕೆರೆ
		58	ಸಿದ್ದಾಪುರ	220	ಸಿದ್ದಾಪುರ (ಕಸಬ)
				221	ಕೋರಲ್ಕಿ
				222	ಉಂಬ್ಳೆಮನೆ
				223	ಕೋಂಡ್ಲಿ
				224	ಕೋಡ್ಕಣೆ
		59	ಹೊನ್ನಾವರ	225	ಹೊನ್ನಾವರ (ಕಸಬ)
				226	ಮಾಗೋಡು
				227	ಮಂಕಿ
				228	ಮಾವಿನಕುರ್ವೆ

ಹೆಚ್.ಎಂ. ಮಲ್ಲಿಕಾರ್ಜುನಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ. ಆರ್. 435

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಸಿಆಸುಇ 79 ಸೇವನೆ 2010 ಬೆಂಗಳೂರು, ದಿನಾಂಕ : 09–02–2011

ವಿಷಯ : ಭಾರತದ ಜನಗಣತಿ 2011 – ಜನಗಣತಿ ಕಾರ್ಯದಲ್ಲಿ ತೊಡಗಿಸಲ್ಪಡುವ ಸರ್ಕಾರಿ ನೌಕರರಿಗೆ ಕೆಲವು ರಿಯಾಯಿತಿಗಳನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ : 1) ಸುತ್ತೋಲೆ ಸಂಖ್ಯೆ : ಸಿಆಸುಇ 79 ಸೇವನೆ 2010 ದಿನಾಂಕ : 14–12–2010

2) ನಿರ್ದೇಶಕರು, ಜನಗಣತಿ, ಕರ್ನಾಟಕ ಬೆಂಗಳೂರು ಇವರ ಅ.ಸ. ಪತ್ರ ಸಂಖ್ಯೆ : C &T/ 7/ ORG/2010, ದಿನಾಂಕ : 04–02–2011

ರಾಜ್ಯದಲ್ಲಿ ಭಾರತದ ಜನಗಣತಿ 2011 ರ ಕಾರ್ಯಕ್ಕಾಗಿ ತೊಡಗಿಸಲ್ಪಡುವ ಸರ್ಕಾರಿ ನೌಕರರು ಜನಗಣತಿ ಕಾರ್ಯವನ್ನು ನಿರ್ವಹಿಸಲು ಅನುವಾಗುವಂತೆ ದಿನಾಂಕ : 09–02–2011 ರಿಂದ 05–03–2011ರವರೆಗೆ (ಉಭಯ ದಿನಗಳೂ ಸೇರಿದಂತೆ) ಪೂರ್ವಾಹ್ನ ಅಥವಾ ಅಪರಾಹ್ನ ಅರ್ಧ ದಿನ ಅವಧಿಗೆ ಕಛೇರಿಯನ್ನು ಬಿಡಲು ಉಲ್ಲೇಖ (1) ರಲ್ಲಿನ ಸುತ್ತೋಲೆಯಲ್ಲಿ ಸರ್ಕಾರವು ಅನುಮತಿ ನೀಡಿದೆ. ಬೆಂಗಳೂರಿನಲ್ಲಿ ಸಂಚಾರ ದಟ್ಟಣೆಯಿಂದಾಗಿ ಅರ್ಧದಿನ ಜನಗಣತಿ ಕಾರ್ಯವನ್ನು ಪೂರ್ಣಗೊಳಿಸಿ ಇನ್ನರ್ಧ ದಿನ ಕಛೇರಿಗೆ ಹಾಜರಾಗುವುದು ಕಷ್ಟಸಾಧ್ಯವೆಂಬ ಅಂಶವನ್ನು ಕೆಲವು ಸರ್ಕಾರಿ ನೌಕರರು ನಿರ್ದೇಶಕರು, ಜನಗಣತಿ, ಕರ್ನಾಟಕ ಅವರ ಗಮನಕ್ಕೆ ತಂದಿದ್ದರು. ಅವರು ಪೂರ್ಣದಿನ ಜನಗಣತಿ ಕಾರ್ಯವನ್ನು ನಿರ್ವಹಿಸಲು ಅಥವಾ ಎರಡು ದಿನಗಳಿಗೊಮ್ಮೆ (ಓಟಣಜಡಿಟಚಿಣುತಜ ಜಚಿಥಿ) ಇಡೀ ದಿನ ಜನಗಣತಿ ಕಾರ್ಯ ಮತ್ತು ಎರಡು ದಿನಗಳಿಗೊಮ್ಮೆ ಇಡೀ ದಿನ ಕಛೇರಿಗೆ ಹಾಜರಾಗುವಂತೆ ಸೂಚನೆಯನ್ನು ನೀಡಲು ಪ್ರಸ್ತಾಪಿಸಿದ್ದಾರೆ.

2. ಉಲ್ಲೇಖ (2) ರಲ್ಲಿರುವ ನಿರ್ದೇಶಕರು, ಜನಗಣತಿ, ಕರ್ನಾಟಕ ಅವರ ಪ್ರಸ್ತಾವವನ್ನು ಪರಿಶೀಲಿಸಲಾಗಿದೆ. ಬೆಂಗಳೂರು ನಗರದಲ್ಲಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪ್ರದೇಶ) ಅಧಿಕ ಸಂಚಾರ ದಟ್ಟಣೆಯಿರುವುದರಿಂದ ಜನಗಣತಿ ಕಾರ್ಯಕ್ಕಾಗಿ ತೊಡಗಿಸಲ್ಪಡುವ ಸರ್ಕಾರಿ ನೌಕರರು ದಿನಾಂಕ : 09.02.2011 ರಿಂದ 05.03.2011 ರವರೆಗೆ (ಉಭಯ ದಿನವೂ ಸೇರಿದಂತೆ) ದಿನ ಬಿಟ್ಟು ದಿನ (Alternative Days) ಒಂದು ದಿನ ಜನಗಣತಿಯ ಕಾರ್ಯ ಮತ್ತು ಒಂದು ದಿನ ಕಛೇರಿ ಕೆಲಸವನ್ನು ನಿರ್ವಹಿಸುವಂತೆ ಅಂದರೆ 09–02–2011 ರಂದು

ಇಡೀ ದಿನ ಜನಗಣತಿಯ ಕಾರ್ಯನಿರ್ವಹಿಸುವುದು ಮತ್ತು 10-02-2011ರಂದು ಇಡೀ ದಿನ ಕಛೇರಿಗೆ ಹಾಜರಾಗುವುದು ಹೀಗೆ 09-02-2011 ರಿಂದ 05-03-2011ರವರೆಗೆ ಕಾರ್ಯ ನಿರ್ವಹಿಸುವಂತೆ, ಉಲ್ಲೇಖ (1) ರಲ್ಲಿನ ಸುತ್ತೋಲೆಯನ್ನು ಭಾಗಶಃ ಮಾರ್ಪಡಿಸಿ, ಆದೇಶಿಸಲಾಗಿದೆ. ಬೆಂಗಳೂರು ನಗರವನ್ನು ಬಿಟ್ಟು ಕರ್ನಾಟಕದ ಇತರ ಪ್ರದೇಶಗಳಿಗೆ ಉಲ್ಲೇಖ (1) ರಲ್ಲಿನ ಸುತ್ತೋಲೆಯಲ್ಲಿನ ಸೂಚನೆಗಳು ಅನ್ವಯವಾಗುತ್ತವೆಂದು ತಿಳಿಸಲಾಗಿದೆ.

ಬಿ.ಜಿ. ಕೃಷ್ಣಮೂರ್ತಿ
ಸರ್ಕಾರದ ಅಪರ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾ ನಿಯಮಗಳು).

ಪಿ. ಆರ್. 436

ಯೋಜನಾ ಸಚಿವಾಲಯ

ವಿಷಯ : ನೋಡಲ್ ಏಜೆನ್ಸಿಯಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪಾತ್ರ – ರಾಜ್ಯದ ಸಾಂಖ್ಯಿಕ ವ್ಯವಸ್ಥೆಯ ಸುಧಾರಣೆಗಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿಗಳನ್ನು ರಚಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಸುತ್ತೋಲೆ ಸಂಖ್ಯೆ : ಡಿಪಿಎಆರ್ 67 ಎಎಆರ್. 82, ದಿನಾಂಕ : 18-06-1982
2. ಸರ್ಕಾರದ ಸುತ್ತೋಲೆ ಸಂಖ್ಯೆ : ಡಿಪಿಎಆರ್ 67 ಎಎಆರ್. 82, ದಿನಾಂಕ : 02-09-1982
3. ಸರ್ಕಾರದ ಆದೇಶ ಸಂಖ್ಯೆ : ಪಿಡಿ 176 ಪಿ.ಎಸ್.ಟಿ. 82, ದಿನಾಂಕ : 10-11-1982

ಪ್ರಸ್ತಾವನೆ :

ಸಮನ್ವಯತೆ, ಸಹಯೋಗ, ಅಂತರ್‌ಜಾಲ ಮತ್ತು ಮಾಹಿತಿ ಹಂಚಿಕೊಳ್ಳುವ ವ್ಯವಸ್ಥೆ ಇತ್ಯಾದಿಗಳು ಪರಿಣಾಮಕಾರಿ ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಹೊಂದಲು ಅವಶ್ಯಕವಾಗಿವೆ. ಈ ಅಂಶಗಳು ಗುರಿ ಮತ್ತು ಧ್ಯೇಯಗಳನ್ನು ಹಂಚಿಕೊಳ್ಳುವ ದೃಷ್ಟಿಕೋನ, ನಾನಾ ವಿಧದ ಪಾತ್ರಧಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಸ್ಪಷ್ಟ ತಿಳುವಳಿಕೆ ಮತ್ತು ಸಮ್ಮತಿ, ಅನೋನ್ಯ, ಮುಕ್ತ ಸಂವಾದ ಮತ್ತು ಉತ್ತಮ ಸಂವಹನ, ಪರಸ್ಪರ ನೆರವು, ಒಟ್ಟುಗೂಡಿಸುವಿಕೆ ಮತ್ತು ಹೊಣೆಗಾರಿಕೆ ಮತ್ತು ಅನಧಿಕೃತ ಅಂಕಿ ಅಂಶಗಳಲ್ಲಿ ನಂಬಿಕೆಗೆ ಎಡೆ ಮಾಡಿಕೊಡುತ್ತದೆ. ಬಳಕೆದಾರರ ಬೇಡಿಕೆಗನುಗುಣವಾಗಿ ಸಾಂಖ್ಯಿಕ ವ್ಯವಸ್ಥೆಯನ್ನು ಹೊಂದಲು ಅಂಕಿ ಅಂಶಗಳ ಬಳಕೆದಾರರು ಮತ್ತು ಅವುಗಳನ್ನು ಉತ್ಪಾದಿಸುವವರ ನಡುವೆ ಉತ್ತಮ ಸಮನ್ವಯತೆ ಮತ್ತು ಮಾಹಿತಿ ಹಂಚಿಕೊಳ್ಳುವ ವ್ಯವಸ್ಥೆಯ ಅಗತ್ಯವಿದೆ. ಅಸಮ್ಮತವಾದ ಅಂಕಿ ಅಂಶಗಳ ಉತ್ಪಾದನೆಯನ್ನು ಮಿತಗೊಳಿಸಲು ಮತ್ತು ಅಂಕಿ ಅಂಶಗಳ ಉತ್ಪಾದನೆಯಲ್ಲಿ ಸಂಪನ್ಮೂಲಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಲು ಮತ್ತು ಒಟ್ಟುಗೂಡಿಸುವಿಕೆಯನ್ನು ಸಾಧಿಸಲು, ಸಮನ್ವಯತೆ ಹಾಗೂ ಅಂಕಿ-ಅಂಶಗಳ ಉತ್ಪಾದಕರಲ್ಲಿ ಅಂಕಿ ಅಂಶಗಳನ್ನು ಹಂಚಿಕೊಳ್ಳುವ ವ್ಯವಸ್ಥೆಯ ಅಗತ್ಯವಿದೆ.

2. ಸಾಂಖ್ಯಿಕ ಚುಟುವಟಿಕೆಗಳಲ್ಲಿ ಸಮನ್ವಯತೆ ಹೊಂದಲು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು (ಇನ್ನು ಮುಂದೆ ನಿರ್ದೇಶನಾಲಯವೆಂದು ಕರೆಯಲಾಗುವುದು) ರಾಜ್ಯದ ಎಲ್ಲ ಸಾಂಖ್ಯಿಕ ಚುಟುವಟಿಕೆಗಳಿಗೆ ಸಂಬಂಧಿಸಿದಂತೆ "ನೋಡಲ್ ಏಜೆನ್ಸಿ"ಯಾಗಿ ಘೋಷಿಸಿ ಸರ್ಕಾರವು ಮೇಲೆ ಓದಲಾದ ಉಲ್ಲೇಖ (3) ರ 1982ರ ಸರ್ಕಾರಿ ಆದೇಶವನ್ನು ಹೊರಡಿಸಿದೆ. ಮುಂದುವರೆದು ರಾಜ್ಯದಲ್ಲಿಯ ಇಲಾಖಾ ಸಾಂಖ್ಯಿಕ ವಿಭಾಗಗಳ ಕಾರ್ಯನಿರ್ವಹಣೆಯ ಕುರಿತು ಅವಶ್ಯವೆನಿಸಿದಾಗ ವ್ಯವಸ್ಥಿತವಾದ ಅಧ್ಯಯನವನ್ನು ಕೈಗೊಳ್ಳಲು ನಿರ್ದೇಶನಾಲಯಕ್ಕೆ ಅಧಿಕಾರವನ್ನು ನೀಡಲಾಗಿದೆ. ರಾಜ್ಯ ಸರ್ಕಾರದ ಇಲಾಖೆಗಳು ತ್ವರಿತ ಹಾಗೂ ನಿಖರವಾದ ಅಂಕಿ ಅಂಶಗಳ ವರದಿಗಳನ್ನು ಹೊರತರಲು ರಾಜ್ಯ ಸರ್ಕಾರವು ಮೇಲೆ ಓದಲಾದ ಉಲ್ಲೇಖ (1) ಮತ್ತು (2)ರ ಸುತ್ತೋಲೆಗಳನ್ನು ಹೊರಡಿಸಿದೆ.

3. ಪ್ರಸ್ತುತ ನಿರ್ದೇಶನಾಲಯವು ನೋಡಲ್ ಏಜೆನ್ಸಿಯಾಗಿ ಕೆಲವೇ ಪ್ರಕಾರ್ಯಗಳನ್ನು ನಿರ್ವಹಿಸುತ್ತಿದೆ. 15ನೇ ಕೇಂದ್ರ ಮತ್ತು ರಾಜ್ಯ ಸಾಂಖ್ಯಿಕ ಸಂಸ್ಥೆಗಳ ಸಮ್ಮೇಳನದಲ್ಲಿ (ಇನ್ನು ಮುಂದೆ ಸಮ್ಮೇಳನವೆಂದು ಕರೆಯಲಾಗುವುದು) ನಿರ್ದೇಶನಾಲಯಕ್ಕೆ ಯಾವ ರಾಜ್ಯದಲ್ಲಿ ನೋಡಲ್ ಏಜೆನ್ಸಿ ದರ್ಜೆಯನ್ನು ನೀಡಲಾಗಿದೆಯೋ ಆ ರಾಜ್ಯದ ನಿರ್ದೇಶನಾಲಯವು ತನ್ನ ಉಪಯುಕ್ತತೆಯನ್ನು ಸ್ಥಾಪಿಸುವುದಕ್ಕಾಗಿ ಕ್ರಿಯಾತ್ಮಕವಾದ ಉಪಕ್ರಮಗಳನ್ನು ತೆಗೆದುಕೊಂಡು ತನ್ನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ನೀಡಿದ ಅಧಿಕಾರವನ್ನು ಸಮರ್ಥವಾಗಿ ಬಳಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಇದಲ್ಲದೆ 16ನೇ ಮತ್ತು 17ನೇ ಸಮ್ಮೇಳನಗಳು ಕೂಡಾ ಇದನ್ನೇ ಒತ್ತಿ ಹೇಳಿವೆ. ದಿನಾಂಕ : 26ನೇ ನವೆಂಬರ್ 2008 ರಂದು ನಡೆದ ದಕ್ಷಿಣ ರಾಜ್ಯಗಳ ಸಾಂಖ್ಯಿಕ ಸಚಿವರುಗಳ ಪ್ರಾದೇಶಿಕ ಸಮ್ಮೇಳನವು ಕೂಡಾ ನಿರ್ದೇಶನಾಲಯವು ಎಲ್ಲ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ "ನೋಡಲ್ ಏಜೆನ್ಸಿ" ಯಾಗಿ ಪರಿಣಾಮಕಾರಿ ಪಾತ್ರವನ್ನು ವಹಿಸಬೇಕೆಂದು ಶಿಫಾರಸ್ಸು ಮಾಡಿದೆ.

4. ಅಂಕಿ ಅಂಶಗಳ ಕ್ಷೇತ್ರದ ವಿಸ್ತರಣೆಯಲ್ಲಿ ನಿರಂತರ ಬದಲಾವಣೆ ಹಾಗೂ ಅಂಕಿ-ಅಂಶಗಳ ಸಂಗ್ರಹಣೆ, ವಿಶ್ಲೇಷಣೆ, ವಿವರಣೆ ಮತ್ತು ಪ್ರಸಾರ ವಿಷಯಗಳಲ್ಲಿ ಸುಧಾರಣೆ ಮತ್ತು ಸತತ ಬದಲಾವಣೆಯಿಂದ ರಾಜ್ಯ ಸಾಂಖ್ಯಿಕ ವ್ಯವಸ್ಥೆಯ ಸುಧಾರಣೆಯನ್ನು ಕೈಗೊಳ್ಳಲು ನಿರ್ದೇಶನಾಲಯವನ್ನು "ನೋಡಲ್ ಏಜೆನ್ಸಿ" ಯಾಗಿ ಕ್ರಿಯಾತ್ಮಕವಾಗಿ ಪ್ರೋತ್ಸಾಹಿಸುವ ಅವಶ್ಯಕತೆಯಿದೆ. ಇದನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯಲ್ಲಿ ಅಳವಡಿಸಲಾಗಿದೆ. ಮೇಲಿನ ಎಲ್ಲ ಅಂಶಗಳು ನಿರ್ದೇಶನಾಲಯವನ್ನು ಬಲಗೊಳಿಸುವ ಅವಶ್ಯಕತೆಯನ್ನು ತಿಳಿಸುತ್ತದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂ. ಪಿಡಿ 183 ಎಸ್‌ಎಂಸಿ 2010, ಬೆಂಗಳೂರು, ದಿನಾಂಕ : 25ನೇ ಜನವರಿ 2011

ಮೇಲೆ ಓದಲಾದ ಉಲ್ಲೇಖ (3)ರ ಹಿಂದಿನ ಆದೇಶವನ್ನು ರದ್ದುಗೊಳಿಸಿ ಕರ್ನಾಟಕ ಸರ್ಕಾರವು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯದ ಎಲ್ಲ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ "ನೋಡಲ್ ಏಜೆನ್ಸಿ" ಯಾಗಿ ಕರ್ತವ್ಯ ನಿರ್ವಹಿಸಲು ಹಾಗೂ ಎಲ್ಲ ಸಾಂಖ್ಯಿಕ ವಿಷಯಗಳಲ್ಲಿ ಎಲ್ಲಾ ಇಲಾಖೆಗಳಿಗೆ ಸಲಹೆಯನ್ನು ನೀಡಲು ಅಧಿಕಾರಯುಕ್ತವನ್ನಾಗಿ ಮಾಡಲು ಹರ್ಷಿಸುತ್ತದೆ.

2. ನಿರ್ದೇಶನಾಲಯಕ್ಕೆ ವಹಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ;

1) ಇಲಾಖೆಗಳ ಅವಶ್ಯಕತೆಗನುಗುಣವಾಗಿ ಅಂಕಿ-ಅಂಶಗಳ ಸಂಗ್ರಹಣೆಗೆ ಒತ್ತು ನೀಡುವುದು ;

2) ಪ್ರತಿಯೊಂದು ಇಲಾಖೆಯ ವಾರ್ಷಿಕ ಅಂಕಿ–ಅಂಶಗಳ ಸಂಗ್ರಹಣೆ ಕಾರ್ಯಕ್ರಮವನ್ನು ಯೋಜಿಸುವುದು ;
3) ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ ಕಾರ್ಯವಿಧಾನವನ್ನು ನಮೂನೆಗಳನ್ನು ಅವಧಿಯನ್ನು, ವೇಳಾಪಟ್ಟಿಯನ್ನು, ವಿವಿಧ ಹಂತಗಳ ಹಾಗೂ ಮಾದರಿಯ ತಃಖ್ತೀಕರಣ, ಅಂತಿಮ ವರದಿ/ಪ್ರಕಟಣೆ, ಇತ್ಯಾದಿ ವಿಷಯ ವಸ್ತುಗಳನ್ನು ನಿಗಧಿಪಡಿಸುವುದು.
4) ಎಲ್ಲೆಲ್ಲಿ ಸಾಂದರ್ಭಿಕವಾಗಿ ಅವಶ್ಯವೋ ಆ ವಿಷಯಗಳಲ್ಲಿ ಲಿಂಗ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಸಾಮುದಾಯಿಕ ಅಂಕಿ–ಅಂಶಗಳ ಸಂಗ್ರಹಣೆಯಲ್ಲಿ ಇಲಾಖೆಗಳಿಗೆ ಸಲಹೆ ನೀಡುವುದು ;
5) ಮೇಲಿನ ಕಂಡಿಕೆ 1,2,3 ಮತ್ತು 4ನ್ನು ಗಣನೆಗೆ ತೆಗೆದುಕೊಂಡು ಇಲಾಖಾ ಸಾಂಖ್ಯಿಕ ವಿಭಾಗಗಳಿಗೆ ಸೂಕ್ತ ಸಿಬ್ಬಂದಿ ವರ್ಗ ಹೊಂದಲು ಸಲಹೆ ನೀಡುವುದು ;
6) ಕಂಡಿಕೆ 5ರ ಸಿಬ್ಬಂದಿಯ ಕರ್ತವ್ಯಗಳನ್ನು ನಿಗದಿಪಡಿಸುವುದು ;
7) ಇಲಾಖೆಗಳು ತಾವು ಸಂಗ್ರಹಿಸಿದ ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಕೈಗೊಳ್ಳುವಂತೆ ಕಡ್ಡಾಯಗೊಳಿಸುವುದು. ಪ್ರಶ್ನಾವಳಿಗಳ ವಿನ್ಯಾಸ, ಅಂಕಿ–ಅಂಶಗಳ ಸಂಗ್ರಹಣೆ ಮತ್ತು ಹೆಚ್ಚು ವಿವರವಾದ ವಿಶ್ಲೇಷಣೆ ಕಾರ್ಯಗಳಲ್ಲಿ ಸುಧಾರಣೆಯನ್ನು ತರಲು ಅಂಕಿ–ಅಂಶಗಳ ಬಳಕೆದಾರರು ಹಾಗೂ ಉತ್ಪಾದಿಸುವವರ ಸಭೆ/ಕಾರ್ಯಾಗಾರಗಳನ್ನು ನಡೆಸುವಲ್ಲಿ ಇಲಾಖೆಗಳಿಗೆ ಸಹಾಯ ಮಾಡುವುದು.
8) ಇಲಾಖೆಯು ನಿರ್ವಹಿಸುವ ಆಡಳಿತ ಚಟುವಟಿಕೆಗಳು ಮತ್ತು ಸಾಮಾಜಿಕ ಆರ್ಥಿಕ ವಲಯಗಳು/ಕ್ಷೇತ್ರ ವಿಷಯಗಳಿಗೆ ಸಂಬಂಧಿಸಿದಂತೆ ಇಲಾಖೆಗಳು/ಸಂಸ್ಥೆಗಳು ಹೊರತರುವ ವಾರ್ಷಿಕ ಆಡಳಿತ ವರದಿಗಳಲ್ಲಿ ಸೂಕ್ತ ಅಂಕಿ–ಅಂಶಗಳ ಅನುಬಂಧಗಳನ್ನು ಹೊಂದುವಂತೆ ಸೂಚಿಸುವುದು ;
9) ಈ ವಾರ್ಷಿಕ ಆಡಳಿತ ವರದಿಗಳು ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಹೊಂದಿರುವಂತೆ ಖಾತ್ರಿಪಡಿಸುವುದು ;
10) ಬಡತನವನ್ನು ಕಡಿಮೆ ಮಾಡುವ ಸೂಚಿಗಳು ಹಾಗೂ ಸಹಸ್ರಮಾನ ಅಭಿವೃದ್ಧಿ ಗುರಿಗಳನ್ನೊಳಗೊಂಡ ಸ್ಥಿರ ಹಾಗೂ ಕ್ರಿಯಾತ್ಮಕ ಕನಿಷ್ಠ ಅಂಕಿ–ಅಂಶಗಳ ಸಂಗ್ರಹಣೆಗಾಗಿ ಮತ್ತು ಅವುಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಸಾರ ಮಾಡಲು ಇಲಾಖೆಗಳಿಗೆ ಸಲಹೆ ನೀಡುವುದು ;
11) ಅಂಕಿ–ಅಂಶಗಳ ಸಂಗ್ರಹಣೆಯಲ್ಲಿ ಅಳವಡಿಸಿದ ಅಂಶಗಳ ವ್ಯಾಖ್ಯೆ ಮತ್ತು ಪರಿಕಲ್ಪನೆ ಇತ್ಯಾದಿಗಳು ಏಕರೂಪದ್ದಾಗಿರುವಂತೆ ಖಾತ್ರಿಪಡಿಸುವುದು.
12) ತಾಂತ್ರಿಕ ಮತ್ತು ಅಂಕಗಣಿತದ ತಪ್ಪುಗಳಿಂದ ಹಾಗೂ ಸರಿಯಿಲ್ಲದಿರುವಿಕೆಯಿಂದ ಮತ್ತು ಅಸಂಬದ್ಧತೆಯಿಂದ ಮುಕ್ತವಾದ ಒಂದೇ ತೆರನಾದ ಅಂಕಿ–ಅಂಶಗಳನ್ನು ಎಲ್ಲ ಮಟ್ಟಗಳಲ್ಲಿ ನಿರ್ವಹಿಸಲು ಇಲಾಖೆಗಳಿಗೆ ಸಲಹೆ ನೀಡುವುದು ;
13) ಇಲಾಖೆಗಳ ನಡುವಣ ಒಂದೇ ತೆರನಾದ ಅಂಕಿ–ಅಂಶಗಳ ಸಂಗ್ರಹಣೆಯ ಪುನರಾವರ್ತನೆ ಕಾರ್ಯವನ್ನು ಕಡಿಮೆಗೊಳಿಸುವ/ತೊಡೆದು ಹಾಕುವ ಕ್ರಮವನ್ನು ಖಾತ್ರಿಪಡಿಸಬೇಕು ;
14) ಅಂಕಿ–ಅಂಶಗಳ ಸಂಗ್ರಹಣೆಗಾಗಿ ಅಳವಡಿಸಿದ ಸಂಪನ್ಮೂಲಗಳ ಗರಿಷ್ಠ ಮಟ್ಟದ ಸದುಪಯೋಗಕ್ಕಾಗಿ ಸಾಧನೋಪಾಯಗಳ ಬಗ್ಗೆ ಸಲಹೆ ನೀಡುವುದು.
15) ಅಂಕಿ–ಅಂಶಗಳ ಅಧಿನಿಯಮ 2008 ಹಾಗೂ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ;
16) ಸಮೀಕ್ಷಾ ಅಂಕಿ–ಅಂಶಗಳಿಂದ ಜಿಲ್ಲೆ ಮತ್ತು ಉಪ–ಜಿಲ್ಲಾ ಮಟ್ಟದಲ್ಲಿ ಅಂದಾಜುಗಳನ್ನು ತಯಾರಿಸಲು ಕೇಂದ್ರ ಸಾಂಖ್ಯಿಕ ಕಚೇರಿ/ಭಾರತೀಯ ಕೃಷಿ ಸಂಶೋಧನಾ ಅಂಕಿ–ಅಂಶಗಳ ಸಂಸ್ಥೆ ಕಾರ್ಯರೂಪಕ್ಕೆ ತಂದಿರುವ ಸಣ್ಣ ಕ್ಷೇತ್ರಗಳ ಅಂದಾಜು ಪದ್ಧತಿಯನ್ನು ಅಳವಡಿಸುವುದು ;
17) ಎಲ್ಲ ಇಲಾಖೆಗಳು/ಸಂಸ್ಥೆಗಳು ತಮ್ಮ ವೆಬ್‌ಸೈಟಿನಲ್ಲಿ ಮಹತ್ವದ ಅಂಕಿ–ಅಂಶಗಳನ್ನು ಪ್ರಸಾರಪಡಿಸುವುದನ್ನು ಮತ್ತು ಯಾವಾಗ ಈ ಅಂಕಿ–ಅಂಶಗಳನ್ನು ಪ್ರಸಾರ ಪಡಿಸಲಾಗುವುದೆಂಬ ಬಗ್ಗೆ ಮುಂಗಡ ವೇಳಾಪಟ್ಟಿಯನ್ನು ಅಳವಡಿಸುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ನಿರ್ದೇಶನಾಲಯದ ವೆಬ್‌ಸೈಟಿನಲ್ಲಿ "ರಾಜ್ಯ ಸಂಕ್ಷಿಪ್ತ ಅಂಕಿ–ಅಂಶಗಳ ಪುಟ"ವನ್ನು ಹಾಕುವುದು ಮತ್ತು ಇಲಾಖೆಗಳು/ಸಂಸ್ಥೆಗಳ ವೆಬ್‌ಸೈಟ್‌ಗಳನ್ನು ಅದಕ್ಕೆ ಲಿಂಕ್ ಮಾಡುವುದು.

3. ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಇಲಾಖೆಗಳು/ಪಂಚಾಯತ್ ರಾಜ್ ಸಂಸ್ಥೆಗಳು/ನಗರ ಸ್ಥಳೀಯ ಸಂಸ್ಥೆಗಳು/ಮಂಡಳಿಗಳು/ನಿಗಮಗಳು ಕೆಳಗಿನವುಗಳನ್ನು ಪಾಲಿಸತಕ್ಕದ್ದು :

1. ಅವಶ್ಯಕ ಅಂಕಿ–ಅಂಶಗಳು ನಿರ್ದೇಶನಾಲಯದಲ್ಲಾಗಲಿ ಅಥವಾ ಇತರೆ ಇಲಾಖೆಗಳಲ್ಲಾಗಲಿ ಲಭ್ಯವಿವೆಯೇ ? ಎಂಬುದನ್ನು ಮೊದಲು ಖಾತ್ರಿಪಡಿಸಿಕೊಳ್ಳದೆಯೇ, ಸದರಿ ಅಂಕಿ–ಅಂಶಗಳ ಸಂಗ್ರಹಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದಲ್ಲ. ಈ ಷರತ್ತು ಇಲಾಖೆಯ/ಮುಖ್ಯ ಕಛೇರಿಯ ಉಪ ಕಚೇರಿಗಳ/ವಿವಿಧ ಶಾಖೆಗಳಿಂದ ಸಂಗ್ರಹಿಸುವ ಅಂಕಿ–ಅಂಶಗಳಿಗೆ ಅಥವಾ ಆಡಳಿತ ವಿಷಯಗಳ ಅಥವಾ ಸಣ್ಣ ವಿಷಯಗಳ ಅಂಕಿ–ಅಂಶಗಳ ಸಂಗ್ರಹಣೆಗೆ ಅನ್ವಯಿಸುವುದಿಲ್ಲ.
2. ಹೊಸದಾಗಿ ಅಂಕಿ–ಅಂಶಗಳ ಸಂಗ್ರಹಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಪದ್ಧತಿ, ಮಾದರಿ ವಿನ್ಯಾಸ, ನಮೂನೆಗಳು, ಪರಿಕಲ್ಪನೆ ಮತ್ತು ಪ್ರತಿಯೊಂದು ವಿಷಯದ ಅರ್ಥ ವಿವರಣೆ, ತಃಖ್ತೀಕರಣ, ಇತ್ಯಾದಿಗಳನ್ನು ನಿರ್ದೇಶನಾಲಯದೊಂದಿಗೆ ಸಮಾಲೋಚಿಸಿ ವಿಕಾಸಗೊಳಿಸತಕ್ಕದ್ದು. ನಿರ್ದೇಶನಾಲಯದಿಂದ "ನಿರಾಕ್ಷೇಪಣಾ ಪ್ರಮಾಣ ಪತ್ರ"ವನ್ನು ಪಡೆದ ನಂತರವೇ ಇದನ್ನು ಪ್ರಾರಂಭಿಸತಕ್ಕದ್ದು, ನಿರ್ದೇಶನಾಲಯವು ಈ ಪ್ರಸ್ತಾವನೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕೂಡಲೇ ಸಮಾಲೋಚಿಸಿ 30 ದಿವಸಗಳೊಳಗಾಗಿ ಅಂತಿಮಗೊಳಿಸತಕ್ಕದ್ದು. ಮೇಲ್ಕಾಣಿಸಿದ ಪ್ರಮಾಣ ಪತ್ರವನ್ನು ನಿಗದಿತ ಅವಧಿಯೊಳಗಾಗಿ ಸ್ವೀಕರಿಸದಿದ್ದಲ್ಲಿ, ಅದನ್ನು ನೀಡಲಾಗಿದೆಯೆಂದು ಭಾವಿಸತಕ್ಕದ್ದು.
3. ನಿರ್ದೇಶನಾಲಯವು ಸೂಚಿಸಿದಂತಹ ಅಂಕಿ–ಅಂಶಗಳನ್ನೊಳಗೊಂಡ ಅನುಬಂಧಗಳನ್ನು ಹಾಗೂ ಅದರ ವಿಶ್ಲೇಷಣೆಯನ್ನು ಹೊಂದಿದ ವಾರ್ಷಿಕ ಆಡಳಿತ ವರದಿಗಳನ್ನು ಹೊರತರತಕ್ಕದ್ದು.
4. ತಮ್ಮಲ್ಲಿ ಹಾಗೂ ನಿರ್ದೇಶನಾಲಯದಲ್ಲಿ ಲಭ್ಯವಿರುವ ಎಲ್ಲಾ ಅಂಕಿ–ಅಂಶಗಳ ಪೂರ್ಣ ಪ್ರಮಾಣದ ಬಳಕೆಯನ್ನು ಮಾಡತಕ್ಕದ್ದು.
5. ಅಂಕಿ–ಅಂಶಗಳ ಸಂಗ್ರಹಣೆಯ ಕಾರ್ಯವು ಪುನರಾವರ್ತನೆಗೊಳ್ಳುವುದನ್ನು ತಪ್ಪಿಸಲು ಸಾಧ್ಯವಾಗದಿದ್ದರೂ ಅದನ್ನು ಮಿತಗೊಳಿಸತಕ್ಕದ್ದು.

6. ಅಂಕಿ-ಅಂಶಗಳ ಆಧಾರದ ಮೇಲೆ ನಿರ್ಣಯಗಳನ್ನು ಕೈಗೊಳ್ಳುವುದರಿಂದ ಸಂಗ್ರಹಿಸಿದ ಅಂಕಿ-ಅಂಶಗಳು ವಿಶ್ವಾಸಾರ್ಹ, ನಂಬಲರ್ಹ ಮತ್ತು ಕಾಲಮಿತಿಯ ಅಂಕಿ-ಅಂಶಗಳಾಗಿರತಕ್ಕದ್ದು.
7. ಎಲ್ಲ ಅಂಕಿ-ಅಂಶಗಳುಳ್ಳ ವರದಿಗಳು ಸಂಪೂರ್ಣ ವಿಷಯಗಳನ್ನು ಆವರಿಸತಕ್ಕದ್ದು ಮತ್ತು ಅವುಗಳು ಅಂಕಗಣಿತ ಮತ್ತು ತಾಂತ್ರಿಕ ತಪ್ಪುಗಳಿಂದ ಕೂಡಿರತಕ್ಕದ್ದಲ್ಲ ಮತ್ತು ಅಸಂಬದ್ಧತೆಯಿಂದ ಮುಕ್ತವಾಗಿರತಕ್ಕದ್ದು.
8. ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳು ಸಲ್ಲಿಸುವಂತಹ ಒಂದೇ ಅವಧಿಯ ಅಂಕಿ-ಅಂಶಗಳಲ್ಲಿ ಯಾವುದೇ ನ್ಯೂನತೆ ಅಥವಾ ವ್ಯತ್ಯಾಸವಿರಕೂಡದು.
9. ವಿಶ್ವಾಸಾರ್ಹ, ನಂಬಲರ್ಹ ಮತ್ತು ಕಾಲಮಿತಿಯ ಅಂಕಿ-ಅಂಶಗಳನ್ನು ಒದಗಿಸಲು ಆಧುನಿಕ ಮಾಹಿತಿ ಹಾಗು ಸಂವಹನ ತಂತ್ರಜ್ಞಾನವನ್ನು ಉಪಯೋಗಿಸಿ ಆಡಳಿತ ಅಂಕಿಅಂಶಗಳ ದೃಢೀಕರಣ, ಸಂಗ್ರಹಣೆ, ಪುನಃ ಪಡೆಯುವುದು, ವರ್ಗಾವಣೆ ಮತ್ತು ಕ್ರೋಢೀಕರಣ ಪ್ರಕ್ರಿಯೆಗಳಂತಹ ಕ್ರಿಯೆಗಳು ಪರಿಣಾಮಕಾರಿಯಾಗಿರುವಂತೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.
10. ಮುದ್ರಿತ ಪ್ರಕಟಣೆಗಳನ್ನು ಹೊರಡಿಸುವುದಲ್ಲದೆ ಎಲ್ಲ ಮಹತ್ವದ ಅಂಕಿ-ಅಂಶಗಳನ್ನು/ವರದಿಗಳನ್ನು ತಮ್ಮ ವೆಬ್‌ಸೈಟಿನಲ್ಲಿ ಹಾಕುವುದು. ವೆಬ್‌ಸೈಟಿನಲ್ಲಿ ಹಾಕುವ ಈ ಅಂಕಿ-ಅಂಶಗಳ ಮುಂಗಡ ವೇಳಾಪಟ್ಟಿಯನ್ನು ತಯಾರಿಸಿ ಅದನ್ನು ವೆಬ್‌ಸೈಟಿನಲ್ಲಿ ಪ್ರಚುರಪಡಿಸಬೇಕು.
11. ಎಲ್ಲ ಇಲಾಖಾ/ಸಂಸ್ಥೆಯ ಮುಖ್ಯಸ್ಥರು ರಾಜ್ಯ ಮತ್ತು/ಅಥವಾ ಕೇಂದ್ರ ಸರ್ಕಾರ ಅಥವಾ ಇತರೆ ಪ್ರಾಧಿಕಾರಕ್ಕೆ ಸಲ್ಲಿಸುವ ಎಲ್ಲ ಅಂಕಿ-ಅಂಶಗಳ ತಃಖ್ತೆಗಳನ್ನು/ವರದಿಗಳನ್ನು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರಿಗೆ ಕಳುಹಿಸತಕ್ಕದ್ದು. ಅದರಂತೆ ಜಿಲ್ಲಾ ಹಾಗೂ ವಿಭಾಗೀಯ ಮಟ್ಟದ ಅಧಿಕಾರಿಗಳು ಇಂತಹ ವರದಿಗಳನ್ನು ಆಯಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

4. ಎಲ್ಲ ಇಲಾಖೆಗಳು ವಿಶ್ವಾಸಾರ್ಹ, ನಂಬಲರ್ಹ ಮತ್ತು ಕಾಲಮಿತಿಯ ಅಂಕಿ-ಅಂಶಗಳನ್ನು ಉತ್ಪಾದಿಸುವ ಹಾಗೂ ಮೇಲ್ಕಾಣಿಸಿದ ಚಟುವಟಿಕೆಗಳ ಉಸ್ತುವಾರಿಯನ್ನು ಕೈಗೊಳ್ಳಲು ಕೆಳಕಂಡಂತೆ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಗಳನ್ನು ರಚಿಸಲು ಕರ್ನಾಟಕ ಸರ್ಕಾರವು ಹರ್ಷಿಸುತ್ತದೆ :

ರಾಜ್ಯ ಮಟ್ಟದ ಸಮನ್ವಯ ಸಮಿತಿಯು ಈ ಕೆಳಕಂಡಂತಿದೆ :

1.	ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ	ಅಧ್ಯಕ್ಷರು
2.	ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಪ್ರತಿನಿಧಿ	ಸದಸ್ಯರು
3.	ಫೆಡರೇಷನ್ ಆಫ್ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್‌ನ ಪ್ರತಿನಿಧಿ	ಸದಸ್ಯರು
4.	ಮುಖ್ಯಸ್ಥರು, ಸಂಖ್ಯಾ ಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
5.	ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
6.	ಮುಖ್ಯಸ್ಥರು, ಕೃಷಿ ಅರ್ಥಶಾಸ್ತ್ರ/ಸಂಖ್ಯಾಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು	ಸದಸ್ಯರು
7.	ವಿಶೇಷಾಧಿಕಾರಿ, ಮೌಲ್ಯಮಾಪನ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ	ಸದಸ್ಯರು
8.	ಜಂಟಿ ನಿರ್ದೇಶಕರು (ಪ್ರಕಟಣೆ, ಸಮನ್ವಯ ಮತ್ತು ತರಬೇತಿ), ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ (ಕೇಂದ್ರ ಕಛೇರಿ)	ಸದಸ್ಯ ಕಾರ್ಯದರ್ಶಿ

5. ರಾಜ್ಯ ಮಟ್ಟದ ಸಮನ್ವಯ ಸಮಿತಿಯು ಕನಿಷ್ಠ ಎರಡು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ರಾಜ್ಯ ಮಟ್ಟದಲ್ಲಿ ಇಲಾಖೆಗಳು/ಸಂಸ್ಥೆಗಳು ಹೊಂದಿರುವ ಇಲಾಖಾ ಸಾಂಖ್ಯಿಕ ವಿಭಾಗಗಳ ಮುಖ್ಯಸ್ಥರನ್ನು ಮತ್ತು ಈ ವಿಭಾಗಗಳು ಇಲ್ಲದ ಕಡೆಗಳಲ್ಲಿ ಹಿರಿಯ ಅಧಿಕಾರಿಗಳನ್ನು ಮತ್ತು ಜಿಲ್ಲಾ ಪಂಚಾಯಿತಿಗಳ ಮುಖ್ಯ ಯೋಜನಾಧಿಕಾರಿಗಳನ್ನು ತಂಡ ತಂಡವಾಗಿ ಸಭೆಗಳಿಗೆ ಕರೆದು ಸಾಂಖ್ಯಿಕ ಚಟುವಟಿಕೆಗಳ ಪರಿಶೀಲನೆಯನ್ನು ಕೈಗೊಳ್ಳತಕ್ಕದ್ದು. ಸಮಿತಿಯು ಎಲ್ಲ ಇಲಾಖೆ/ಸಂಸ್ಥೆಗಳ ಸಮೀಕ್ಷೆಯನ್ನು ವರ್ಷದಲ್ಲಿ ಎರಡು ಬಾರಿ ಕೈಗೊಳ್ಳತಕ್ಕದ್ದು. ಈ ಸಭೆಗಳಿಗೆ ಯೋಜನಾ ಇಲಾಖೆಯ ಸಂಬಂಧಪಟ್ಟ ಕಾರ್ಯನಿರತ ನಿರ್ದೇಶಕರನ್ನು ಹಾಗೂ ನಿರ್ದೇಶನಾಲಯದ ಜಂಟಿ ನಿರ್ದೇಶಕರನ್ನು ಆಹ್ವಾನಿಸುವುದು.

6. ಮೇಲಿನ ಸಮಿತಿಯ ಅಧ್ಯಕ್ಷರು ಈ ಸಭೆ ನಡೆದ ಕೂಡಲೇ ಮೇಲಿನ ವಿಷಯಗಳಲ್ಲಿ ಕೈಗೊಂಡ ಅಭಿವೃದ್ಧಿಯ ವಿವರಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಯೋಜನಾ, ಕಾರ್ಯಕ್ರಮ ಸಂಯೋಜನಾ ಮತ್ತು ಸಾಂಖ್ಯಿಕ ಇಲಾಖೆ ಇವರಿಗೆ ನೀಡತಕ್ಕದ್ದು.

ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯು ಈ ಕೆಳಕಂಡಂತಿದೆ :

1.	ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ	ಅಧ್ಯಕ್ಷರು
2.	ಆಯಾ ಜಿಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ	ಸದಸ್ಯರು
3.	ಆಯಾ ಜಿಲ್ಲೆಯಲ್ಲಿನ ಅರ್ಥಶಾಸ್ತ್ರ ವಿಷಯದ ಸ್ನಾತಕೋತ್ತರ ಕೇಂದ್ರದ ಅಥವಾ ಪದವಿ ಕಾಲೇಜಿನ ಪ್ರೊಫೆಸರ್	ಸದಸ್ಯರು
4.	ಆಯಾ ಜಿಲ್ಲೆಯಲ್ಲಿನ ಸಂಖ್ಯಾ ಶಾಸ್ತ್ರ ವಿಷಯದ ಸ್ನಾತಕೋತ್ತರ ಕೇಂದ್ರದ ಅಥವಾ ಪದವಿ ಕಾಲೇಜಿನ ಪ್ರೊಫೆಸರ್	ಸದಸ್ಯರು
5.	ಆಯಾ ಜಿಲ್ಲೆಯಲ್ಲಿನ ಕಾರ್ಯನಿರತ ಪ್ರಖ್ಯಾತ ಸಂಶೋಧನಾ ಸಂಸ್ಥೆ ಅಥವಾ ಸಂಶೋಧನೆ/ಅಧ್ಯಯನ/ಸಮೀಕ್ಷೆ ಕಾರ್ಯದಲ್ಲಿ ತೊಡಗಿಸಿಕೊಂಡ ಸರ್ಕಾರೇತರ ಸಂಸ್ಥೆಯ-ಪ್ರತಿನಿಧಿ	ಸದಸ್ಯರು
6.	ಆಯಾ ಜಿಲ್ಲಾ ಪಂಚಾಯತ್‌ನ ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ	ಸದಸ್ಯ ಕಾರ್ಯದರ್ಶಿ

7. ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಈ ಸಮಿತಿಯು ಜಿಲ್ಲಾ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಂಖ್ಯಿಕ ಸಿಬ್ಬಂದಿಯನ್ನು ಮತ್ತು ಈ ಸಿಬ್ಬಂದಿ ಇಲ್ಲದ ಕಡೆಗಳಲ್ಲಿ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ತಂಡ ತಂಡವಾಗಿ ಸಭೆಗಳಿಗೆ ಕರೆದು ಇಲಾಖೆಗಳ ಸಾಂಖ್ಯಿಕ ಚಟುವಟಿಕೆಗಳ ಪರಿಶೀಲನೆಯನ್ನು ಕೈಗೊಳ್ಳತಕ್ಕದು. ಜಿಲ್ಲಾ ಮಟ್ಟದ ಎಲ್ಲಾ ಕಛೇರಿಗಳ ಸಮೀಕ್ಷಾ ಕಾರ್ಯವನ್ನು ವರ್ಷಕ್ಕೆ ಎರಡು ಬಾರಿ ಕೈಗೊಳ್ಳತಕ್ಕದ್ದು.

8. ಮೇಲಿನ ಸಮಿತಿಯ ಅಧ್ಯಕ್ಷರು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಸಭೆ ನಡೆದ ಕೂಡಲೇ ಮೇಲಿನ ವಿಷಯಗಳಲ್ಲಿ ಕೈಗೊಂಡ ಅಭಿವೃದ್ಧಿಯ ವಿವರಗಳನ್ನು ನೀಡತಕ್ಕದು. ಇದಲ್ಲದೆ ಈ ವಿಷಯದಲ್ಲಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರಿಗೆ ವರದಿಗಳನ್ನು ಸಲ್ಲಿಸತಕ್ಕದು.

9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಐಎಫ್‌ಎಸ್ 113ಎಸ್‌ಎಂಎಂ 95, ದಿನಾಂಕ : 04–04–1996ರಲ್ಲಿ ರಚಿಸಿದ ಸಾಂಖ್ಯಿಕ ವಿಷಯಗಳ ಮೇಲಿನ ಉನ್ನತಾಧಿಕಾರಿ ಸಮಿತಿಯ ಮುಂದೆ ನಿರ್ದೇಶನಾಲಯವು ಬೃಹತ್ ಅಂಕಿ–ಅಂಶಗಳ ಸಂಗ್ರಹಣೆ ಕಾರ್ಯಕ್ರಮಗಳು, ಇಲಾಖೆ/ಸಂಸ್ಥೆಗಳಲ್ಲಿ ಸಾಂಖ್ಯಿಕ ಹುದ್ದೆಗಳ ಸೃಜನೆ, ಇತ್ಯಾದಿ ವಿಷಯಗಳ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಮಂಡಿಸಬೇಕು. ಮುಂದುವರೆದು, ಈ ಸಮಿತಿಯು ಹೊರತರಬಹುದಾದ ಸಾಂಖ್ಯಿಕ ವರದಿಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವೇಳಾಪಟ್ಟಿಯನ್ನು ನಿರ್ಧರಿಸುವುದು. ಮುಂದುವರೆದು, ಈ ಸಮಿತಿಯು ಸಾಂಖ್ಯಿಕ ವರದಿಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಮಟ್ಟದಲ್ಲಿ ಬಳಕೆದಾರರಿಗೆ ಒದಗಿಸಬೇಕು ಎಂಬ ಬಗ್ಗೆಯೂ ನಿರ್ಧಾರವನ್ನು ಕೈಗೊಳ್ಳುವುದು.

10. ನಿರ್ದೇಶನಾಲಯವು **"ನೋಡಲ್ ಏಜೆನ್ಸಿ"** ಯಾಗಿ ತನ್ನ ಪ್ರಕಾರ್ಯಗಳನ್ನು ಕೈಗೊಳ್ಳಲು ಜಂಟಿ ನಿರ್ದೇಶಕರು (ಪ್ರಕಟಣೆ, ಸಮನ್ವಯ ಮತ್ತು ತರಬೇತಿ), ಆರ್ಥಿಕ ಸಾಂಖ್ಯಿಕ ನಿರ್ದೇಶನಾಲಯ ಇವರು ಸದರಿ ನಿರ್ದೇಶನಾಲಯದ ನಿರ್ದೇಶಕರಿಗೆ ನೆರವು ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ವಿ. ರಂಗನಾಥ
ಸರ್ಕಾರದ ಮುಖ್ಯ ಕಾರ್ಯದರ್ಶಿ,

PLANNING SECRETARIAT

SUB : Role of the Directorate of Economics and Statistics as "NODAL AGENCY"' – Constitution of State Level and District Level Co-ordination Committees for improving the State Statistical System-regarding-

READ :
1. Government Circular No. DPAR 67 AAR 82 dated 18.06.1982
2. Government Circular No. DPAR 67 AAR 82 dated 02.09.1982
3. Government Order No. PD 176 PST 82 dated 10.11.1982

PREAMBLE :

Co-ordination, collaboration, networking and information sharing are essential for an effective State Statistical System as they lead to a shared view of goals and objectives, a clear understanding and agreement on the roles and responsibilities of diverse actors, reciprocal, open dialogue and good communication, mutual support, synergy and accountability and trust in official statistics. There is a need for good co-ordination and information sharing between data users and data producers to make the statistical system user-responsive and user-driven. Co-ordination and information sharing among the data producers is also necessary in order to achieve synergy and more effective use of resources for data production and to minimize the production of conflicting data.

2. To bring about co-ordination in statistical activities, the State Government had issued a Government Order during 1982 read at (3) above, declaring the Directorate of Economics and Statistics (Des) as the "Nodal Agency" in relation to all statistical matters in the State and to empower the DES to undertake systematic studies of the working of departmental statistical divisions in the State as and when necessary. The State Government has also issued circulars read at (1) & (2) above for expeditious and accurate reporting of statistical data by the State Government departments.

3. At present, a very few functions are being carried out by the DES as "Nodal Agency". In the 15th Conference of Central and State Statistical Organisations (COCSSO) it was recommended that wherever the "Nodal Agency" status has already been granted to the DES, they must make all possible efforts to utilize the empowerment to play their role more effectively by taking initiatives in a proactive fashion for establishing their usefulness in the State. Further, 16th & 17th COCSSOs have also reiterated the same. The Regional Conference of Ministers in-charge of Statistics in Southern States held on 26th November 2008 at Bangalore has also recommended that the DES should play an effective role as "Nodal Agency" in respect of all the statistical activities.

4. As there is a continual change in the expansion of areas covered by statistics and constant change and improvement in the methodology of data collection, analysis, interpretation and dissemination, there is a need to actively promote the DES as a "Nodal Agency" to improve the State Statistical System. This has been adopted in the Karnataka State Strategic Statistical Plan. In furtherance of the above, it is felt necessary to strengthen the DES. Hence the following orders

G.O. No. PD 183 SMC 2010, Bangalore, Dated : 25-01-2011

In supersession of the earlier order read at (3) above, the Government of Karnataka are pleased to empower the Directorate of Economics and Statistics (DES) with immediate effect to act as a **"Nodal Agency"** in respect of all the statistical activities of the State and to provide advice to all the Government departments in all the statistical matters.

2 In discharging the assigned role and responsibilities, the DES should carry out the following functions :

1) Orient data collection programmes to the needs of the departments ;
2) Chalk out an annual data collection programme of each department ;

3) Lay down procedures, formats, periodicity, time schedule, stages and types of tabulation, the content of the final output/publication, etc., in relation to the above ;

4) Advise the departments to collect gender, SC/ST and community wise data wherever relevant;

5) Suggest suitable staffing pattern for the Departmental Statistical Divisions taking into consideration item nos. 1,2,3 & 4 above,

6) Evolve/prescribe job charts/duties of the personnel at item no. 5 above,

7) Make it compulsory for the departments to undertake analysis of data collected by them Assist the departments to conduct user-producer meetings/workshops to improve the design of the questionnaires, data collection and more detailed analysis ;

8) Suggest suitable statistical appendices for the Annual Administration Reports brought out by the Departments/Organizations in relation to administrative activities and developments in the socio-economic sectors/subject fields dealt with by them;-

9) Ensure these Annual Administration Reports contain analysis of data;

10) Advise departments to collect data on a minimum set of static and dynamic indicators including poverty reduction indicators and with regard to Millennium development Goals and disseminate the same through their website ;

11) Ensure adoption of uniform concepts and definitions of terms etc, employed in the collection of statistical data ;

12) Advise the departments to maintain one set of data at all levels free from incorrect or inconsistent, mechanical and arithmetical errors ;

13) Ensure the elimination/minimization of duplication of statistical work among departments;

14) Suggest ways and means for optimum utilization of resources applied for collection of statistics ;

15) Implement The Collection of Statistics Act 2008 and Rules effectively ;

16) Adopt established methods of Small Area Estimates supplied by Central Statistical Office/Indian Agricultural Statistics Research Institute to arrive at estimates at district and sub-districts level from survey data ;

17) Ensure all the Departments/Organizations post important data and also advance calendar of posting these data on their website. Post "State Summary Data page on DES website" and link it with line Departments/Organizations.

3. In relation to the statistical activities, the Government Departments/Panchayat Raj Institutions/Urban Local Bodies /Boards/Corporations should adhere to the following ;

1. Data collection programmes should not be initiated on any subject without first ascertaining whether the needed data is already available with the DES or other departments. This will not, however, apply to collection of data of administrative nature and on other minor items or generated from different sections/sub-offices of an offices/department ;

2. Whenever fresh data collection programmes are initiated, the procedure, sampling design, schedules/formats, concept and meaning of each item, the tabulation programme, etc., should be evolved in consultation with the DES This should be undertaken only after obtaining "No objection Certificate '' from the DES The Des should finalize these proposals in consultation with the concerned officers immediately and not later than 30 days. If the certificate is not received by this deadline, the same may be presumed as issued;

3. Annual Administration Reports should be brought out with the statistical appendices and analysis of data suggested by the DES ;

4. All the data available with them and with the DES should be utilized to the fullest extent ;

5. The duplication of efforts in collection of data should be minimized if not avoided ;

6. The data collected should be reliable, credible and timely as the decisions are taken on the basis of these data ;

7. Ensure all the statistical reports should have complete coverage and should not contain arithmetic and mechanical errors and also free from inconsistency ;

8. There should not be any discrepancy or difference in the data furnished by district and state level officers for the same period ;

9. Ensure effective validation, storage, retrieval, transmission and processing of the administrative data using modern tools of Information and Communication Technology to provide reliable, credible and timely data ;

10. All the important data/reports should be uploaded on the respective websites apart from issue of publications. Advance calendar of posting these data should be drawn and posted on their website ;

11. All the Heads of Departments/Organizations should invariably forward to the Director, DES Copies of all statistical statements/returns/reports submitted by them to the State and/or Central Government or any other authority.

Similarly all the District/Divisional Level Officers should forward to the concerned District Statistical officers copies of all such returns.

4. In order to monitor the above activities and to produce reliable, credible and timely statistics by all the departments, the Government of Karnataka are pleased to constitute the following State Level and District Level Co-ordination Committees :-

The **State Level Co ordination Committee** will be as under :

1.	Director, the Directorate of Economics and Statistics	Chairman
2.	Representative from Institute for Social and Economic Change (ISEC)	Member
3.	Representative from Federation of Karnataka Chamber of Commerce & Industry (FKCCI)	Member
4.	Head of the Department of Statistics, Bangalore University	Member
5.	Head of the Department of Economics, Bangalore University	Member
6.	Head of the Department of Agriculture Economics/Statistics, University of Agriculture Sciences, Bangalore	Member
7.	Special Officer, Evaluation Division, Planning Programme Monitoring and Statistics Department	Member
8.	Joint Director, (Publication, Co-ordination and Training) Directorate of Economics and Statistics (Head Office)	Member Secretary

5.. The State Level Co-ordination Committee should meet at least once in two months. The committee shall review the statistical activities of the Departments/Organizations by calling in batches the heads of the departmental statistical divisions and senior officers dealing with statistical activities where departmental statistical divisions are not in existence at State level and Chief Planning Officers of Zilla Panchayats. The review of all the Departments/Organizations should be taken up by the committee twice in a year. The concerned Functional Directors of the Planning, Programme Monitoring and Statistics Department and Joint Directors of DES may be invited to these meetings.

6. The Chairman of the above Committee has to appraise of the developments taking place in this regard from time to time to the Principal Secretary/Secretary to Government, Planning, Programme Monitoring and Statistics Department, soonafter such meetings are held.

The **District Level Co-ordination Committee** will be as under :

1.	Chief Planning Officer, Zilla Panchayat of the concerned district	Chairman
2.	District Statistical officer of the concerned district	Member
3.	Professor of Economics of PG centre OR Degree college in the District	Member
4.	Professor of Statistics of PG centre OR Degree college in the District	Member
5.	Representative from a reputed research institution/non-governmental organizations engaged in research/studies/surveys/analysis working in the district	Invitee
6.	Project Appraisal and Evaluation Officer, Zilla Panchayat of the concerned district	Member Secretary

7. The District Level Co-ordination Committee should meet at least once in three months. The committee shall review the statistical activities of the departments by calling in batches the statistical personnel working in district offices and District officers of other departments where statistical personnel are not working. The review of all the district offices should be taken up by the committee twice in a year.

8. The Chairman of the above Committee shall appraise of the developments taking place from time to time to the Deputy Commissioner and the Chief Executive Officer, Zilla Panchayat of the respective district soonafter such meetings are held. He should also submit reports to the Director, DES in this regard.

9. The DES should place the proposals of major data collection programmes, creation of posts of statistical personnel in the line Departments/Organizations, etc., before the High Power Committee on statistics constituted by the Government under the chairpersonship of the Chief Secretary to Government vide G.O. No. IFS 113 SMM 95 dated 04-04-1996 for its approval. This committee decides the statistical reports to be brought out and time-table for its publication. Further, this committee shall also decide at what level and in which format the report should be made available to the users.

10. The Joint Director (Publication, Training and Co-ordination) in the Directorate of Economics and Statistics will assist the Director DES in carrying out the functions of the DES as “NODAL AGENCY”

By Order and in the name of the Governor of Karnataka

S.V. RANGANATH

P.R. No. 437

Chief Secretary to Government

ಯುವಜನ ಸೇವಾ ಸಚಿವಾಲಯ

ವಿಷಯ : ಜಾರ್ಖಂಡ್‌ನ ರಾಂಚಿಯಲ್ಲಿ ಫೆಬ್ರವರಿ 12 ರಿಂದ 26, 2011 ರವರೆಗೆ ಜರುಗುವ 34ನೇ ರಾಷ್ಟ್ರೀಯ ಕ್ರೀಡಾಕೂಟಕ್ಕೆ ರಾಜ್ಯದಿಂದ ಕ್ರೀಡಾಪಟುಗಳ ತಂಡವನ್ನು ನಿಯೋಜಿಸುವ ಬಗ್ಗೆ.

ಓದಲಾಗಿದೆ : 1. ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು ಅವರ ಪತ್ರ ಸಂಖ್ಯೆ : ಕಕ್ರೀಪ್ರಾ/ಸಿ4/64/ರಾಕ್ರೀ/2010-11, ದಿನಾಂಕ : 7-2-2011.

ಪ್ರಸ್ತಾವನೆ :

ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು ಅವರು ಮೇಲೆ ಓದಲಾದ ದಿನಾಂಕ : 7-2-2011ರ ಪತ್ರದಲ್ಲಿ ಜಾರ್ಖಂಡ್ ರಾಜ್ಯದ ರಾಜಧಾನಿ ರಾಂಚಿಯಲ್ಲಿ 12-2-2011 ರಿಂದ 26-2-2011 ರವರೆಗೆ ಜರುಗುವ 34ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುವ ಸಲುವಾಗಿ ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಮುಖಾಂತರ ಕರ್ನಾಟಕದ ತಂಡವನ್ನು ಕಳುಹಿಸಬೇಕಿದ್ದು, ಅದರಂತೆ ಕರ್ನಾಟಕ ಒಲಂಪಿಕ್ ಸಂಸ್ಥೆಯು 600 ಕ್ರೀಡಾಪಟುಗಳು/ಅಧಿಕಾರಿ/ತರಬೇತುದಾರರ ತಂಡವನ್ನು ಸಿದ್ಧಪಡಿಸಿ ಕಳುಹಿಸಿದ್ದು ಈ ಉದ್ದೇಶಕ್ಕಾಗಿ ಈಗಾಗಲೇ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ₹ 12,17,250/-ಗಳನ್ನು ಮಂಜೂರು ಮಾಡಿದ್ದು, ಈ ಹಂತದಲ್ಲಿ ಭಾರತ ಸರ್ಕಾರವು ದಿನಾಂಕ : 19-01-2011 ರ ಪತ್ರದಲ್ಲಿ ಬಿಡುಗಡೆ ಮಾಡಿರುವ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳ 2010-11ನೇ ಸಾಲಿನ ಪಟ್ಟಿಯಲ್ಲಿ ಇಂಡಿಯನ್ ಒಲಂಪಿಕ್ ಅಸೋಸಿಯೇಷನ್ ಹೆಸರು ಇಲ್ಲದಿರುವ ಕಾರಣ ಅದರ ಅಂಗ ಸಂಸ್ಥೆಯಾದ ಕರ್ನಾಟಕ ಒಲಂಪಿಕ್ ಸಂಸ್ಥೆಯ ಮಾನ್ಯತೆ ಕುರಿತು ರಾಜ್ಯದ ವಿವಿಧ ಕ್ರೀಡಾ ಸಂಸ್ಥೆಗಳು ಆಕ್ಷೇಪಣೆ ಸಲ್ಲಿಸಿರುವುದರಿಂದ ಇಂತಹ ಪರಿಸ್ಥಿತಿಯಲ್ಲಿ ಕ್ರೀಡೆಯ ಹಿತದೃಷ್ಟಿಯಿಂದ ಕ್ರೀಡಾ ಪಟುಗಳನ್ನು ಕಳುಹಿಸಬೇಕಾದ ಅನಿವಾರ್ಯ ಸನ್ನಿವೇಶ ಉಂಟಾಗಿದ್ದು, ಈ ಉದ್ದೇಶಕ್ಕಾಗಿ ಅಗತ್ಯವಾದ ₹ 24,31,000/-ಗಳ ಪೈಕಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಈಗಾಗಲೇ ಬಿಡುಗಡೆ ಮಾಡಲಾದ ರೂ.12,17,250/-ಅನ್ನು ಹೊರತುಪಡಿಸಿ ಮತ್ತೆ ₹ 12,13,750/-ಗಳ ಹೆಚ್ಚುವರಿ ಅನುದಾನವನ್ನಾಗಿ ಮಂಜೂರು ಮಾಡುವಂತೆ ಕೋರಿದ್ದಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಯುಸೇಇ 29 ಯುಸೇಕ್ರೀ 2011, ಬೆಂಗಳೂರು, ದಿನಾಂಕ : 8-2-2011.

ಜಾರ್ಖಂಡ್ ರಾಜ್ಯದ ರಾಜಧಾನಿ ರಾಂಚಿಯಲ್ಲಿ 12-2-2011 ರಿಂದ 26-2-2011 ರವರೆಗೆ ಜರುಗುವ 34ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುವ ಸಲುವಾಗಿ 600 ಕ್ರೀಡಾ ಪಟುಗಳು/ಅಧಿಕಾರಿ/ತರಬೇತುದಾರರ ತಂಡವನ್ನು ನಿಯೋಜಿಸಲು ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಅವರಿಗೆ ಈ ಮೂಲಕ ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಉದ್ದೇಶಕ್ಕಾಗಿ ₹ 24,31,000/- ಗಳನ್ನು ಈ ಕೆಳಕಂಡ ಬಾಬ್ತುಗಳಿಗಾಗಿ ವೆಚ್ಚ ಮಾಡಲು ಸಹ ಸರ್ಕಾರದ ಮಂಜೂರಾತಿ ನೀಡಲಾಗಿದೆ.

1.	ರೈಲ್ವೇ ದರ ಬೆಂಗಳೂರಿನಿಂದ ರಾಂಚಿ ಹಾಗೂ ರಾಂಚಿಯಿಂದ ಬೆಂಗಳೂರಿಗೆ 600 ಸಂಖ್ಯೆ ಕ್ರೀಡಾಪಟುಗಳು ಹಾಗೂ ಅಧಿಕಾರಿಗಳು ಸೇರಿದಂತೆ ತಲಾ ₹ 700 (600 X ₹ 700)	₹ 4,20,000-00
2.	2ನೇ ಎ.ಸಿ. 5 ಸಂಖ್ಯೆ ಅಧಿಕಾರಿಗಳು X ತಲಾ ₹ 3,000	₹ 15,000-00
3.	ದಿನಭತ್ಯೆ 600 ಸಂಖ್ಯೆ X ₹ 125 X 6 ದಿನಗಳು	₹ 4,50,000-00
4.	ಕ್ರೀಡಾಪಟುಗಳಿಗೆ ಟ್ರ್ಯಾಕ್ ಸೂಟ್ 515 ಸಂಖ್ಯೆ X ₹ 600	₹ 3,09,000-00
5.	ಕ್ರೀಡಾಪಟುಗಳಿಗೆ ಕ್ರೀಡಾ ಸಲಕರಣೆ 515 ಸಂಖ್ಯೆ X ₹ 1,500	₹ 7,72,500-00
6.	ಅಧಿಕಾರಿಗಳಿಗೆ ಬ್ಲೇಸರ್, ಪ್ಯಾಂಟ್ ಮತ್ತು ಶೂ 85 ಸಂಖ್ಯೆ X ₹ 3,500	₹ 2,97,500-00
7.	ಕ್ರೀಡಾಪಟುಗಳಿಗೆ ವಿಮೆ	₹ 95,000-00
8.	ಕ್ರೀಡಾಪಟುಗಳಿಗೆ ವೈದ್ಯಕೀಯ ವೆಚ್ಚ	₹ 60,000-00
9.	ಸ್ಥಳೀಯ ಸಾರಿಗೆ ವೆಚ್ಚ	₹ 12,000-00
	ಒಟ್ಟು	₹ 24,31,000-00

ಮೇಲ್ಕಂಡ ಉದ್ದೇಶಕ್ಕಾಗಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರು ಬಿಡುಗಡೆ ಮಾಡಿರುವ ಅನುದಾನ ₹ 12,17,250/-ಗಳನ್ನು ಹೊರತುಪಡಿಸಿ ₹ 12,13,750/- ಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ವೆಚ್ಚವನ್ನು 2010-11 ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ-2204-00-104-0-29 ಸಹಾಯಾನುದಾನ (101) ಯೋಜನೆ ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ : 16-5-2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ/ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಯುವಜನ ಸೇವಾ ಇಲಾಖೆ.

ಪಿ. ಆರ್. 502

INFRASTRUCTURE DEVELOPMENT SECRETARIAT

Sub: Release of State Share towards Bidar Gulbarga New Railway Line Project.

Read :
1. G.O. No. IDD 12 NSW 2004, dated 5-9-2007.
2. G.O. No. IDD 12 NSW 2004, dated 28-9-2007.
3. G.O. No. IDD 12 NSW 2004, dated 21-1-2008.
4. G.O. No. IDD 12 NSW 2008, dated 13-5-2008.
5. G.O. No. IDD 12 NSW 2008, dated 26-6-2009.
6. G.O. No. IDD 13 NSW 2008, dated 21-8-2010.
7. G.O. No. IDD 13 NSW 2008, dated 12-11-2010.
8. Letter No. W.CN/338/C/90. Vol.VI dated 9-12-2010 from the Chief Engineer/Constn-1, South Central Railway. Secunderabad.

PREAMBLE :

In The Government Order read at Sl. No. (1) above, the State Government has accorded sanction for taking up Bidar-Gulbarga new railway project on 50:50 cost sharing basis between the Ministry of Railways and Government of Karnataka and for releasing 50% of the cost required for completion of the project within a period of 3 years.

2. In the G.O. read at Sl. No. (2) to (7) above the State Government has released so far an amount of Rs. 115.00 crore towards the share of the State Government for Bidar-Gulbarga New railway project.

3. The South Central Railway vide their letter read at Sl. No. (8) above, have stated that an amount of 20.00 crore is very much essential to finalise the above railway line. South Central Railway also provide 20.00 crores towards construction of new line is targeted during 2010-11 and have requested to take up these works at a I phase by March 2011 (Kanapura-Humnabad phase-I, 38kms.,) it is necessary that Government of Karnataka deposit at least Rs. 20.00 crore in the current year to meet the current liabilities and to call for additional tenders.

4. The request has been examined in detail and hence this order.

GOVERNMENT ORDER NO. IDD 13 NSW 2008, BANGALORE, DATED : 9-2-2011.

After careful examination of the request of railways, Government of Karnataka is pleased to release an amount of ₹ 10.00 crores (Rupees Ten crores only) towards the share of the State Government for the Bidar-Gulbarga new railways project.

2. The expenditure shall be met under the Head of Account **5465-01-190-3-05-133-Special Development Plan** ₹ 40.00 crores during 2010-11.

3. The Financial Advisor and Chief Accounts Officer, Construction, South Central Railway, Secunderabad is authorized to draw the amount on a payee's receipt duly countersigned by the Under Secretary to Govt., IDD.

4. This order is issued with the concurrence of Finance Department vide G.O. Note. No. FD 88 Exp-1/2011 dated 25-1-2011.

By Order and in the name of the Governor of Karnataka

C.A. Baburavindranath Patel

Under Secretary to Government

P.R. No. 503 Infrastructure Development Department

INFRASTRUCTURE DEVELOPMENT SECRETARIAT

Sub: Release of GoK's Share towards Shimoga-Talaguppa gauge conversion project-Reg.

Read :
1. G.O. No. IDD 52 NSW 2007, dated 24-7-2007.
2. G.O. No. IDD 52 NSW 2007, dated 19-9-2007.
3. G.O. No. IDD 52 NSW 2007, dated 26-12-2007.
4. G.O. No. IDD 52 NSW 2007, dated 19-8-2009.
5. G.O. No. IDD 52 NSW 2007, dated 4-1-2010.
6. G.O. No. IDD 52 NSW 2007, dated 19-3-2010.
7. G.O. No. IDD 52 NSW 2007, dated 24-7-2010.
8. Letter No. W.63/CN/BNC/MR/B/GL. dated 13-12-2010 of Chief Engineer (Con.,) SWR, Bangalore.

PREAMBLE :

In The Government Order referred to at Sl. No. (1) to (7) above, Government of Karnataka has released an amount of Rs. 101.02 crore towards cost sharing for Shimoga-Talaguppa gauge conversion project with the condition of having an MoU with railways for sharing this project on 50:50 cost sharing basis and getting matching share from MoR.

2. The Chief Engineer, South Western Railways, Bangalore in his letter read at Sl. No. (8) above, has requested to Government of Karnataka as the project is targeted for commissioning in the current Financial year the share of Government of Karnataka comes to Rs. 5.00 crores as per the revised cost of Rs. 224.89 crore.

3. The proposal of Railways has been examined and it has been decided to release an amount of Rs. 5.00 crores out of the Budget Provision of Rs. 272.50 crores provided under the Head of Account "5465-01-190-3-05-211-new cost sharing project investment" towards cost sharing for new railway projects during 2010-11.

4. Hence this order.

GOVERNMENT ORDER NO. IDD 52 NSW 2007, BANGALORE, DATED : 9-2-2011.

After careful examination of the request of railways, Government is pleased to release an amount of ₹ 5.00 crores (Rupees Five crores only) towards Shimoga-Talaguppa gauge conversion project being the part of the balance 50:50 share of Government of Karnataka.

2. The expenditure shall be met under the Head of Account **5465-01-190-3-05-211-** new cost sharing project investment" out of the budget provision Rs. 272.50 crores towards cost sharing for new railway projects during 2010-11.

3. Railways to furnish the approval obtained from the Railway Board for the revised cost along with the utilization certificate for the amount so far released.

4. The Financial Advisor and Chief Accounts Officer, Construction, South Western Railway Bangalore is authorized to draw the amount on a payee's receipt duly countersigned by the Under Secretary to Govt., IDD.

5. This order is issued in accordance with the concurrence of Finance Department given vide U.O. Note. FD 81 Exp-1/2011 dated 25-1-2011.

By Order and in the name of the Governor of Karnataka

C.A. Baburavindranath Patel

Under Secretary to Government

Infrastructure Development Department.

P.R. No. 504

INFRASTRUCTURE DEVELOPMENT SECRETARIAT

Sub: Release of funds towards cost sharing Railway project-Munirabad-Mehaboobnagar new broad gauge railway line project.

Read :
1. G.O. No. IDD 13 NSW 2003, dated 11-9-2007.
2. G.O. No. IDD 1 NSW 2008, dated 7/11-3-2008.
3. G.O. No. IDD 1 NSW 2008, dated 23-8-2010.
4. Letter No. W.63/CN/BNC/MR/B/GL. dated 31-12-2010 of Chief Engineer (Con.,) SWR, Bangalore.

PREAMBLE :

In the Government Orders referred to at Sl. No. (1) to (3) above, an amount of Rs. 30.00 crore was to far released towards cost sharing for Munirabad-Mehaboobnagar New railway line project.

2. The Chief Engineer, South Western Railway, Bangalore in his letter read at Sl. No. (4) above, has requested that an amount of Rs. 10.00 crores may be released immediately for Munirabad (Ginigera)-Raichur new railway line project.

3. The proposal of Railways has been examined and it has been decided to release an amount of Rs. 10.00 crores out of the Budget of Rs. 4,000.00 lakhs provided under the Head of Account **"5465-01-190-3-05-133-Special Development Plan"** during 2010-11.

4. Hence this order.

GOVERNMENT ORDER NO. IDD 01 NSW 2008, BANGALORE, DATED : 9-2-2011.

After careful examination of the request of Railways, Government is pleased to release ₹ 10.00 crores (Rupees Ten crores only) towards the share of the State Government for the Munirabad-Mehaboobnagar new railway line project.

2. The expenditure shall be met under the Head of Account **5465-01-190-3-05-133-** Special Development Plan" during 2010-11, out of the budget provision Rs. 4,000.00 lakhs.

3. The Financial Advisor and Chief Accounts Officer, Construction, South Western Railway Bangalore is authorized to draw the amount on a payee's receipt duly countersigned by the Under Secretary to Govt., IDD.

4. This order is issued with the concurrence of Finance Department vide U.O. Note. FD 84 Exp-1/2011 dated 25-1-2011.

By Order and in the name of the Governor of Karnataka

C.A. Baburavindranath Patel

Under Secretary to Government

Infrastructure Development Department.

P.R. No. 505

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ|| ಎನ್. ಬಾಲಕೃಷ್ಣ, ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಮಾಲೂರು, ಕೋಲಾರ ಜಿಲ್ಲೆ ಇವರು ಅನಧಿಕೃತ ಗೈರುಹಾಜರಾಗಿದ್ದು, ಸೇವೆಯಿಂದ ವಿಮೋಚನೆಗೊಳಿಸುವ ಕುರಿತು.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ : ಡಿಪಿಜಿ/ಬೆಂವಿ–II/ಕೋ/72/2009–10, ದಿನಾಂಕ : 18–1–2011.

ಪ್ರಸ್ತಾವನೆ :

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಡಾ|| ಎನ್. ಬಾಲಕೃಷ್ಣ, ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಮಾಲೂರು, ಕೋಲಾರ ಜಿಲ್ಲೆ ಇವರು ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ/739/ಹೆಚ್‌ಎಸ್‌ಹೆಚ್/2008 ದಿನಾಂಕ : 10–2–2009 ರ ಪ್ರಕಾರ ಸರ್ಕಾರಿ ಸೇವೆಗೆ ನೇಮಕಗೊಂಡಿದ್ದು, ದಿನಾಂಕ : 4–3–2009 ರಂದು ಹುದ್ದೆಗೆ ಹಾಜರಾಗಿರುತ್ತಾರೆ. ತದನಂತರ ದಿನಾಂಕ : 1–8–2009 ರಿಂದ ಸೇವೆಗೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಸದರಿ ವೈದ್ಯರು ಖಾಯಂಪೂರ್ವ ಸೇವಾವಧಿಯಲ್ಲಿ ಅನಧಿಕೃತ ಗೈರುಹಾಜರಾಗಿರುವುದರಿಂದ ಪ್ರೊಬೇಷನರಿ ನಿಯಮಗಳ ಪ್ರಕಾರ ಸೇವೆಯಿಂದ ವಿಮೋಚನೆಗೊಳಿಸುವಂತೆ ಕೋರಿರುತ್ತಾರೆ. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 43 ಹೆಚ್‌ಎಸ್‌ಹೆಚ್ 2011, ಬೆಂಗಳೂರು, ದಿನಾಂಕ 9–2–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ|| ಎನ್. ಬಾಲಕೃಷ್ಣ, ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಮಾಲೂರು, ಕೋಲಾರ ಜಿಲ್ಲೆ ಇವರು ಖಾಯಂಪೂರ್ವ ಸೇವಾವಧಿಯಲ್ಲಿ ದಿನಾಂಕ : 1–8–2009 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರಿಗೆ ಇಲಾಖೆಯ ವೈದ್ಯಾಧಿಕಾರಿ ಹುದ್ದೆಯಲ್ಲಿ ಮುಂದುವರಿಯಲು ಇಚ್ಛೆ ಇಲ್ಲವೆಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6 ರಡಿಯಲ್ಲಿ ಸದರಿಯವರನ್ನು ದಿನಾಂಕ : 1–8–2009 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು–1)

ಪಿ. ಆರ್. 506

ವಸತಿ ಸಚಿವಾಲಯ

ವಿಷಯ : ಬಳ್ಳಾರಿ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ. ವಇ/42/ಹೆಚ್‌ಎಎಂ/1999, ದಿನಾಂಕ : 10–5–2000.

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ಬಳ್ಳಾರಿ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 69 ಹೆಚ್‌ಎಎಸ್ 2010 (ಪಿ1), ಬೆಂಗಳೂರು, ದಿನಾಂಕ : 11ನೇ ಫೆಬ್ರವರಿ 2011.

ಬಳ್ಳಾರಿ ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರಿಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1.	ಶ್ರೀ ಚಂದ್ರ ತಂದೆ ಲೇಟ್ ಕೆ. ಸಿದ್ದಪ್ಪ, ರಾಮಾಂಜಿನೇಯ ನಗರ, ಗೊಲ್ಲರಹಟ್ಟಿ, ಬಳ್ಳಾರಿ	ಹಿಂದುಳಿದ ವರ್ಗ
2.	ಶ್ರೀ ಮಹಮ್ಮದ್ ಸೈಫುಲ್ ತಂದೆ ಮಹಮ್ಮದ್ ಖಾಜಾ ಹುಸೇನ್, 9ನೇ ಕ್ರಾಸ್, ಕಪ್ಪಗಲ್ ರೋಡ್, ಬಳ್ಳಾರಿ	ಅಲ್ಪಸಂಖ್ಯಾತರು
3.	ಶ್ರೀ ನೇಪಾಕ್ಷಪ್ಪ ತಂದೆ ಸಿದ್ದಲಿಂಗಪ್ಪ, ಶಾಸ್ತ್ರಿ ನಗರ, ಬಳ್ಳಾರಿ	ಸಾಮಾನ್ಯ
4.	ಶ್ರೀಮತಿ ಜ್ಯೋತಮ್ಮ ಗಂಡ ರಾಮಕೃಷ್ಣ, ಶ್ರೀರಾಂಪುರಂ ಕಾಲೋನಿ, ಬಳ್ಳಾರಿ	ಪರಿಶಿಷ್ಟ ಜಾತಿ (ಮಹಿಳೆ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಆರ್. ವಲ್ಲೂರ
ಪೀಠಾಧಿಕಾರಿ–2,
ವಸತಿ ಇಲಾಖೆ.

ಪಿ. ಆರ್. 507

ಕಂದಾಯ ಸಚಿವಾಲಯ

ವಿಷಯ : ಶ್ರೀ ಜೆ. ನಂಜುಂಡೇಶ್ವರ್, ಹಿಂದಿನ ಆಹಾರ ಶಿರಸ್ತೇದಾರ್, ಚನ್ನಗಿರಿ ತಾಲ್ಲೂಕು ಮತ್ತು ಹಿಂದಿನ ತಹಶೀಲ್ದಾರ್, ಗುಬ್ಬಿ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಇವರ ವಜಾಗೊಂಡಿರುವ ದಿನಾಂಕದಿಂದ ಸೇವೆಗೆ ಪುನರ್‌ಸ್ಥಾಪಿಸಿದ ದಿನಾಂಕದವರೆಗಿನ ಸೇವಾ ಸೌಲಭ್ಯ ನೀಡುವ ಕುರಿತು.

ಓದಲಾಗಿದೆ :

1. ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ.: ಎಲ್‌ಒಕೆ/ಐಎಸ್‌ವಿ(ಜೆ)ಬಿ-25/ಸಿಆರ್-3/93/ಡಿವಿಜಿ, ದಿನಾಂಕ : 21-5-2005.
2. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂ. ಪಿಎಸ್‌ಸಿ 91 ಸಿಎಸ್‌ಎಸ್ 05, ದಿನಾಂಕ : 5-9-2005.
3. ಸರ್ಕಾರದ ಆದೇಶ ಸಂ. : ಆರ್‌ಡಿ 20 ಎಡಿಇ 2005, ದಿನಾಂಕ : 22-9-2006.
4. ಮಾನ್ಯ ಉಚ್ಚನ್ಯಾಯಾಲಯದ ಕ್ರಿಮಿನಲ್ ಅಪೀಲು ಸಂ. 570/2005-ಅಂತಿಮ ಆದೇಶದ ದಿನಾಂಕ : 24-7-2009.
5. ಶ್ರೀ ಜೆ. ನಂಜುಂಡೇಶ್ವರ್, ವಜಾಗೊಂಡಿರುವ ತಹಶೀಲ್ದಾರ್ ಇವರ ಮನವಿ ದಿನಾಂಕ : 21-8-2009.
6. ಸರ್ಕಾರದ ಪತ್ರ ಸಂ. : ಆರ್‌ಡಿ 575 ಎಎಸ್‌ಡಿ 2009, ದಿನಾಂಕ : 21-11-2009.
7. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂ.:ಲೋಕ್/ಐಎನ್‌ವಿ(ಜೆ)ಜಿ-25/ಸಿಆರ್-3/1993 ಶಿವಮೊಗ್ಗ ದಿನಾಂಕ : 2-2-2010.
8. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 575 ಎಎಸ್‌ಡಿ 2009, ದಿನಾಂಕ : 21-7-2010.

ಪ್ರಸ್ತಾವನೆ :

ಶ್ರೀ ನಂಜುಂಡೇಶ್ವರ್, ಹಿಂದಿನ ಆಹಾರ ಶಿರಸ್ತೇದಾರ್, ಚನ್ನಗಿರಿ ತಾಲ್ಲೂಕು/ ತಹಶೀಲ್ದಾರ್ ಗುಂಪು-ಬಿ (ನಿಯಮ-32) ಹಾಗೂ ಶ್ರೀ ಎಂ.ಆರ್. ಭೀಮಪ್ಪ, ಹಿಂದಿನ ಆಹಾರ ನಿರೀಕ್ಷಕರು, ಇವರುಗಳು ವೀರಭದ್ರಸ್ವಾಮಿ, ಸೀಮೆಎಣ್ಣೆ ವಿತರಕರಿಗೆ ಸೀಮೆಎಣ್ಣೆ ಹಂಚಿಕೆ ನೀಡುವಾಗ ಒತ್ತಾಯಪೂರ್ವಕವಾಗಿ ರೂ. 250-00 ಗಳ ಅಕ್ರಮ ಸಂಭಾವನೆಯನ್ನು ದಿನಾಂಕ : 29-6-1994 ರಂದು ಪಡೆದಿದ್ದರೆಂಬ ಆರೋಪದ ಹಿನ್ನೆಲೆಯಲ್ಲಿ ಇಲಾಖಾ ವಿಚಾರಣೆ ನಡೆಸುವಂತೆ ಉಪ ಲೋಕಾಯುಕ್ತರು, ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರ ಮೇರೆಗೆ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು ದಿನಾಂಕ : 24-2-1997ರ ಆದೇಶ ಸಂ. : ಎಫ್‌ಸಿಎಸ್ 199 ಇಎಫ್‌ಟಿ 96 ರಲ್ಲಿ ಕರ್ನಾಟಕ ಗೌರವಾನ್ವಿತ ಲೋಕಾಯುಕ್ತರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 14ಎ(2) (ಬಿ) ರನ್ವಯ ಇಲಾಖಾ ವಿಚಾರಣೆ ನಡೆಸುವಂತೆ ವಹಿಸಿತ್ತು. ಮಾನ್ಯ ಕರ್ನಾಟಕ ಉಪ ಲೋಕಾಯುಕ್ತರವರು ಉಪ ನಿಬಂಧಕರು, ವಿಚಾರಣೆ-3 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದ್ದ ಹಿನ್ನೆಲೆಯಲ್ಲಿ, ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆ ನಡೆಸಿ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ತಮ್ಮ ವಿಚಾರಣಾ ವರದಿಯಲ್ಲಿ ತಿಳಿಸಿದ್ದರ ಹಿನ್ನೆಲೆಯಲ್ಲಿ, ಅವರುಗಳನ್ನು ಆಪಾದನೆಗಳಿಂದ ದೋಷಮುಕ್ತರನ್ನಾಗಿ ಮಾಡಿ ಸರ್ಕಾರದ ಆದೇಶ ಸಂ. : ಆನಾಸ 199 ಇಎಫ್‌ಟಿ 96, ಬೆಂಗಳೂರು, ದಿನಾಂಕ 17-8-2001 ರಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಆದೇಶಿಸಿತ್ತು.

ಶ್ರೀ ಜೆ. ನಂಜುಂಡೇಶ್ವರ್, ಹಿಂದಿನ ಆಹಾರ ಶಿರಸ್ತೇದಾರ್, ಚನ್ನಗಿರಿ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್ ಇವರಿಗೆ ಲಂಚ ಸ್ವೀಕಾರ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ದಾವಣಗೆರೆ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯವು 5 ವರ್ಷಗಳ ಕಾರಾಗೃಹ ವಾಸ ಹಾಗೂ 25,000/- ರೂಗಳ ದಂಡವನ್ನು ವಿಧಿಸಿ ದಿನಾಂಕ : 28-3-2005 ರಂದು ತೀರ್ಪನ್ನು ನೀಡಿರುತ್ತದೆ.

ಸದರಿ ಆದೇಶದ ವಿರುದ್ಧ ದಿನಾಂಕ : 4-4-2005 ರಂದು ಕರ್ನಾಟಕ ಉಚ್ಚ ನ್ಯಾಯಾಲಯವು ಸದರಿ ಆರೋಪಿತ ಅಧಿಕಾರಿಯು ಸಲ್ಲಿಸಿದ್ದ ಕ್ರಿಮಿನಲ್ ಅಪೀಲ್ ಸಂ. : 570/2005ರಲ್ಲಿ ಮೇಲೆ ತಿಳಿಸಿದ ದಿನಾಂಕ : 28-3-2005ರ ದಾವಣಗೆರೆ ಜಿಲ್ಲಾ ನ್ಯಾಯಾಧೀಶರ ಆದೇಶವನ್ನು ಅಮಾನತ್ತಿನಲ್ಲಿರಿಸಲಾಗಿತ್ತು.

ಸಿಆಸು ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂ. : ಸಿಆಸುಇ 9 ಸೇಇವಿ 95 ದಿನಾಂಕ : 26-6-96 ಹಾಗೂ ಸಿಆಸುಇ 08 ಸೇಇವಿ 2000, ದಿನಾಂಕ : 29-8-2000ರ ಸುತ್ತೋಲೆಗಳಲ್ಲಿ ಇಂತಹ ಪ್ರಕರಣಗಳಲ್ಲಿ ಸರ್ಕಾರಿ ನೌಕರರ ವಿರುದ್ಧ ಯಾವ ರೀತಿ ಕ್ರಮ ಜರುಗಿಸಬಹುದು ಎಂಬ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದೆ. ದಿನಾಂಕ : 26-6-96ರ ಸುತ್ತೋಲೆಯಲ್ಲಿ ಕಂಡಿಕೆ 3 ರಲ್ಲಿ ಈ ಕೆಳಗಿನಂತೆ ಸ್ಪಷ್ಟಪಡಿಸಿದೆ.

ಸಂವಿಧಾನದ ಅನುಚ್ಛೇದ 311(2) ರಡಿಯಲ್ಲಿ ಎರಡನೇ ಪರಂತುಕದ ಖಂಡ (Clause) (ಎ) ಯು ಕ್ರಿಮಿನಲ್ ಆರೋಪದ ಮೇಲೆ ದೋಷಸಿದ್ಧಿಯಾಗಿರುವುದನ್ನು ನಿಲಂಬನೆಯಲ್ಲಿಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರನು ಕ್ರಿಮಿನಲ್ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾನೆ ಅಥವಾ ಇತರ ವ್ಯವಹರಣೆ ಹೂಡಿದ್ದಾನೆ ; ಅಥವಾ ಮೇಲಿನ ನ್ಯಾಯಾಲಯವು ಕ್ರಿಮಿನಲ್ ನ್ಯಾಯಾಲಯದ ದಂಡನೆ ಆದೇಶವನ್ನು ನಿಲಂಬನೆಯಲ್ಲಿಟ್ಟಿದೆ, ಅಥವಾ ಆತನ ಮೇಲ್ಮನವಿ ಇತ್ಯರ್ಥದಲ್ಲಿರುವಾಗ ಜಾಮೀನಿನ ಮೇಲೆ ಬಿಡುಗಡೆ ಪಡೆದಿದ್ದಾನೆ ಎಂಬ ಕಾರಣಕ್ಕಾಗಿ **ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮ 1957ರ ನಿಯಮ 14 (i) ರನುಸಾರ ಕ್ರಮ ಜರುಗಿಸುವುದನ್ನು ತಡೆಹಿಡಿಯಬೇಕಾದ ಅಗತ್ಯವಿಲ್ಲ**. ಇಂತಹ ಎಲ್ಲಾ ಸಂದರ್ಭಗಳಲ್ಲಿ ಸೂಕ್ತವಾದ ಕ್ರಮ ಎಂದರೆ, ಒಮ್ಮೆ ಒಬ್ಬ ಸರ್ಕಾರಿ ನೌಕರನು ಕ್ರಿಮಿನಲ್ ನ್ಯಾಯಾಲಯದ ದಂಡನೆಗೆ ಗುರಿಯಾದರೆ, ಆತನು ಸಲ್ಲಿಸಬಹುದಾದ ಮೇಲ್ಮನವಿ ಇತ್ಯರ್ಥವಾಗುವವರೆಗೂ ಕಾಯದೆ ಸಂವಿಧಾನದ ಅನುಚ್ಛೇದ 311(2) ರಡಿಯಲ್ಲಿರುವ ಎರಡನೇ ಪರಂತುಕದ ಸಮರ್ಥನೆ ಪಡೆದಿರುವ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 14 (i) ರ ಅನುಸಾರ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು. ಇಲ್ಲವಾದಲ್ಲಿ, ಕ್ರಿಮಿನಲ್ ನ್ಯಾಯಾಲಯದಲ್ಲಿ ತೀವ್ರ ಆರೋಪಕ್ಕಾಗಿ ದೋಷಸಿದ್ಧಿಯಾಗಿ ದಂಡನೆಗೆ ಗುರಿಯಾದಂತಹ ವ್ಯಕ್ತಿಯು ಸೇವೆಯಲ್ಲಿ ಮುಂದುವರಿಯಲು ಅವಕಾಶ ಕಲ್ಪಿಸಿದಂತಾಗುತ್ತದೆ. ಆದ್ದರಿಂದ, ಮೇಲ್ಮನವಿ ಆದೇಶವು ಇತ್ಯರ್ಥವಾಗುವುದನ್ನು ಕಾಯುವುದು ಸೂಕ್ತವಲ್ಲ. ಆದರೆ, ಒಂದು ವೇಳೆ ಆಪಾದಿತ ಸರ್ಕಾರಿ ನೌಕರನು ಮೇಲಿನ ನ್ಯಾಯಾಲಯದಲ್ಲಿ ಖುಲಾಸೆ (Acquit) ಯಾದರೆ, ಶಿಸ್ತು ಪ್ರಾಧಿಕಾರಿಯು ಆದೇಶವನ್ನು ಪರಿಷ್ಕರಿಸಬಹುದು. ಒಂದು ವೇಳೆ ಸರ್ಕಾರಿ ನೌಕರರನ್ನು ಪುನಃ ಸೇವೆಗೆ ತೆಗೆದುಕೊಂಡಲ್ಲಿ, ಆತನು ಸೇವೆಯಲ್ಲಿ ಮುಂದುವರಿದಿದ್ದರೆ ಅರ್ಹನಾಗಿರುತ್ತಿದ್ದಂಥ ಎಲ್ಲ ಸೌಲಭ್ಯಗಳಿಗೂ ಹಕ್ಕುಳ್ಳವನಾಗುತ್ತಾನೆ.

ಮೇಲ್ಕಂಡ ಸಂದರ್ಭ ಹಾಗೂ ವಿಶೇಷ ನ್ಯಾಯಾಲಯವು ಆಪಾದಿತ ಅಧಿಕಾರಿಗೆ ವಿಧಿಸಿರುವ ಸಜೆ ಮತ್ತು ದಂಡನೆಯ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 14(i)ರ ಅನುಸಾರ ನಿಯಮ 8 (viii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜೆ. ನಂಜುಂಡೇಶ್ವರ್, ಪ್ರಸ್ತುತ ತಹಶೀಲ್ದಾರ್ ಇವರಿಗೆ ಸೇವೆಯಿಂದ ವಜಾ ದಂಡನೆ ವಿಧಿಸುವ ಬಗ್ಗೆ ಆಡಳಿತ ಇಲಾಖೆಯು ನಿರ್ಧರಿಸಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿ ಕೋರಲಾಗಿತ್ತು. ಮೇಲೆ ಕ್ರ.ಸಂ. (2) ರಲ್ಲಿ ಓದಲಾದ 5–9–2005 ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಸಹಮತಿ ನೀಡಿರುತ್ತದೆ.

ಶ್ರೀ ಎಂ.ಆರ್. ಭೀಮಪ್ಪ ಮತ್ತು ಶ್ರೀ ಜೆ. ನಂಜುಂಡೇಶ್ವರ್, ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂ. : 6879 ಮತ್ತು 6880/2005 ನ್ನು ಸಲ್ಲಿಸಿ, ಶ್ರೀ ಜೆ. ನಂಜುಂಡೇಶ್ವರ್‌ರವರನ್ನು ಕೂಡಲೇ ವಜಾ ಮಾಡಲು ಶಿಫಾರಸ್ಸು ಮಾಡಿರುವ ಕರ್ನಾಟಕ ಲೋಕಾಯುಕ್ತದ ಪತ್ರವನ್ನು ತಳ್ಳಿ ಹಾಕಲು (quash) ಕೋರಿದ್ದು, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ : 31–8–05 ರ ತನ್ನ Interim Order ಸಲ್ಲಿಸಿ ಶ್ರೀ ಜೆ. ನಂಜುಂಡೇಶ್ವರ್ ರವರನ್ನು ವಜಾ ಮಾಡಲು ಶಿಫಾರಸ್ಸು ಮಾಡಿರುವ ಪತ್ರ ಸಂ. : LOK/INV (chi) B-25/CR-3/43, DVC-4, ದಿನಾಂಕ : 21–5–2005 ಕ್ಕೆ 8 ವಾರಗಳವರೆಗೆ ತಡೆಯಾಜ್ಞೆ ನೀಡಿದ್ದು, ಕಾಲಕಾಲಕ್ಕೆ ಸದರಿ ತಡೆಯಾಜ್ಞೆಯನ್ನು ವಿಸ್ತರಿಸುತ್ತಾ ಬಂದಿದ್ದು, ಅಂತಿಮವಾಗಿ ದಿನಾಂಕ : 29–6–2006ರನ್ನು ತೀರ್ಪಿನಲ್ಲಿ ಈ ಕೆಳಕಂಡಂತೆ ಆದೇಶಿಸಿತ್ತು.

ORDER

"No representation.

Accordingly, applications are dismissed for non-prosecution".

ಶ್ರೀ ಎಂ.ಆರ್. ಭೀಮಪ್ಪ, ಆಹಾರ ನಿರೀಕ್ಷಕರವರ ಬಗ್ಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಪ್ರತ್ಯೇಕವಾಗಿ ಕ್ರಮ ಕೈಗೊಂಡಿರುತ್ತದೆ.

ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಜೆ. ನಂಜುಂಡೇಶ್ವರ್, ಹಿಂದಿನ ಆಹಾರ ಶಿರಸ್ತೇದಾರ್ ಹಾಲಿ ತಹಶೀಲ್ದಾರ್, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇವರನ್ನು ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿ, 1957 ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 14 (1)ರ ಅನುಸಾರ ನಿಯಮ 8 (viii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ಓದಲಾದ ಕ್ರ. ಸಂ. 3 **ದಿನಾಂಕ : 22–9–2006 ರ ಆದೇಶದಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿ, ಆದೇಶಿಸಲಾಗಿತ್ತು.**

ಸದರಿಯವರು ದಾವಣಗೆರೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಯಲ್ಲಿ ವಿಧಿಸಿರುವ ಶಿಕ್ಷೆಯ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮೇಲ್ಮನವಿ ಕ್ರಿಮಿನಲ್ ಅಪೀಲು ಸಂ : 570/2005, ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು ಮೇಲೆ ಓದಲಾದ ಕ್ರ.ಸಂ. (4) ರ ದಿನಾಂಕ : 24–7–2009 ರಂದು ಮಾಡಿರುವ ಅಂತಿಮ ಆದೇಶದಲ್ಲಿ ದಾವಣಗೆರೆ ಜಿಲ್ಲಾ ಸತ್ರ ನ್ಯಾಯಾಲಯವು ನೀಡಿರುವ ತೀರ್ಪನ್ನು ರದ್ದುಗೊಳಿಸಿ ಸದರಿಯವರನ್ನು ದೋಷಮುಕ್ತಗೊಳಿಸಿದೆ. ಆದೇಶದ ಉದ್ಧೃತ ಭಾಗವು ಈ ಕೆಳಗಿನಂತಿದೆ.

For the reasons aforesaid, the present appeal is allowed. The impugned judgement and order of conviction and sentence dated 28-3-2005 in Spl. Lok.C.No. 16/2000 passed by the learned District and Sessions Judge, Davangere, is hereby set aside. The appellants accused are hereby acquitted of the said offences. The bail bonds executed by both the appellants shall stand cancelled. If any fine amount has been paid by the accused, the same shall be refunded to them.

ಮೇಲೆ ಓದಲಾದ ಕ್ರ.ಸಂ. (5)ರ ದಿನಾಂಕ : 21–8–2009 ರ ಮನವಿಯಲ್ಲಿ ಶ್ರೀ ಜೆ. ನಂಜುಂಡೇಶ್ವರ್, ರವರು ಸದರಿ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ಲಗತ್ತಿಸಿ, ಅವರು ದೋಷ ಮುಕ್ತರಾಗಿರುವುದರಿಂದ, ಸೇವೆಗೆ ಪುನರ್ ನಿಯೋಜಿಸಲು ಕೋರಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವೆ ಎಂಬ ಬಗ್ಗೆ ಮೇಲೆ ಓದಲಾದ ಕ್ರ.ಸಂ. (6) ರ ದಿನಾಂಕ 21–11–2009ರ ಪತ್ರದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರನ್ನು ಕೋರಲಾಗಿತ್ತು. ಮೇಲೆ ಓದಲಾದ ಕ್ರ.ಸಂ. (7)ರ ದಿನಾಂಕ : 2–2–2010ರ ಪತ್ರದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಉಚ್ಚ ನ್ಯಾಯಾಲಯ ದಿನಾಂಕ : 24–7–2009 ರಂದು ನೀಡಿರುವ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಯೋಗ್ಯವಾಗಿಲ್ಲವೆಂದು ಸರ್ಕಾರವು ಆದೇಶ ಸಂ. ಹೆಚ್‌ಡಿ 8708/ಹೆಚ್‌ಸಿಪಿ–1/2009, ದಿನಾಂಕ : 2–1–2010ರಲ್ಲಿ ನಿರ್ಧರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಶ್ರೀ ಜೆ. ನಂಜುಂಡೇಶ್ವರ್, ತಹಶೀಲ್ದಾರ್ ಇವರ ವಿರುದ್ಧ ಹಣ ಸ್ವೀಕೃತ ಆಪಾದನೆಯನ್ನು ಸಾಬೀತು ಪಡಿಸಲಾಗಲಿಲ್ಲವೆಂಬ ಕಾರಣದ ಮೇಲೆ ಉಚ್ಚ ನ್ಯಾಯಾಲಯವು ಖುಲಾಸೆಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಮೇಲೆ ಓದಲಾದ ಕ್ರ.ಸಂ. 8 ರ ಸರ್ಕಾರದ ಆದೇಶ ಸಂ. : ಆರ್‌ಡಿ 575 ಎಎಸ್‌ಡಿ 2009, ದಿನಾಂಕ : 21–7–2010 ರಲ್ಲಿ ಸದರಿಯವರನ್ನು ವಜಾಗೊಳಿಸಿದ ಸರ್ಕಾರದ ಆದೇಶ ಸಂ. ಆರ್‌ಡಿ 20 ಎಡಿಇ 2005, ದಿನಾಂಕ : 22–9–2006ರ ಆದೇಶವನ್ನು ರದ್ದುಗೊಳಿಸಿ, **ಸೇವೆಗೆ ಪುನರ್ ಸ್ಥಾಪಿಸಿ ಆದೇಶ ಹೊರಡಿಸಲಾಗಿರುತ್ತದೆ.**

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಅನ್ವಯ ಶ್ರೀ ಜೆ. ನಂಜುಂಡೇಶ್ವರ್ ಇವರನ್ನು ಸೇವೆಗೆ ಪುನರ್ ಸ್ಥಾಪಿಸಲಾಗಿದೆ. ಶ್ರೀ ಜೆ. ನಂಜುಂಡೇಶ್ವರ್ ಇವರನ್ನು ಸೇವೆಗೆ ಪುನರ್ ಸ್ಥಾಪಿಸಿರುವುದರಿಂದ ಅವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸುವ ಬಗ್ಗೆ ಬಾಕಿ ಇರುವ ವೇತನ ಬಡ್ತಿಗಳನ್ನು ಪಾವತಿ ಮಾಡಬಹುದೇ ಎಂಬ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿ, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 307 ವೆಚ್ಚ–7/2010, ದಿನಾಂಕ : 26–8–2010ರಲ್ಲಿ ಈ ಪ್ರಕರಣವನ್ನು ದೋಷಮುಕ್ತಿಯು on merits of the case ಅಥವಾ on technical grounds ಎಂಬುದನ್ನು ಕಾನೂನು ಇಲಾಖೆಯಿಂದ ಖಚಿತಪಡಿಸಿಕೊಂಡು ದಿನಾಂಕ : 5–7–2002ರ ಸುತ್ತೋಲೆಯಲ್ಲಿನ ಸೂಚನೆಗಳನ್ವಯ ಪರಿಶೀಲಿಸಲು ತಿಳಿಸಿದ್ದು, ಅದರಂತೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿ, ಕಾನೂನು ಇಲಾಖೆಯ ಟಿಪ್ಪಣಿ ಸಂಖ್ಯೆ : ಲಾ 516/ಟಿ/ಅಭಿ/2010, ದಿನಾಂಕ : 13–12–2010 ರಲ್ಲಿ ಶ್ರೀ ಜೆ. ನಂಜುಂಡೇಶ್ವರ ಇವರನ್ನು ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ಬಿಡುಗಡೆಯ ತೀರ್ಪು ಗೌರವಾನ್ವಿತ ಬಿಡುಗಡೆ ಆಗಿರುವುದಿಲ್ಲವೆಂದು ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುತ್ತಾರೆ.

"ಆಡಳಿತ ಇಲಾಖೆಯ ಕಡತ ಪರಿಶೀಲನೆಯಿಂದ ಕಂಡುಬರುವ ಅಂಶವೇಂದರೆ, ಶ್ರೀ ಜೆ. ನಂಜುಂಡೇಶ್ವರ್, ಹಿಂದಿನ ಆಹಾರ ಶಿರಸ್ತೇದಾರ್, ಚನ್ನಗಿರಿ ತಾಲ್ಲೂಕು ಮತ್ತು ಇನ್ನೊಬ್ಬರು ಅಕ್ರಮ ಸಂಭಾವನೆಯನ್ನು ಪಡೆದಿದ್ದರೆಂಬ ಆರೋಪದ ಹಿನ್ನೆಲೆಯಲ್ಲಿ ಇಲಾಖಾ ವಿಚಾರಣೆ ನಡೆಸುವಂತೆ ಮಾನ್ಯ ಉಪ ಲೋಕಾಯುಕ್ತರು ಶಿಫಾರಸ್ಸು ಮಾಡಿದ್ದರ ಮೇರೆಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 14ಎ(2)(ಬಿ) ರನ್ವಯ ಇಲಾಖಾ ವಿಚಾರಣೆ ನಡೆಸಲಾಗಿದ್ದು, ಮಾನ್ಯ ಕರ್ನಾಟಕ ಉಪಲೋಕಾಯುಕ್ತರವರು, ಉಪ ನಿಬಂಧಕರು, ವಿಚಾರಣೆ–3 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ, ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದ್ದ ಹಿನ್ನೆಲೆಯಲ್ಲಿ, ಇಲಾಖಾ ವಿಚಾರಣೆ ನಡೆಸಿ ಆರೋಪ ಸಾಬೀತಾಗಿರುವುದಿಲ್ಲವೆಂದು ವಿಚಾರಣಾ ವರದಿ ನೀಡಿರುವುದು ಕಂಡುಬರುತ್ತದೆ. ಈ ಸಂಬಂಧ ನಡೆದ ಕ್ರಿಮಿನಲ್ ಪ್ರಕರಣದಲ್ಲಿ ದಾವಣಗೆರೆಯ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯವು ಸದರಿಯವರ ವಿರುದ್ಧ ಆರೋಪ ಸಾಬೀತಾಗಿದೆ ಎಂದು ಶಿಕ್ಷೆಯ ತೀರ್ಪು ನೀಡಿದ್ದು, ತೀರ್ಪಿನ ಪ್ರತಿ ಆಡಳಿತ ಇಲಾಖೆಯ ಕಡತದಲ್ಲಿ ಲಭ್ಯವಿದೆ. ಈ ಮಧ್ಯೆ ಕ್ರಿಮಿನಲ್ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಸದರಿಯವರನ್ನು ದಿನಾಂಕ : 22–9–2006 ರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿತ್ತು ಎಂದು ಕಂಡುಬರುತ್ತದೆ. ಕ್ರಿಮಿನಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಸದರಿಯವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ ಕ್ರಿಮಿನಲ್ ಅಪೀಲು ನಂ. 570/05 ರ ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ತೀರ್ಪು ನೀಡಿ ದಾವಣಗೆರೆಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ನೀಡಿರುವ ತೀರ್ಪನ್ನು ನೀಡಿ ದಾವಣಗೆರೆಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ನೀಡಿರುವ ತೀರ್ಪನ್ನು ರದ್ದುಗೊಳಿಸಿ ಸದರಿಯವರನ್ನು ದೋಷಮುಕ್ತಗೊಳಿಸಿರುತ್ತದೆ. ಸದರಿ ತೀರ್ಪಿನ ಉದ್ಧೃತ ಭಾಗವು ಈ ಕೆಳಗಿನಂತಿದೆ.

For the reasons aforesaid, the present appeal is allowed. The impugned judgement and order of conviction and sentence dated 28-3-2005 in special Lok.C.No. 16/2000 passed by the learned District and Sessions Judge, Davangere, is hereby set aside. The appellants accused are hereby acquitted of the said offences. The bail bonds executed by both the appellants shall stand cancelled. If any fine amount has been paid by the accused, the same shall be refunded to them."

ಆಡಳಿತ ಇಲಾಖೆಯು ಪ್ರಸ್ತುತ ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಶ್ರೀ ಜೆ. ನಂಜುಂಡೇಶ್ವರ, ಹಿಂದಿನ ತಹಶೀಲ್ದಾರ್, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇವರನ್ನು ವಜಾಗೊಳಿಸಿರುವ ಆದೇಶವನ್ನು ಹಿಂದಕ್ಕೆ ಪಡೆದು, ಇವರನ್ನು ಪುನಃ ಸರ್ಕಾರಿ ಸೇವೆಗೆ ಪುನರ್ ಸ್ಥಾಪಿಸಿ ಆದೇಶಿಸಿರುತ್ತದೆ.

ವಿಚಾರಣಾ ವರದಿಯಲ್ಲಿ ಒಬ್ಬ ಸರ್ಕಾರಿ ನೌಕರರನ್ನು ಇಲಾಖಾ ವಿಚಾರಣೆ ನಡೆಸಿ, ಆರೋಪಗಳು ಸಾಬೀತಾಗಿಲ್ಲವೆಂದು ವಿಚಾರಣಾ ವರದಿಯಲ್ಲಿ ತಿಳಿಸಿದ್ದರ ಹಿನ್ನೆಲೆಯಲ್ಲಿ ಹಾಗೂ ಆತನ ವಿರುದ್ಧ ಇದಕ್ಕೆ ಸಂಬಂಧಪಟ್ಟಂತೆ ಕ್ರಿಮಿನಲ್ ಪ್ರಕರಣದಲ್ಲಿ ಕ್ರಿಮಿನಲ್ ನ್ಯಾಯಾಲಯವು ಆಪಾದನೆ ಸಾಬೀತಾಗಿದೆ ಎಂದು ತೀರ್ಪು ನೀಡಿದ್ದರೂ, ನಂತರ ಕ್ರಿಮಿನಲ್ ಮೇಲ್ಮನವಿಯಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಸರ್ಕಾರಿ ನೌಕರರನ್ನು ದೋಷಮುಕ್ತಗೊಳಿಸಿದಂತಹ ಸಂದರ್ಭದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಂ. ಪಾಲ್. ಅಂತೋನಿ ವಿರುದ್ಧ ಭಾರತ್ ಗೋಲ್ಡ್‌ಮೈನ್ಸ್ ಲಿಮಿಟೆಡ್ ಮತ್ತು ಇತರರ ಪ್ರಕರಣ ಎಐಆರ್ 1999 ಎಸ್‌ಸಿ 1416 ರಲ್ಲಿ ನೀಡಿದ ತೀರ್ಪಿನ ಅನ್ವಯ ಆರೋಪಿತ ಸರ್ಕಾರಿ ನೌಕರನ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಮೇಲಿನ ಅವಧಿ ಎಂದು ಪರಿಗಣಿಸಿ ಅಂದಿನಿಂದ ಬಾಕಿ ಇರುವ ಎಲ್ಲಾ ವೇತನ ಹಾಗೂ ಭತ್ಯೆಗಳನ್ನು ಮಂಜೂರು ಮಾಡಬಹುದೇ? ಎಂದು ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಮೇಲೆ ಹೇಳಿದ ಪ್ರಕರಣದಲ್ಲಿ ನೀಡಿರುವ ತೀರ್ಪಿನ ತತ್ವಾಂಶಗಳನ್ನು ನೋಡಲಾಗಿ ಅದು ಕ್ರಿಮಿನಲ್ ಪ್ರಕರಣಗಳಲ್ಲಿ ಮಾಡಲಾದ ಗೌರವಾನ್ವಿತ ಬಿಡುಗಡೆ (Hon'ble Acquittal) ಗಳಿಗೆ ಮಾತ್ರ ಅನ್ವಯಿಸಬಹುದಾಗಿದೆ.

ಐಎಲ್‌ಆರ್ 2002 ಕರ್ನಾಟಕ 2535 (ಮೆಹಬೂಬ್ ಸಾಹೇಬ್ ವಿರುದ್ಧ ಉಪಲೋಕಾಯುಕ್ತ ಮತ್ತು ಇತರರು) ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಈ ಕೆಳಗಿನಂತೆ ಹೇಳಿರುತ್ತದೆ.

"Where the Criminal Court acquits an accused on a technical ground (for example on the ground of failure to obtain requisite sanction for prosecution or on the ground of limitation) or where the accused is acquitted for want of sufficient evidence or non examination of material witness or on account of material witness turning hostile or on account of conflict in evidence or where accused is acquitted by extending the benefit of doubt, on the ground that the prosecution has failed to establish its case beyond reasonable doubt then, such an acquittal is not an exoneration of the accused by an Hon'ble acquittal. In such cases, the management is at liberty to proceed with the enquiry or initiate an enquiry on the very same charges even after the acquittal."

ಮೇಲೆ ಹೇಳಲಾದ ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಹೇಳಿದಂತೆ ಗೌರವಾನ್ವಿತ ಬಿಡುಗಡೆ ಹೊಂದಿದಲ್ಲಿ ಮಾತ್ರ ಪಾಲ್ ಅಂತೋನಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹೇಳಿದಂತಹ ತತ್ವಾಂಶಗಳನ್ನು ಪಾಲಿಸಬೇಕಾಗಿರುತ್ತದೆ. ಇದೇ ತತ್ವಾಂಶಗಳನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಜಿ.ಎಂ. ಟಾಂಕ್ ವಿರುದ್ಧ ಗುಜರಾತ್ ರಾಜ್ಯ ಮತ್ತು ಇತರರು (2006(4)ಎಸ್‌ಎಸ್‌ಆರ್ 10) ರಲ್ಲಿ ಪುನರುಚ್ಚರಿಸಿದೆ. ಪ್ರಸ್ತುತ ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಆರೋಪಿತ ಸರ್ಕಾರಿ ನೌಕರನ ವಿರುದ್ಧ ಸಾಕ್ಷ್ಯಾಧಾರಗಳ ಕೊರತೆಯಿಂದ ಅಭಿಯೋಜನೆಯು, ಆತ ಲಂಚ ಪಡೆದ ಅಂಶವನ್ನು ಸಾಬೀತುಪಡಿಸಲು ವಿಫಲವಾಗಿದೆ ಎಂಬ ಕಾರಣಗಳಿಗಾಗಿ ಆರೋಪಗಳಿಂದ ಬಿಡುಗಡೆಗೊಳಿಸಿದ್ದು, ಅದನ್ನು ಗೌರವಾನ್ವಿತ ಬಿಡುಗಡೆ ಎಂದು ಹೇಳಲಾಗುವುದಿಲ್ಲ. ಆದುದರಿಂದ ಪಾಲ್ ಅಂತೋನಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹೇಳಿರುವ ತತ್ವಾಂಶಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ. ಸಿಆಸು ಇಲಾಖೆಯ ಸರ್ಕಾರಿ ಸುತ್ತೋಲೆ ಸಂಖ್ಯೆ : ಸಿಆಸುಇ 22/ಸೇಇವಿ 2001 ; ದಿನಾಂಕ : 5–7–2002ರ ಸುತ್ತೋಲೆಯಲ್ಲಿ ಈ ರೀತಿ ಹೇಳಲಾಗಿದೆ. "ಒಂದು ವೇಳೆ ಒಬ್ಬ ಆಪಾದಿತ ಸರ್ಕಾರಿ ನೌಕರನು ಮೇಲಿನ ನ್ಯಾಯಾಲಯದಲ್ಲಿ ಖುಲಾಸೆಯಾದರೆ ಶಿಸ್ತು ಪ್ರಾಧಿಕಾರಿಯು ತನ್ನ ಆದೇಶವನ್ನು ಪರಿಷ್ಕರಿಸಿ, ಸರ್ಕಾರಿ ನೌಕರನನ್ನು ಪುನಃ ಸೇವೆಗೆ ತೆಗೆದುಕೊಂಡಲ್ಲಿ ಆತನು ಸೇವೆಯಲ್ಲಿ ಮುಂದುವರೆದಿದ್ದರೆ ಅರ್ಹನಾಗಿರುತ್ತಿದ್ದಂತಹ ಎಲ್ಲಾ ಸೌಲಭ್ಯಗಳಿಗೂ ಹಕ್ಕುಳ್ಳವನಾಗುತ್ತಾನೆ ಎಂದು ತಿಳಿಸಲಾಗಿದೆ. ಒಂದು ವೇಳೆ ಒಬ್ಬ ಸರ್ಕಾರಿ ನೌಕರನನ್ನು ಪುನಃ ಸೇವೆಗೆ ತೆಗೆದುಕೊಂಡಲ್ಲಿ, ಆತ ವಜಾ ಆದ ದಿನಾಂಕದಿಂದ ಮತ್ತೆ ಸೇವೆಗೆ ತೆಗೆದುಕೊಂಡ ದಿನಾಂಕದವರೆಗೆ ಬಾಕಿ ವೇತನ, ವೇತನ ಬಡ್ತಿ, ಸೇವೆ, ಪಿಂಚಣಿ, ಇತ್ಯಾದಿ ಸೌಲಭ್ಯಗಳಿಗೆ ಅವನು ಸ್ವಯಂಚಾಲಿತವಾಗಿ ಅರ್ಹನಾಗಿರುವುದಿಲ್ಲ ಮತ್ತು ಈ ಕುರಿತು ಮಾನ್ಯ ಸರ್ವೋಚ್ಛ ನ್ಯಾಯಾಲಯವು Ranchhodji Chaturji thakore Vs

Superintendent Engineer, Gujarath Electricity Board and another (1997 (1) SLR 14) ಉದ್ಧರಿಸಲಾಗಿದೆ. ಮೇಲೆ ಹೇಳಲಾದ ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ರೀತಿ ಹೇಳಿದೆ.

"The re-instatement of the petitioner into the service has already been ordered by the High Court. The only question is whether he is entitled to backwages ? It was his conduct of involving himself in the crime, that was taken into account for his not being in services of the respondent. Consequent upon his acquittal, is entitled to re-instatement for the reason that his service was terminated on the basis of the conviction by operation of proviso to the statutory rules applicable to the situation. The question of back wages would be considered only-if the respondents have taken action by way of disciplinary proceedings and the action was found to be unsustainable in law and he was unlawfully prevented from discharging the duties. In that context, his conducts becomes relevant. Each case requires to be considered in its own backdrops. In this case, since the petitioner had involved himself in a crime, though he was latter acquitted, he had disabled himself from rendering the service on account of conviction and incarceration in jail. Under these circumstances, the petitioner is not entitled to payment of back wages. The learned single judge and the division bench have not committed any error of law warranting interference."

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲೆ ಉದ್ಧರಿಸಿದ ತೀರ್ಪುಗಳಂತೆ ಪ್ರತಿಯೊಂದು ಪ್ರಕರಣಕ್ಕೆ ಸಂಬಂಧಿಸಿದ ಸಂದರ್ಭ ಹಾಗೂ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಕ್ರಿಮಿನಲ್ ನ್ಯಾಯಾಲಯವು ನೀಡಿದ ಬಿಡುಗಡೆಯ ತೀರ್ಪು ಗೌರವಾನ್ವಿತ ಬಿಡುಗಡೆಯೇ ? ಎಂದು ಪರಿಗಣಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜೆ. ನಂಜುಂಡೇಶ್ವರ ಇವರ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ಬಿಡುಗಡೆಯ ತೀರ್ಪನ್ನು ಪರಿಶೀಲಿಸಲಾಗಿ ಅದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲೆ ಹೇಳಲಾದ ಎಲ್ಲಾ ತೀರ್ಪುಗಳ ತತ್ವಾಂಶಗಳ ಹಿನ್ನೆಲೆಯಲ್ಲಿ ಗೌರವಾನ್ವಿತ ಬಿಡುಗಡೆ ಎಂದು ಹೇಳಲಾಗುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 22 ಸೇಇವಿ 2001, ದಿನಾಂಕ : 5–7–2002ರ ಪ್ರಕಾರ ಸದರಿ ಸುತ್ತೋಲೆಯ ಕಂಡಿಕೆ 4 ರಲ್ಲಿ **"**ಒಂದು ವೇಳೆ ಒಬ್ಬ ಸರ್ಕಾರಿ ನೌಕರನನ್ನು ಪುನಃ ಸೇವೆಗೆ ತೆಗೆದುಕೊಂಡಲ್ಲಿ ವಜಾ ಆದ ದಿನಾಂಕದಿಂದ ಮತ್ತೆ ಸೇವೆಗೆ ತೆಗೆದುಕೊಂಡ ದಿನಾಂಕದವರೆಗೆ ಬಾಕಿ ವೇತನ, ಬಡ್ತಿ, ಸೇವೆ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಅವನು ಸ್ವಯಂಚಾಲಿತವಾಗಿ (automatically) ಅರ್ಹನಾಗುವುದಿಲ್ಲ. ಸರ್ವೋಚ್ಚ ನ್ಯಾಯಾಲಯ, ಅದರ ಮೇಲೆ ಉದ್ಧರಿಸಿದ ತೀರ್ಪಿನಲ್ಲಿ ಸೂಚಿಸಿದಂತೆ, ಪ್ರತಿಯೊಂದು ಪ್ರಕರಣಕ್ಕೆ ಸಂಬಂಧಿಸಿದ ಸಂದರ್ಭ ಹಾಗೂ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಬಾಕಿ ವೇತನ ಇತ್ಯಾದಿ ಪಡೆಯಲು ಅವನು ಅರ್ಹನೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಪರಿಶೀಲಿಸಿ ತೀರ್ಮಾನಿಸಬೇಕಾಗುತ್ತದೆ. ಉದಾಹರಣೆಗೆ, ಸರ್ವೋಚ್ಚ ನ್ಯಾಯಾಲಯ, ಅದರ ಮೇಲೆ ಉದ್ಧರಿಸಿದ ತೀರ್ಪಿನಲ್ಲಿ ಉಲ್ಲೇಖಿಸಿದಂತಹ ಪ್ರಕರಣಗಳಲ್ಲ, ಅಂತಹ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ**"**.

ಶ್ರೀ ಜೆ. ನಂಜುಂಡೇಶ್ವರ ಇವರನ್ನು ಉಚ್ಚ ನ್ಯಾಯಾಲಯ ಬಿಡುಗಡೆ ಆದೇಶಿಸಿದ ತೀರ್ಪು Hon'ble acquittal ಅಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯ ನೀಡಿರುವುದರಿಂದ ಶ್ರೀ ಜೆ. ನಂಜುಂಡೇಶ್ವರ ಇವರನ್ನು ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 20 ಎಡಿಇ 2005, ದಿನಾಂಕ : 22–9–2006 ರಲ್ಲಿ ಸೇವೆಯಿಂದ ತೆಗೆದುಹಾಕಿದ ದಿನಾಂಕದಿಂದ ಇವರನ್ನು ಸೇವೆಗೆ ಪುನರ್ ಸ್ಥಾಪಿಸಿದ ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 575 ಎಎಸ್‌ಡಿ 2009, ದಿನಾಂಕ : 21–7–2010 ರವರೆಗಿನ ಅವಧಿಗೆ ಬಾಕಿ ವೇತನ, ವೇತನ ಬಡ್ತಿ, ಸೇವೆ, ಪಿಂಚಣಿ ಮತ್ತು ಇತರೆ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲವೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 575 ಎಎಸ್‌ಡಿ 2009, ಬೆಂಗಳೂರು, ದಿನಾಂಕ : 08–02–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಜೆ. ನಂಜುಂಡೇಶ್ವರ, ಹಿಂದಿನ ತಹಶೀಲ್ದಾರ್, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಪ್ರಸ್ತುತ ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಇವರು ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 20 ಎಡಿಇ 2005, ದಿನಾಂಕ : 22–9–2006 ರಲ್ಲಿ ಸೇವೆಯಿಂದ ತೆಗೆದುಹಾಕಿದ ದಿನಾಂಕದಿಂದ ಇವರನ್ನು ಸೇವೆಗೆ ಪುನರ್‌ಸ್ಥಾಪಿಸಿದ ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 575 ಎಎಸ್‌ಡಿ 2009, ದಿನಾಂಕ : 21–7–2010ರವರೆಗಿನ ಅವಧಿಗೆ ಬಾಕಿ ವೇತನ, ವೇತನ ಬಡ್ತಿ, ಸೇವೆ, ಪಿಂಚಣಿ ಮತ್ತು ಇತರೆ ಇತ್ಯಾದಿ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲವೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಪಿ. ಆರ್. 508

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ರಾಜ್ಯ ವಕೀಲರ ಸಂಘಗಳಿಗೆ ಇ–ಗ್ರಂಥಾಲಯವನ್ನು ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :

1) 2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೂ. 1.00 ಕೋಟಿಗಳನ್ನು ರಾಜ್ಯ ನ್ಯಾಯಾಲಯಗಳಲ್ಲಿ ಡಿಜಿಟಲ್ ಲೈಬ್ರರಿಗಳ ಸೌಲಭ್ಯಗಳನ್ನು ಒದಗಿಸುವುದಾಗಿ ಘೋಷಿಸಿರುತ್ತಾರೆ.
2) ದಿನಾಂಕ 02–12–2010ರಂದು ಪ್ರಧಾನ ಕಾರ್ಯದರ್ಶಿ, ಸಿಆಸುಇ (ಇ–ಆಡಳಿತ), ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನೆ ಸಮಿತಿ ಸಭೆಯ ನಡವಳಿಗಳು.
3) ಸರ್ಕಾರದ ಪತ್ರ ಸಂಖ್ಯೆ: ಆಇ 69 ವೆಚ್ಚ–10/2011, ದಿನಾಂಕ 15–02–2011

ಪ್ರಸ್ತಾವನೆ :

2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೂ. 1.00 ಕೋಟಿಗಳನ್ನು ರಾಜ್ಯದ ನ್ಯಾಯಾಲಯಗಳಲ್ಲಿ ಡಿಜಿಟಲ್ ಲೈಬ್ರರಿ ಸೌಲಭ್ಯಗಳನ್ನು ಒದಗಿಸುವುದಾಗಿ ಘೋಷಿಸಿರುತ್ತಾರೆ. ಯೋಜನಾ ಕಾರ್ಯಕ್ರಮಗಳ ಅಡಿ ಒದಗಿಸಿರುವ ಹಣವನ್ನು ಯೋಜನೇತರ ಲೆಕ್ಕ

ಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಲೆಕ್ಕ ಶೀರ್ಷಿಕೆ "2014–0–800–01–05"ರ ಅಡಿಯಲ್ಲಿ ಒದಗಿಸಿರುವ ರೂ. 100.00 ಲಕ್ಷಗಳನ್ನು ಕೋರ್ಟ್‌ಗಳಲ್ಲಿ ಡಿಜಿಟಲ್ ಲೈಬ್ರರಿಯನ್ನು ಸ್ಥಾಪಿಸಲು ಯೋಜನಾ ಇಲಾಖೆಯು ಸಹಮತಿಸಿರುತ್ತದೆ.

ನ್ಯಾಯಾಲಯಗಳಿಗೆ ಡಿಜಿಟಲ್ ಲೈಬ್ರರಿಗಳನ್ನು ಒದಗಿಸಲು ಲೆಕ್ಕ ಶೀರ್ಷಿಕೆ "2014–00–800–1–05"ರ object head "059–ಇತರೆ ಖರ್ಚು"ರಡಿ ಒದಗಿಸಲಾಗಿದ್ದ ಅನುದಾನವನ್ನು object head "101–ಸಹಾಯಾನುದಾನ"ರಡಿಗೆ ಮರುಹಂಚಿಕೆ ಮಾಡಿ ತಿದ್ದುಪಡಿ ಆದೇಶವನ್ನು ಖಜಾನೆ ನಿರ್ದೇಶನಾಲಯಕ್ಕೆ ಕಳುಹಿಸಲಾಗಿದೆ. ಆದ್ದರಿಂದ ವಕೀಲರ ಸಂಘಗಳಿಗೆ ಇ–ಗ್ರಂಥಾಲಯವನ್ನು ಸ್ಥಾಪಿಸಲು ಏಕಬಾರಿಯ ಅನುದಾನವಾಗಿ ರೂ. 100.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ "2014–00–800–1–05–101" ರಿಂದ ಬಿಡುಗಡೆ ಮಾಡಲು ಸಹಮತಿಸಿರುವುದಾಗಿ ಮೇಲೆ ಓದಲಾದ ದಿನಾಂಕ 15–02–2011ರ ಪತ್ರದಲ್ಲಿ ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

ವಕೀಲರ ಸಂಘಗಳಿಗೆ ಇ–ಗ್ರಂಥಾಲಯವನ್ನು ಸ್ಥಾಪಿಸಲು ಏಕಬಾರಿಯ ಅನುದಾನವಾಗಿ ಬಿಡುಗಡೆ ಮಾಡಲು ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಲಾ 96 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ: 21–02–2011

ಮೇಲೆ ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2010–11ನೇ ಸಾಲಿನಲ್ಲಿ ರಾಜ್ಯದ ವಕೀಲರ ಸಂಘಗಳಿಗೆ ಇ–ಗ್ರಂಥಾಲಯವನ್ನು ಸ್ಥಾಪಿಸಲು ಏಕಬಾರಿಯ ಅನುದಾನವಾಗಿ ರೂ. 100.00 ಲಕ್ಷಗಳನ್ನು (ರೂ. ನೂರು ಲಕ್ಷಗಳು) ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಅ.ಟಿ.ಸಂಖ್ಯೆ: ಪಿಡಿ 5 ಎಂಸಿಎಂ 2010, ದಿನಾಂಕ 24–01–2011 ಹಾಗೂ ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ: ಆಇ 55 ವೆಚ್ಚ–10/2011, ದಿನಾಂಕ 15–02–2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಎಂ. ಹೂಗಾರ್
ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. ನಂ. 554

ವಸತಿ ಸಚಿವಾಲಯ

ವಿಷಯ : ಕೇಂದ್ರ ಪುರಸ್ಕೃತ ನರ್ಮ್ ಯೋಜನೆಯ ಐಹೆಚ್‌ಎಸ್‌ಡಿಪಿ ಯೋಜನೆ–ರಾಜ್ಯ ಸರ್ಕಾರದ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ : ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಇವರ ಪತ್ರಗಳ ಸಂಖ್ಯೆ:ಕಕೊನಿಮ/ ಲೆ.ಪ.ಶಾ.ನರ್ಮ್/JNNURM-IHSDP/2010–11, ದಿನಾಂಕ 16–12–2010.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಕೊಳಗೇರಿ ಅಭಿವೃದ್ಧಿ ಮಂಡಳಿ ಇವರ ಪತ್ರದಲ್ಲಿ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ (IHSDP) ರಾಜ್ಯಾದ್ಯಂತ ವಿವಿಧ 25 ನಗರ ಪಟ್ಟಣಗಳಲ್ಲಿ ಮನೆಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಈಗಾಗಲೇ ಬಿಡುಗಡೆಯಾಗಿರುವ ಅನುದಾನಕ್ಕೆ ಸಮಾನಾಂತರವಾಗಿ ಬಿಡುಗಡೆಯಾಗಬೇಕಾದ ಹಂತ–1 (25 ನಗರ : ಪಟ್ಟಣ) ಹಂತ–2 (9 ನಗರ : ಪಟ್ಟಣ)ಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವಂತಿಗೆ ₹3504.32 ಲಕ್ಷಗಳನ್ನು 2010–2011ನೇ ಸಾಲಿನ ಪೂರಕ ಆಯವ್ಯಯದಲ್ಲಿ ನಿಗದಿಪಡಿಸಿ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆ 2217–04–191–2–03 (IHSDP) ಅಡಿಯಲ್ಲಿ ಮಂಡಳಿಗೆ ಬಿಡುಗಡೆ ಮಾಡಬೇಕೆಂದು ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಇ 12 ಕೊಮಂಲೆ 2009, ಬೆಂಗಳೂರು, ದಿನಾಂಕ: 22–02–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕೈಗೊಂಡಿರುವ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (ಐಹೆಚ್‌ಎಸ್‌ಡಿಪಿ) ಯೋಜನೆಯಡಿಯ ಮನೆಗಳ ಹೆಚ್ಚುವರಿ ಘಟಕ ವೆಚ್ಚ ಬಾಬ್ತು ರಾಜ್ಯಸರ್ಕಾರದ ಪಾಲಿನ ಅನುದಾನವನ್ನು 2010–11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2217–04–191–2–03 (ಐಹೆಚ್‌ಎಸ್‌ಡಿಪಿ)ಯಡಿ ಪೂರಕ ಅಂದಾಜು–IIರಲ್ಲಿ ಒದಗಿಸಿರುವ ₹3503.43 ಲಕ್ಷಗಳ ಅನುದಾನದಲ್ಲಿ ₹20.00 ಕೋಟಿ (ಇಪ್ಪತ್ತು ಕೋಟಿ ರೂ.ಗಳು ಮಾತ್ರ) ಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ಕಾಲಕಾಲಕ್ಕೆ ಕೇಂದ್ರದಿಂದ ಹೊರಡಿಸುವ ಸೂಚನೆ, ಮಾರ್ಗಸೂಚನೆ, ಕೇಂದ್ರ ಸಿಎಸ್‌ಸಿ ಸಭೆಯ ನಡವಳಿಯಲ್ಲಿ ನೀಡಿರುವ ಸೂಚನೆ, ಎಸ್‌ಎಲ್‌ಇಸಿ (ಐಹೆಚ್‌ಎಸ್‌ಡಿಪಿ) ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಕೆಳಕಂಡ ಷರತ್ತುಗಳನ್ನು ಪಾಲಿಸಬೇಕೆಂದು ಸೂಚಿಸಲಾಗಿದೆ.

1. ಈ ಮೊತ್ತವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು
2. ಫಲಾನುಭವಿಗಳಿಂದ ವಂತಿಕೆಯು ನಿಯಮಿತವಾಗಿ ಪಾವತಿಯಾಗುವಂತೆ ಕ್ರಮ ವಹಿಸತಕ್ಕದ್ದು
3. ಯೋಜನೆಯ ಅನುಷ್ಠಾನದ ಹಂತದ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ರಾಜ್ಯ ಸರ್ಕಾರಕ್ಕೆ/ಕೇಂದ್ರ ಸರ್ಕಾರಕ್ಕೆ ನೀಡತಕ್ಕದ್ದು.
4. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು
5. ಸರ್ಕಾರಕ್ಕೆ ಆಡಿಟ್ ವರದಿಯನ್ನು ನಿಗದಿತ ಸಮಯಕ್ಕೆ ಸಲ್ಲಿಸತಕ್ಕದ್ದು

6. ನಿಗದಿತ ಅವಧಿಯೊಳಗೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು
7. ಈ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿರುವ ಮೊತ್ತವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ, ವಸತಿ ಇಲಾಖೆಯ ಉಪ ಕಾರ್ಯದರ್ಶಿಯವರ ಮೇಲು ಸಹಿ ಪಡೆದ ನಂತರ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಎಫ್‌ಡಿ 842 ವೆಚ್ಚ–9/2010, ದಿನಾಂಕ 15–02–2011ರ ಸೂಚನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ. ಆರ್. ನಾಗರಾಜ
ಪೀಠಾಧಿಕಾರಿ–4
ವಸತಿ ಇಲಾಖೆ

ಪಿ.ಆರ್. ನಂ. 555

ಇಂಧನ ಸಚಿವಾಲಯ

ವಿಷಯ : ಮೆ॥ ಕಾರ್ಪೊರೇಟ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ 18.00 ಮೆಗಾ ವ್ಯಾಟ್ ಸಾಮರ್ಥ್ಯದ ದುರ್ಗದಹಳ್ಳ ಕಿರು ಜಲ ವಿದ್ಯುತ್ ಯೋಜನೆಗಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಡಿಇ 109 ಎನ್‌ಸಿಇ 2000 (3) ದಿನಾಂಕ 12–1–2001
2) ಸರ್ಕಾರಿ ಆದೇಶ ಸಂಖ್ಯೆ: ಡಿಇ 273 ಎನ್‌ಸಿಇ 2004, ದಿನಾಂಕ 17–8–2004
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 370 ಎನ್‌ಸಿಇ 2007, ದಿನಾಂಕ 15–10–2007
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್‌ಪಿ/08/2029, ದಿನಾಂಕ 02/03–12–2008.
5) ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 513 ಎನ್‌ಸಿಇ 2008, ದಿನಾಂಕ 27–12–2008.
6) ಅಭಿವೃದ್ಧಿದಾರರ ಪತ್ರ ಸಂಖ್ಯೆ: ಡಿಎಂಹೆಚ್‌ಎಸ್–18/ಎಂಎಸ್/ಜಿಒವಿ/49/2008–09, ದಿನಾಂಕ 31–12–2008.
7) ಸರ್ಕಾರದ ಪತ್ರಗಳ ಸಂಖ್ಯೆ: ಇಎನ್ 513 ಎನ್‌ಸಿಇ 2008, ದಿನಾಂಕ 04–04–2009, 21–04–2009, 05–09–2009, 29–12–2009.
8) ಅಭಿವೃದ್ಧಿದಾರರ ಪತ್ರ ಸಂಖ್ಯೆ: ಡಿಎಂಹೆಚ್‌ಎಸ್/ಜಿಒವಿ/01/10–11, ದಿನಾಂಕ 26–08–2010.
9) ಸರ್ಕಾರದ ಪತ್ರ ಸಂಖ್ಯೆ: ಇಎನ್ 384 ಎನ್‌ಸಿಇ 2010, ದಿನಾಂಕ 09–09–2010
10) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್–61/ದುರ್ಗದಹಳ್ಳ/2926, ದಿನಾಂಕ 18–10–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಕಾರ್ಪೊರೇಟ್ ಸೆಕ್ಯೂರಿಟಿಸ್ ಅಂಡ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಚಾಮುಂಡಿ ಗ್ರಾಮದ ಬಳಿ ದುರ್ಗದಹಳ್ಳ ನದಿಗೆ ಅಡ್ಡಲಾಗಿ 18.00 ಮೆಗಾ ವ್ಯಾಟ್ ಸಾಮರ್ಥ್ಯದ ದುರ್ಗದಹಳ್ಳ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಕಾರ್ಪೊರೇಟ್ ಸೆಕ್ಯೂರಿಟಿಸ್ ಅಂಡ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರನ್ನು ಮೆ॥ ಕಾರ್ಪೊರೇಟ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ 18.00 ಮೆಗಾ ವ್ಯಾಟ್ ಸಾಮರ್ಥ್ಯದ ದುರ್ಗದಹಳ್ಳ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 15–10–2007 ರಿಂದ ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆ॥ ಕಾರ್ಪೊರೇಟ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆ॥ ಕಾರ್ಪೊರೇಟ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಗೆ ನೋಟೀಸನ್ನು ಕಳುಹಿಸಿದ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಅಭಿವೃದ್ಧಿದಾರರ ಪತ್ರದಲ್ಲಿ ಕೆ.ಆರ್.ಇ.ಡಿ.ಎಲ್. ನಿಂದ ಯೋಜನೆಯ ತಾಂತ್ರಿಕ ಅನುಮೋದನೆ ಹಾಗೂ ಅರಣ್ಯ ಇಲಾಖೆಯ ಅನುಮೋದನೆಗಾಗಿ ನಿರೀಕ್ಷಿಸಲಾಗುತ್ತಿದೆ ಎಂದು ತಿಳಿಸಿ, ಕಾರಣ ಕೇಳುವ ನೋಟೀಸು ಜಾರಿ ಮಾಡಿರುವುದು ಸಿಂಧುವಲ್ಲವೆಂದು ತಿಳಿಸಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಸರ್ಕಾರದ ಪತ್ರಗಳೊಂದಿಗೆ ಅಭಿವೃದ್ಧಿದಾರರ ಪತ್ರದಲ್ಲಿನ ಅಂಶಗಳ ಮೇಲೆ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ನೀಡುವಂತೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಪತ್ರದಲ್ಲಿ ಅಭಿವೃದ್ಧಿದಾರರು ಈ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 14–10–2010 ರಿಂದ ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಲು ಕೋರಿರುತ್ತಾರೆ. ಈ ಬಗ್ಗೆ ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಸರ್ಕಾರದ ಪತ್ರದಲ್ಲಿ ಕೆ.ಆರ್.ಇ.ಡಿ.ಎಲ್.ನ ಅಭಿಪ್ರಾಯದೊಂದಿಗಿನ ವರದಿಯನ್ನು ನೀಡುವಂತೆ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (10)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ॥ ಕಾರ್ಪೊರೇಟ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯು ಅರಣ್ಯ ಇಲಾಖೆ ಅನುಮತಿ ಕೋರಿ 2008ರಂದು ಪತ್ರ ಬರೆದಿರುತ್ತಾರೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಇವ್ಯಾಕುವೇಷನ್ ಅನುಮೋದನೆ ಪಡೆದಿರುತ್ತಾರೆ. ನೀರಾವರಿ ಇಲಾಖೆಯಿಂದ ಅನುಮತಿ ದೊರಕಿಸಿಕೊಂಡಿರುತ್ತಾರೆಂದು ತಿಳಿಸುತ್ತಾ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 15–10–2010 ರಿಂದ 14–10–2011 ರವರೆಗೆ ಕಾಲಾವಕಾಶ ವಿಸ್ತರಣೆ ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಡಿ.ಪಿ.ಆರ್. ಸಂಸ್ಕರಣಾ ಶುಲ್ಕವನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಪಾವತಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ವಿಸ್ತರಿಸಲು ಸರ್ಕಾರಕ್ಕೆ ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಶಿಫಾರಸ್ಸನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 384 ಎನ್‌ಸಿಇ 2010, ಬೆಂಗಳೂರು, ದಿನಾಂಕ: 22–02–2011

ಮೆ॥ ಕಾರ್ಪೊರೇಟ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಚಾಮುಂಡಿ ಗ್ರಾಮದ ಬಳಿ ದುರ್ಗದಹಳ್ಳ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 18.00 ಮೆಗಾ ವ್ಯಾಟ್ ಸಾಮರ್ಥ್ಯದ ದುರ್ಗದಹಳ್ಳ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ದಿನಾಂಕ 14–10–2011ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಅಭಿವೃದ್ಧಿದಾರರು ಈ ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಡಿ.ಪಿ.ಆರ್. ಸಂಸ್ಕರಣಾ ಶುಲ್ಕವನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಪಾವತಿಸತಕ್ಕದ್ದು.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. ನಂ. 556

ಇಂಧನ ಸಚಿವಾಲಯ

ವಿಷಯ : ಮೆ॥ ಜಮಖಂಡಿ ಶುಗರ್ಸ್ ಲಿಮಿಟೆಡ್ ಇವರಿಗೆ 27 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ.

ಓದಲಾಗಿದೆ : ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/04/ಜೆಎಸ್‌ಎಲ್/2009/3423, ದಿನಾಂಕ 18–12–2010.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಜಮಖಂಡಿ ಶುಗರ್ಸ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ನಾಡ್ ಕೆಡಿ ಗ್ರಾಮದಲ್ಲಿ 27 MW (Gross), 5.6 MW auxillary and captive consumption ಮತ್ತು 21.4 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 496 ಎನ್‌ಸಿಇ 2010, ಬೆಂಗಳೂರು, ದಿನಾಂಕ: 21–02–2011

ಮೆ॥ ಜಮಖಂಡಿ ಶುಗರ್ಸ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ನಾಡ್ ಕೆಡಿ ಗ್ರಾಮದಲ್ಲಿ 27 MW (Gross), 5.6 MW auxillary and captive consumption ಮತ್ತು 21.4 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗೊಳಪಟ್ಟು ಸರ್ಕಾರದ ನಿರಾಕ್ಷೇಪಣೆಯನ್ನು ನೀಡಲಾಗಿದೆ.:–

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power to Karnataka Power Transmission Corporation Limited.
3. The company shall obtain necessary statutory clearance wherever required from the respective Departments/Organizations such as Forest Department, Revenue Department & Karnataka State Pollution Control Board, etc., for both the Sugar Mill and the Power plant.
4. The detailed project report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. ನಂ. 557

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಂಗ ಅಧಿಕಾರಿಗಳಿಗೆ Robe Allowance ಮಂಜೂರು ಮಾಡುವ ಬಗ್ಗೆ.

ಉಲ್ಲೇಖ : 1) ಸರ್ಕಾರಿ ಆದೇಶ ಸಂಖ್ಯೆ: ಲಾ 147 ಎಲ್ಎಸಿ 2009, ದಿನಾಂಕ 13–10–2010

2) ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 4341 ಸೆಲೆಪ 2010–11, ದಿನಾಂಕ 3–1–2011

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ನ್ಯಾಯಾಂಗ ಇಲಾಖೆಗೆ ಸೇರಿದ ಅಧಿಕಾರಿಗಳಿಗೆ (ಜ್ಯುಡಿಷಿಯಲ್ ಆಫೀಸರ್ಸ್) ಮೂರು (3) ವರ್ಷಗಳಿಗೊಮ್ಮೆ ರೂ. 6,000–00 ರಂತೆ Robe Allowance ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಂಗ ಅಧಿಕಾರಿಗಳಿಗೆ Robe Allowance ಮಂಜೂರು ಮಾಡುವ ಬಗ್ಗೆ ಮಂಜೂರಾತಿ ಆದೇಶವನ್ನು ಹೊರಡಿಸಬೇಕೆಂದು ಮೇಲೆ (2)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸಿಆಸುಇ (ಲೆಕ್ಕಪತ್ರ ಐಆರ್ಎಲ್ಎ) ಶಾಖೆಯು ಕೋರಿರುತ್ತದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 89 ಸಅಸೇ 2011, ಬೆಂಗಳೂರು, ದಿನಾಂಕ: 23–02–2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ನ್ಯಾಯಾಂಗ ಅಧಿಕಾರಿಗಳಿಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಬ್ಲಾಕ್ ಅವಧಿಗೆ ಮೂರು ವರ್ಷಗಳಿಗೊಮ್ಮೆ ನೀಡಬೇಕಾದ ರೂ. 6,000/– ರಂತೆ (ರೂಪಾಯಿ ಆರು ಸಾವಿರಗಳು ಮಾತ್ರ) Robe Allowance ಅನ್ನು ಮಂಜೂರು ಮಾಡಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಪದನಾಮ	ಬ್ಲಾಕ್ ಅವಧಿ
1	ಶ್ರೀ ಸುಖದೇವ ಎಂ. ನಾಯಕ, ಸರ್ಕಾರದ ಅಪರ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	2009–11
2	ಶ್ರೀ ಎಂ. ಮಹದೇವಯ್ಯ, ಸರ್ಕಾರದ ಉಪ ಕಾರ್ಯದರ್ಶಿ (ಅಭಿಪ್ರಾಯ–4) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	2009–11
3	ಶ್ರೀ ಮಹಮ್ಮದ್ ಇಸ್ಮಾಯಿಲ್, ಸರ್ಕಾರದ ಉಪ ಕಾರ್ಯದರ್ಶಿ (ಅಭಿಪ್ರಾಯ–1) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	2009–11
4	ಶ್ರೀಮತಿ ಪ್ರಶೀಲ ಕುಮಾರಿ, ಸರ್ಕಾರದ ಉಪ ಕಾರ್ಯದರ್ಶಿ (ಅಭಿಪ್ರಾಯ–2) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	2009–11
5	ಶ್ರೀ ಶ್ರೀಧರ ಗೋಪಾಲಕೃಷ್ಣ ಭಟ್, ಸರ್ಕಾರದ ಅಧೀನ ಕಾರ್ಯದರ್ಶಿ (ವ್ಯಾಜ್ಯ–7) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	2009–11

ಈ ವೆಚ್ಚವನ್ನು ಸಚಿವಾಲಯಕ್ಕೆ ಸಂಬಂಧಿಸಿದ Salary Head Other Allowances ನಿಂದ ಭರಿಸತಕ್ಕದು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ. ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 558 ಸಿ.ಆ.ಸು. ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಹೊರರಾಜ್ಯದ ಛತ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಮಂಜೂರು ಮಾಡುವ ಕುರಿತು.

ಓದಲಾಗಿದೆ : ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ: ಎಡಿಎಂ 6 ಸಿಆರ್ 14/09–10, ದಿನಾಂಕ 15–09–2009, 22–03–2010, 25–09–2010.

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಛತ್ರ, ತಿರುಮಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವೇತನ ಶ್ರೇಣಿ ಪಡೆಯುತ್ತಿರುವ ಹಾಗೂ ಪಿಂಚಣಿಯುಕ್ತ ನೌಕರರಿಗೆ ಮನೆ ಬಾಡಿಗೆ ಭತ್ಯೆ ಪಾವತಿ ಮಾಡದೆ ಇದ್ದುದರಿಂದ ತಿರುಮಲದ ಕರ್ನಾಟಕ ರಾಜ್ಯ ಛತ್ರದಲ್ಲಿ ಲಭ್ಯವಿದ್ದ ವಸತಿ ಗೃಹಗಳನ್ನು ನೌಕರರಿಗೆ ವಾಸಕ್ಕಾಗಿ ನೀಡಲಾಗಿದ್ದು, ಉಳಿದಂತೆ ಖಾಲಿ ಸ್ಥಳದಲ್ಲಿ ಕೆಲವು ನೌಕರರು ಸುಮಾರು 20–25 ವರ್ಷಗಳ ಹಿಂದೆಯೇ ತಮ್ಮ ಸ್ವಂತ ವೆಚ್ಚದಲ್ಲಿ ತಾತ್ಕಾಲಿಕ ಕುಠೀರಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆಂದು, ಪ್ರಸ್ತುತ ಕರ್ನಾಟಕ ರಾಜ್ಯ ಛತ್ರದ ವಶದಲ್ಲಿದ್ದ 27 ಸೆಂಟ್ಸ್ ವಿಸ್ತೀರ್ಣದ ಜಮೀನನ್ನು ಟಿ.ಟಿ.ಡಿ. ಯವರಿಗೆ ರಸ್ತೆ ಅಗಲೀಕರಣ ಹಾಗೂ ಗ್ಯಾಲರಿ ನಿರ್ಮಾಣಕ್ಕಾಗಿ ಹಸ್ತಾಂತರಿಸಿರುವ ಹಿನ್ನೆಲೆಯಲ್ಲಿ ಶ್ರೀ ಕೃಷ್ಣರಾಜೇಂದ್ರ ಛತ್ರ ಹಾಗೂ ನೌಕರರ ತಾತ್ಕಾಲಿಕ ಕುಠೀರಗಳನ್ನು ಒದಗಿಸಲು, ವಸತಿ ಗೃಹಗಳು ಲಭ್ಯವಿರುವುದಿಲ್ಲವೆಂದು, ಅಲ್ಲದೆ ವಸತಿ ಗೃಹಗಳನ್ನು ನಿರ್ಮಿಸಲು ಸಾಕಷ್ಟು ಹಣ ವ್ಯಯವಾಗುವುದರಿಂದ ರಾಜ್ಯ ಛತ್ರದಲ್ಲಿ ತಾತ್ಕಾಲಿಕ ಕುಠೀರಗಳನ್ನು ಕಳೆದುಕೊಂಡ ನೌಕರರಿಗೆ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆಗಳನ್ನು ಆಂಧ್ರಪ್ರದೇಶದ ಸರ್ಕಾರದವರು ತಿರುಪತಿ ನಗರಕ್ಕೆ ನಿಗದಿಪಡಿಸಿರುವ ದರದಲ್ಲಿ ಪಾವತಿಸುವುದು ಸೂಕ್ತವೆಂದು, ಅದರಂತೆ ಅವುಗಳನ್ನು ಮಂಜೂರು ಮಾಡುವಂತೆ ರಾಜ್ಯ ಛತ್ರದ ವಿಶೇಷಾಧಿಕಾರಿಗಳು ಕೋರಿರುತ್ತಾರೆಂದು ತಿಳಿಸುತ್ತಾ, ಕರ್ನಾಟಕ ರಾಜ್ಯ ಛತ್ರ ತಿರುಮಲದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮಾತ್ರ ಮನೆ ಬಾಡಿಗೆ ಭತ್ಯೆ ಮತ್ತು ನಗರ

ಪರಿಹಾರ ಭತ್ಯೆ ನೀಡಿದಲ್ಲಿ ಉಳಿದ ಹೊರ ರಾಜ್ಯದ ಛತ್ರಗಳಲ್ಲಿ, ಅಂದರೆ ವಾರಣಾಸಿ, ಶ್ರೀಶೈಲಂ ಮತ್ತು ಮಂತ್ರಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಛತ್ರದ ನೌಕರರಿಗೂ ಸಹ ಈ ಸೌಲಭ್ಯ ನೀಡಬೇಕಾಗಿರುತ್ತದೆಯೆಂದು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಎಸ್‌ಆರ್‌ಐ 2009 ದಿನಾಂಕ 02–03–2009ರಂತೆ ಜನ ಸಂಖ್ಯೆಗೆ ಅನುಗುಣವಾಗಿ ಮೂಲ ವೇತನದ ಪ್ರಕಾರ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯ ದರಗಳು ಹಾಗೂ ವಾರ್ಷಿಕ ತಗಲುವ ಅಂದಾಜು ವೆಚ್ಚದ ವಿವರಗಳನ್ನು ಕೆಳಕಂಡಂತೆ ನೀಡುತ್ತಾ, ಹೊರ ರಾಜ್ಯ ಛತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಛತ್ರದ ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಮಂಜೂರು ಮಾಡುವಂತೆ ಧಾರ್ಮಿಕ ದತ್ತಿ ಆಯುಕ್ತರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕ್ರ.ಸಂ.	ನಗರ/ಪಟ್ಟಣಗಳ ವರ್ಗೀಕರಣ	ಮನೆ ಬಾಡಿಗೆ ಭತ್ಯೆ	ನಗರ ಪರಿಹಾರ ಭತ್ಯೆ	ವೆಚ್ಚದ ವಿವರಗಳು (₹ಗಳಲ್ಲಿ)
1	ತಿರುಮಲ–ಬಿ1	15%	ರೂ. 80	6,22,440/–
2	ವಾರಾಣಾಸಿ–ಬಿ1	15%	ರೂ. 80	18,300/–
3	ಶ್ರೀಶೈಲಂ–ಡಿ	6%	–	4,608/–
4	ಮಂತ್ರಾಲಯ–ಡಿ	6%	–	66,048/–

ಧಾರ್ಮಿಕ ದತ್ತಿ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 159 ಮುಸೇವಿ 2009, ಬೆಂಗಳೂರು, ದಿನಾಂಕ: 19–02–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಛತ್ರ, ತಿರುಪತಿ–ತಿರುಮಲದಲ್ಲಿ ಸರ್ಕಾರಿ ವೇತನಶ್ರೇಣಿ ಪಡೆದು ಕೆಲಸ ನಿರ್ವಹಿಸುತ್ತಿರುವ ಪಿಂಚಣಿಯುತ/ಪಿಂಚಣಿರಹಿತ ನೌಕರರಿಗೆ ಮೂಲ ವೇತನದ ಶೇ. 15 ರಂತೆ ಮನೆ ಬಾಡಿಗೆ ಭತ್ಯೆ ಮತ್ತು ₹80/–ರಂತೆ ನಗರ ಪರಿಹಾರ ಭತ್ಯೆಯನ್ನು ಸೆಪ್ಟೆಂಬರ್ 2009ನೇ ಸಾಲಿನಿಂದ ಅನ್ವಯವಾಗುವಂತೆ ಮಂಜೂರು ಮಾಡಿ ಆದೇಶಿಸಿದೆ.

ಸದರಿ ವೆಚ್ಚವನ್ನು ಛತ್ರದ ನಿಧಿಯಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್. ಎಸ್. ಶ್ರೀಕಂಠಬಾಬು

ಪೀಠಾಧಿಕಾರಿ

ಪಿ.ಆರ್. ನಂ. 559 ಕಂದಾಯ ಇಲಾಖೆ (ಮುಜರಾಯಿ)

COMMERCE & INDUSTRIES SECRETARIAT

Sub :- Reimbursement of Central Sales Tax paid on inter-state sale of metro coaches by M/s BEML Ltd., to Delhi Metro Rail Corporation-Reg.

Read :-
1. G.O. No. FD 283 CSL 2009, dated 8-12-2009
2. G.O. No. CI 430 SPI 2010, dated 20-09-2010
3. Letter Nos. AR-1/Metro/CST/09, dated 08-09-2010 and 05-10-2010. From Deputy General Manager (Finance Accounts) BEML, Bangalore
4. G.O. No. FD 176 BRS 2010, dated 18-12-2010

Preamble:-

In the Govt. Order read at (1) above, sanction was accorded for reimbursement of tax paid under the Central Sales Tax Act, 1956 by BEML, on its Inter-State sale of Metro coaches to Delhi Metro Rail Corporation.

In the G.O. read at (2) above, ₹46.88 crores was released towards reimbursement of central sales tax to BEML paid up to June 2010 as interest free loan to be converted into grant subsequently.

In the to letters read at (3) above, the Deputy General Manager (Finance & Accounts) BEML Ltd., Bangalore has sought reimbursement of ₹ 13.42,64,868/- to M/s BEML Ltd., Bangalore, towards the payment of CST paid on Inter-State sales made to Delhi Metro Rail Corporation for July 2010 and August 2010, duly attaching the copies of the sales tax paid certificates issued by the Commercial Taxes Dept.

In the G.O. read at (4) above, F.D. has released ₹ 10.31 crores as additional grant under Head of Account "6852-02-800-0-02-394(Plan)" towards reimbursement of Central Sales Tax to BEML as interest free loan to be converted into grant, subject to regularization through supplementary estimates before the close of financial year.

The proposals have been examined in detail and hence the following Order

Government Order No.: CI 430 SPI 2010, Bangalore, Dated 21-02-2011

For the reasons explained above, sanction is hereby accorded for the release of ₹ 13,42,64,868 (₹Thirteen crores forty two laks sixty four thousand eight hundred and sixty eight only) under the Head of A/c "6852-02-800-0-02" (plan) with objective code as 394 towards reimbursement of tax to BEML for the months of July 2010 and August 2010 to BEML as an interest free loan to be converted into grant subsequently.

The Deputy General Manager (Finance & Accounts), Bangalore Complex, BEML Ltd., is authorized to draw the amount on payee's receipt duly countersigned by Commissioner for Industrial Development and Director of Industries and Commerce Dept.

This order is issued with the concurrence of Finance Dept. vide its U.O. Note No. FD 1890 Exp-1/10, dated 20-12-2010.

By Order and in the name of the Governor of Karnataka

A.V. Srinivasa Dikshit

PR. No. 560 Desk Officer (Technical Cell)

Commerce & Industries Dept.

COMMERCE AND INDUSTRIES SECRETARIAT

Sub: Approval to the Project Proposal of M/s. Pacifica Hotels (Bangalore Project) Pvt. Ltd. to establish a "5 Star Hotel" at Roopena Agrahar, Near Silk Board Junction, Begur Hobli, Bangalore South Taluk, Bangalore Urban District.

Read: Proceedings of the 24th State High Level Clearance Committee (SHLCC) Meeting held on 24-01-2011.

Preamble:

M/s. Pacifica Hotels (Bangalore Project) Pvt. Ltd. proposes to establish a "5 Star Hotel" at Roopena Agrahar Near Silk Board Junction, Begur Hobli, Bangalore South Taluk, Bangalore Urban District, with an investment of Rs. 200 Crores, generating employment to about 383 persons.

In the 24th State High Level Clearance Committee (SHLCC) Meeting held on 24-01-2011, the proposal of the Company was discussed and approved.

Government has examined the recommendations made by the State High Level Clearance Committee in the 24th Meeting held on 24-01-2011, in all aspects.

Hence the following order.

Government Order No. CI 48 SPI 2011, Bangalore, Dated: 23-02-2011

Government is pleased to accord in principle approval to the Project proposal of M/s. Pacifica Hotels (Bangalore Project) Pvt. Ltd. to establish a "5 Star Hotel" at Roopena Agrahar, Near Silk Board Junction, Begur Hobli, Bangalore South Taluk, Bangalore Urban District, with an investment of Rs. 200 Crores, generating employment to about 383 persons and extend the following infrastructure facilities, incentives and concessions.

Infrastructure Facilities:

1. **Land:** 7633.97 sq. mtrs of land at Sy.No.19/1, 20/5 and 27/3 (ASN 20/5) as joint development in Roopena Agrahara, near Silk Board Junction, Begur Hobli, Bangalore South Taluk Bangalore Urban Distrtict.
2. **Water:** 239 KLPD to be supplied by BWSSB.
3. **Power:** 1848 KVA to be serviced by BESCOM.
4. **Incentives & Concessions** As per applicable Tourism Policy of the State

General Terms and Conditions:

1. **Environment:** The promoters to obtain CFE and CFO from KSPCB.
2. **Employment:** The company shall prepare a plan for development of Human Resources required for the project, train local people and provide employment to these trained local youth and comply with the provisions of industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the commissioner for I.D. & Director of Industries and Commerce for monitoring.
4. **Social Infrastructure Development:** The company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others:**
   a) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

PR No. 581

A.V. Srinivasa Dikshit
Desk Officer (Technical Cell)
Commerce & Industries Department

COMMERCE AND INDUSTRIES SECRETARIAT

Sub: Approval to the Project Proposal of M/s. Amtek Metal & Mining Ltd. establish a "Auto and Industrial Park and Foundry Complex with 0.9 Million Tonne Scrap Based Steel Plant (Electric Arc Furnace Route), 250 MW Thermal Captive Power Plant" in Bagalkot District.

Read: Proceedings of the 24th State High Level Clearance Committee (SHLCC) Meeting held on 24-02-2011.

Preamble:

M/s. Amtek Metal & Mining Ltd. proposes to establish a "Auto and Industrial Park and Foundry Complex with 0.9 Million Tonne Scrap Based Steel Plant (Electric Arc Furnace Route), 250 MW Thermal Captive Power Plant" in Bagalkot District, with an investment of Rs. 5000 Crores, generating employment to about 12000 persons.

In the 24th State High Level Clearance Committee (SHLCC) Meeting held on 24-02-2011, the proposal of the Company was discussed and approved.

Government has examined the recommendations made by the State High Level Clearance Committee in the 24th Meeting held on 24-02-2011, in all aspects.

Hence the following Order.

Government Order No. CI 507 SPI 2011, Bangalore, Dated: 24-02-2011

Government is pleased to accord in principle approval to the Project proposal of M/s. Amtek Metal & Mining Ltd. to establish a "Auto and Industrial Park and Foundry Complex with 0.9 Million Tonne Scrap Based Steel Plant (Electric Arc Furnace Route), 250 MW Thermal Captive Power Plant" in Bagalkot District. with an investment of Rs. 5000 Crores, generating employment to about 12000 persons and extend the following infrastructure facilities, incentives and concessions.

Infrastructure Facilities:

1. **Land:** 1000 acres of land to be identified by the company at a suitable location In Bagalkot. The company to bring consent of the land owners for acquisition by KIADB as SUC.
2. **Water:** 48000 KLPD from nearest source, Subject to approval of the Water Resources Department.
3. **Power:** 8000 KVA to be serviced by HESCOM.
4. **Incentives & Concessions** **As per applicable Industrial Policy of the State**

General Terms and Conditions:

1. **Environment:** The promoters to obtain CFE and CFO from KSPCB and environment clearance from MOEF, GOI.
2. **Employment:** The company shall prepare a plan for development of Human Resources required for the project, train local people and provide employment to these trained local youth and comply with the provisions of industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the commissioner for I.D. & Director of Industries and Commerce for monitoring.
4. **Social Infrastructure Development:** The company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others:**
   a) The project proponents shall provide employment to at least one member of the family of each land looser if the land is acquired through KIADB.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

PR No. 582

A.V. Srinivasa Dikshit
Desk Officer (Technical Cell)
Commerce & Industries Department

COMMERCE AND INDUSTRIES SECRETARIAT

Sub: Approval to the Project Proposal of M/s. Toyota Kirloskar Auto Parts Pvt. Ltd., to establish a unit for manufacturing "Automotive Transmissions" 240.00 units/annum & "engines" 1,08,000 units at Bidadi Industrial Area, Ramanagara District.

Read: Proceedings of the 24th State High Level Clearance Committee (SHLCC) Meeting held on 24-01-2011.

Preamble:

M/s Toyota Kirloskar Auto Parts Pvt. Ltd., proposes to establish a unit for manufacturing "Automotive Transmissions" 240.00 units/annum & "Engines" 1,08,000 units at Bidadi Industrial Area, Ramanagara District. with an investment of Rs. 500 Crores, generating employment to about 500 persons.

In the 24th State High Level Clearance Committee (SHLCC) Meeting held on 24-01-2011, the proposal of the Company was discussed and approved.

Government has examined the recommendations made by the State High Level Clearance Committee in the 24th Meeting held on 24-01-2011, in all aspects.

Hence the following Order.

Government Order No. CI 46 SPI 2011, Bangalore, Dated: 23-02-2011

Government is pleased to accord in principle approval to the Project proposal of M/s. Toyota Kirloskar Auto Parts Pvt. Ltd., to establish a unit for manufacturing "Automotive Transmissions" 240.00 units/annum & "Engines" 1,08,000 units at Bidadi Industrial Area, Ramanagara District. with an investment of Rs. 500 Crores, generating exmployment to about 500 persons and extend the following infrastructure facilities, incentives and concessions.

INFRASTRUCTURE FACILITIES:

1. **Land:** 17.29 acres land at Sy. No. 146/A1, 146/4B, 184/3B, 185/2B, 185/3, 186/1, 186/2 186/3, 187/IAI, 198/IB 187/IC, 187/ID/ 245/3, 145/5, 145/7 of Bandanooru Village, Bidadi Hobli Ramangara Taluk adjacent to the existing factory in Bidadi Industrial Area, Ramanagara District to be acquired and allotted by KIADB as SUC.
2. **Water:** 910 KLPD to be supplied by KIADB.
3. **Power:** 15680 KVA to be serviced by BESCOM.
4. **Incentives & Concessions** As per applicable Industrial Policy of the State

GENERAL TERMS AND CONDITIONS:

1. **Environment:** The promoters to obtain CFE and CFO from KSPCB.
2. **Employment:** The company shall prepare a plan for development of Human Resources required for the project, train local people and provide employment to these trained local youth and comply with the provisions of industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development:** Whereever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the commissioner for I.D. & Director of Industries and Commerce for monitoring.
4. **Social Infrastructure Development:** The company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others:**
   a) The project proponents shall provide employment to at least one member of the family of each land looser if the land is acquired through KIADB.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

PR No. 583

A.V. Srinivasa Dikshit
Desk Officer (Technical Cell)
Commerce & Industries Department